
# ಅಪರಂಜಿ

ತಿಳಿನಗೆಯ ಕಾರಂಜಿ

ಡಿಸೆಂಬರ್ 2022




ಭವಿಷ್ಯದ ಸಂದರ್ಶನಗಳು....

ಬಿಡಿ ಪ್ರತಿ: ರೂ. 10/-



# ಅಪರಂಜಿ

ತಿಳಿನಗೆಯ ಕಾರಂಜಿ

ಸಂಪುಟ 40
ಸಂಚಿಕೆ – 3
ಡಿಸೆಂಬರ್ - 2022

**ಸಂಪಾದಕ ಮಂಡಳಿ**

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಎಚ್.ಎನ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್
ಶ್ರೀ ವಿ. ಆರ್. ಭರತ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಪುಸ್ತಕ ಪರಿಚಯ | ಶಿವಕುಮಾರ್ | 5 |
| ಗುಂಡಿಗೆ ಬೀಳುವುದು | ಗಣೇಶ ಹೆಗಡೆ | 7 |
| ತುಂತುರು | ದಂನಆ | 10 |
| ಜೀವನ ರೂಪಿಸಿಕೊಂಡದ್ದು | ಎಚ್. ಗೋಪಾಲ ಕೃಷ್ಣ | 11 |
| ಗಾದೆ ಗುಡಾಣ | ಪ್ರಕಾಶ್ | 15 |
| ವೈದ್ಯರಾಜ ನಮಸ್ತುಭ್ಯಂ... | ಬೇಲೂರು ರಾಮಮೂರ್ತಿ | 16 |
| ಮದ್ಯಾಹ್ನದಲ್ಲಿ ಉದ್ಯಾನ | ಕೆ. ಎನ್. ಮಹಾಬಲ | 19 |
| ನನ್ನ ಚೆನ್ನೈ ಪ್ರವಾಸ | ಎಸ್. ಕೆ. ರಾಮಮೂರ್ತಿ | 22 |
| ಮೈಸೂರು ದಸರಾ ಸಡಗರ | ಜಿ.ವಿ. ನಿರ್ಮಲ | 25 |
| ಸಿಪಾಯಿ ರಾಮು | ಮಹಾಂತೇಶ ಬಾಗೇವಾಡೊ | 27 |
| ನನ್ನ ಹರ್ಪಿಸ್ ಪುರಾಣ | ಡಾ. ಸಿ.ಕೆ. ರೇಣುಕಾರ್ಯ | 30 |
| ಕ್ಷೌರ ಕರ್ಮದ ಪರಿಪಾಟಲು | ಸುಧಾ ಸರನೋಬತ್ | 32 |
| ಹೊಸ ಚಪ್ಪಲಿ ರಾದ್ಧಾಂತ | ಅರವಿಂದ ಜೋಷಿ. | 34 |
| ನಾಲ್ಕು ಸಣ್ಣ ಕಥೆಗಳು | ಕೆ. ಎಸ್. ಸೋಮೇಶ್ವರ | 36 |
| ಇಚಿಂಗ್ ಬಗ್ಗೆ ಬಿಚಿಂಗ್ | ನಳಿನಿ ಭೀಮಪ್ಪ | 39 |


**ವ್ಯಂಗ್ಯ ಚಿತ್ರಗಳು:**
ಆದರ್ಶ ಪೈ
ಹಾಗೂ ಇಂಟರ್ನೆಟ್ ಕೃಪೆ

*ಪ್ರಕಾಶಕರು:* ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. email: koravanjiaparanji@gmail.com ಮೊಬೈಲ್:9845264304

*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080-26688488. email: belururamamurthy@gmail.com

**For Online payment of subscription:** Name : KORAVANJI APARANJI TRUST
Current Account No.: 109804180000056, IFS Code : SVCB0000098
SVC Co-operative Bank Ltd., Branch: Malleshwaram
Please mail us your name and address if you are a new subscriber. Mail your subscriber ID if it is renewal. Our email ID: koravanjiaparanji@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*



# ಅಪರಂಜಿ ಕಿಡಿ

●ಪ್ರಕಾಶ್

ಹಿಂದೂ ಪರ್ಶಿಯನ್ ಪದ ;ಅದಕ್ಕೆ ಕೆಟ್ಟ ಅರ್ಥವಿದೆ – ಹೇಳಿಕೆ

**ಸರಿ, ಅರ್ಥವಿಲ್ಲದ  ಮಾತು ಅನರ್ಥಕ್ಕೆ ಎಡೆ ಮಾಡುತ್ತೆ**

****

ಟಿ 20 ಕ್ರಿಕೆಟ್; ಭಾರತಕ್ಕೆ ಹೀನಾಯ ಸೋಲು – ಕ್ರೀಡಾ ಸುದ್ದಿ

**ಈ ತೆರನ ಸುದ್ದಿ ಅನೂಚಾನವಾಗಿ ಕೇಳಿ ನಾವು ಸಂಕಟ ಪಡೆಯುವುದಿಲ್ಲ !!**

****

ಕೆಂಪೇಗೌಡ  ವಿಮಾನ ನಿಲ್ದಾಣದ ಎರಡನೇ
ವಿಮಾನ–ಮಾರ್ಗ ಲೋಕಾರ್ಪಣೆ –  ಸುದ್ದಿ

**ನಿರ್ಮಾಪಕರಿಗೆಲ್ಲ ಅಪರಂಜಿಯ ಧನ್ಯವಾದಗಳು !!**

****

ಹೆಸರಘಟ್ಟ ಹುಲ್ಲುಗಾವಲು ; ಆತಂಕ ಬೇಡ –   ಹೇಳಿಕೆ

**ಈ ತರಹ ಹೇಳಿಕೆಗಳಿಂದಲೇ ಆತಂಕ !!**

****

ಲಂಚದ ಆರೋಪ; ಬೆಸ್ಕಾಂ ಇಂಜಿನಿಯರ್ ಬಂಧನ !
– ದಿನ ಪತ್ರಿಕೆ

**ಷಾಕಿಂಗ್ ಸುದ್ದಿ ಅಂತ ಅಪರಂಜಿ ಬೆದರಿದಳಂತೆ !!**

****

ಕಾಂಗ್ರೆಸ್ ತರಬೇತಿ ಶಿಬಿರದಲ್ಲಿ  ಮಾರಾ ಮಾರಿ –   ಸುದ್ದಿ

**ಬಿ ಜೆ ಪಿ ಮುಖಂಡರಿಗೆ ಕಸಿವಿಸಿ ಆಗುತ್ತಿದೆಯೇನೋ  ಪಾಪ  !**

■

ನಮ್ಮ ನಿಮ್ಮಲ್ಲಿ

# ಅಪರಂಜಿಯ ಮುಡಿಗೆ ಎರಡು ಚಿನ್ನದ ಗರಿಗಳು

● ಶಿವಕುಮಾರ್

ಅಪರಂಜಿ ಬಳಗದ ಹಿರಿಯ ಸಾಹಿತಿಗಳೂ, ಪ್ರತಿಭಾನ್ವಿತ ನಗೆಗಾರರೂ ಆಗಿರುವ ಶ್ರೀಯುತ ಅ.ರಾ.ಮಿತ್ರ ಹಾಗೂ ಶ್ರೀಯುತ ಎಂ. ಕೃಷ್ಣೇಗೌಡ ಇವರಿಗೆ ಈ ರಾಜ್ಯೋತ್ಸವದಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು ಎಂಬ ಸುದ್ದಿ ಕೇಳಿ ಅಪರಂಜಿ ಹೆಮ್ಮೆಯಿಂದ ಬೀಗುತ್ತಿದ್ದಾಳೆ. ನಮ್ಮ ಬಳಗ ಈ ಹಿಂದೆ ನಡೆಸುತ್ತಿದ್ದ ಹಾಸ್ಯೋತ್ಸವಗಳ ಅಭೂತಪೂರ್ವ ಯಶಸ್ಸಿಗೆ ಈ ಈರ್ವರು ಕಾರಣಭೂತರಾಗಿದ್ದರು. ಮಿತ್ರರು 1994ರಲ್ಲಿ ಅಪರಂಜಿ ಕೈಗೊಂಡ ಹತ್ತು ವರುಷದ ಹಬ್ಬದಿಂದ ಮೊದಲುಗೊಂಡು ನಿರಂತರವಾಗಿ ಹಾಸ್ಯೋತ್ಸವಗಳ ನಿರ್ವಹಣಾ ಧುರೀಣತ್ವವನ್ನು ವಹಿಸಿಕೊಂಡಿದ್ದರು. ಅನಂತರ  ನಮ್ಮ ಬಳಗ ಸೇರಿದ ಶ್ರೀಯುತ ಕೃಷ್ಣೇಗೌಡರು ತಮ್ಮ ಮಾತಿನ ಚಳಕದಿಂದ ನೋಡುಗರ ಮನವನ್ನು ಸೂರೆಗೊಂಡರು.. ಈ ಇಬ್ಬರು ಮಹನೀಯರುಗಳಿಗೆ ಅಪರಂಜಿಯ ತುಂಬು ಹೃದಯದ ಅಭಿನಂದನೆಗಳು.

***

**ಪ್ರೊಫೆಸರ್ ಕೃಷ್ಣೇಗೌಡ**ರ ಪರಿಚಯ ನನಗಾದದ್ದು ಹಲವು ದಶಕಗಳ ಹಿಂದೆ ನಾವು ಹಾಸ್ಯೋತ್ಸವಗಳನ್ನು ನಡೆಸುತ್ತಿದ್ದ ಸಂದರ್ಭದಲ್ಲಿ. ಅವರ ಮೊದಲ ಭಾಷಣದಲ್ಲೇ ಅವರು ಜಾನಪದ ಗೀತೆಗಳನ್ನು ಹಾಡುವ ಸೊಗಸು ಕೇಳುಗರನ್ನು ಮಂತ್ರಮುಗ್ಧರನ್ನಾಗಿಸಿತು. ಅಣಕು ಕವಿತೆಗಳು ಮೈಸೂರಿನ ಭಾಗದ ಗ್ರಾಮ್ಯ ಕನ್ನಡದಲ್ಲಿ ಅವರು ಅಲ್ಲಿನ ಜನಜೀವನದ ಸೊಗಡನ್ನು ವಿವರಿಸುವ ರೀತಿ ತುಂಬಾ ಅಪ್ಯಾಯಮಾನವಾಗಿರುತ್ತಿತು.  ಪರಿಚಯವಾದಾಗಿನಿಂದಲೂ ಶ್ರೀಯುತರಿಗೆ ಅಪರಂಜಿಯ ಮೇಲೆ ತುಂಬ ಅಭಿಮಾನ. ಇಂದಿಗೂ ಯಾವುದೇ ಸಮಾರಂಭದಲ್ಲಿ ಮಾತನಾಡುವಾಗ ಕೃಷ್ಣೇಗೌಡರು ಅಪರಂಜಿಯ ನಂಟನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಇವರು ಹುಟ್ಟಿದ್ದು ಪಾಂಡವಪುರದಲ್ಲಿ. ಮೈಸೂರಿನ ಫಿಲೋಮಿನಾಸ್ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯನ್ನು ಪ್ರಾರಂಭಿಸಿ ಅಲ್ಲಿನ ಪ್ರಾಂಶುಪಾಲರಾಗಿ ನಿವೃತ್ತಿ ಹೊಂದಿದರು.

ಅರಳು ಹುರಿದಂತಹ ಮಾತು, ಮನವನ್ನು ಸೂರೆಗೊಳ್ಳುವ ಹಾಡುಗಾರಿಕೆ ಇವುಗಳಿಂದ ಶ್ರೀಯುತರು ಕನ್ನಡ ನಾಡಿನಲ್ಲಿ ತಮ್ಮದೇ ಆದ ಛಾಪನ್ನು ಬೀರಿದ್ದಾರೆ ಎಂದರೆ ಅದು ಅತಿಶಯೋಕ್ತಿಯಲ್ಲ. ಹಿರಿಯ ಸಾಹಿತಿ ಅ.ರಾ. ಮಿತ್ರರ ಬಗ್ಗೆ ಶ್ರೀಯುತ ಕೃಷ್ಣೇಗೌಡರಿಗೆ ಬಹುವಾದ ಗೌರವ, ಅಭಿಮಾನ. ಹಾಗಾಗಿ ಮಿತ್ರರ ಬಗ್ಗೆ ನಾಲ್ಕು ಮಾತುಗಳನ್ನು ಬರೆದುಕೊಡಿರೆಂದು ಕೇಳಿದಾಗ ಬಹು ಸಂತಸದಿಂದ ಒಡನೆಯೇ ಒಪ್ಪಿ ಬರೆದುಕೊಟ್ಟಿದ್ದಾರೆ. ಅಗತ್ಯವಾಗಿ ಓದಿ ಆನಂದಿಸಿ.

# ಅ.ರಾ.ಮಿತ್ರ

● **ಪ್ರೊ. ಕೃಷ್ಣೇಗೌಡ**

ಅಕ್ಕಿ ಹೆಬ್ಬಾಳು ರಾಮಣ್ಣ ಮಿತ್ರ, ಹ್ರಸ್ವಗೊಳಿಸಿ ಹೇಳಿದರೆ ಅ.ರಾ.ಮಿತ್ರ, ಅವರು ನನ್ನ ಗುರು ತಂದೆ, ವಾತ್ಸಲ್ಯದ ಹೊಳೆ, ಪ್ರೀತಿಯ ನಿಧಿ, ವಿದ್ವತ್ತಿನ ವಿಶಾಲ ವೃತ್ತ, ಸ್ನೇಹದ ಸುಮೇರು, ಅಧ್ಯಾಪನದ ಆದರ್ಶ, ಪ್ರಾಮಾಣಿಕತೆಯ ಪ್ರಮಾಣ....

ಈಗ ಕನ್ನಡ ನಾಡಿನಲ್ಲಿ 'ಹಾಸ್ಯೋತ್ಸವ' ಎಂಬುದೊಂದು ಅಲೆಯೆದ್ದಿದೆಯಲ್ಲ, ಆ ಅಲೆಯನ್ನು ಹುಟ್ಟಿಸಿದ್ದೇ ಅವರು ಮತ್ತು ಆ ಸಂಸ್ಥೆಗಳು ಹಾಸ್ಯವನ್ನು ಮನರಂಜನೆಗಷ್ಟೇ ನಿಲ್ಲಿಸದೆ, ಸಾಹಿತ್ಯ ಮತ್ತು ಸದಭಿರುಚಿಯ ಸ್ಪರ್ಶ ನೀಡಿದವರೇ ಅವರು. ಅದು ಒಂದು ಹಂತಕ್ಕೆ ತಲುಪಿದ ಮೇಲೆ ತಮ್ಮನ್ನು ತಾವೇ ಹಿನ್ನೂಕಿಕೊಂಡು ತಮ್ಮ ಎಂದಿನ ಸಾಹಿತ್ಯದ ಕಾಯಕದಲ್ಲಿ ಮಗ್ನರಾದವರೂ ಅವರೇ...

ಕನ್ನಡ ಅವರಿಗೆ ಏನು ಕೊಟ್ಟಿತೋ, ಅದಕ್ಕಿಂತ ಕನ್ನಡಕ್ಕೆ ಅವರು ಕೊಟ್ಟಿದ್ದೇ ಅಗಾಧ. ಇಂಥದೊಂದು ಪ್ರಶಸ್ತಿ ಅವರಿಗೆ ಒಂದಿಪ್ಪತ್ತೈದು ವರ್ಷ ಹಿಂದೆಯೇ ಬರಬೇಕಾಗಿತ್ತು. ಈಗ ಬಂದಿದೆ, ಅದೂ ಅವರ ಶಿಷ್ಯ ಮಗನಾದ ನನ್ನೊಂದಿಗೆ. ಮಿತ್ರ ಪ್ರಕಾಂಡ ವಿದ್ವಾಂಸರು, ಹಳಗನ್ನಡ, ನಡುಗನ್ನಡ, ಆಧುನಿಕ ಕನ್ನಡ ಎಲ್ಲ ಧಾರೆಗಳಲ್ಲೂ ಅವರ ಅಧ್ಯಯನ, ಓದು, ವ್ಯಾಪಕ ವಿಶಾಲವಾದುದು. ಅವರಿಗೆ ಕನ್ನಡ ಮಾತ್ರವಲ್ಲದೆ ಇಂಗ್ಲಿಷ್, ಸಂಸ್ಕೃತ, ತೆಲುಗು, ಭಾಷೆಗಳಲ್ಲೂ ಸಾಕಷ್ಟು ಪ್ರಭುತ್ವವಿದೆ. ಅದರಲ್ಲೂ ಅಚ್ಚರಿಯ ವಿಷಯವೆಂದರೆ ಅವರ ಸ್ಮರಣ ಶಕ್ತಿ! ಇಡೀ ಕನ್ನಡ ಪರಂಪರೆಯ ಸಾವಿರಾರು ಪದ್ಯಗಳು ಅವರ ನಾಲಿಗೆಯಲ್ಲೇ ನಿಂತಿವೆ.

ಅದರಲ್ಲೆಷ್ಟೋ ದೀರ್ಘ ಪದ್ಯಗಳೂ ಇವೆ. ಕುಮಾರವ್ಯಾಸ, ಲಕ್ಷ್ಮೀಶರಂತೂ ಅವರಿಗೆ ಕರತಲ ಅಮಲಕ. ಕುವೆಂಪು, ಬೇಂದ್ರೆ, ಪುತಿನ, ಅಡಿಗ, ನರಸಿಂಹ ಸ್ವಾಮಿಗಳ ದೀರ್ಘ ಪದ್ಯಗಳನ್ನೂ ವ್ಯಾಖ್ಯಾನಿಸಲು ಅವರಿಗೆ ಪದ್ಯವೇ ಬೇಕಿಲ್ಲ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಈ ಟಿವಿಯಲ್ಲಿ ಪ್ರಸಾರವಾಗುತ್ತಿದ್ದ ಮಿತ್ರ ಅವರ ಕುಮಾರವ್ಯಾಸ ಭಾರತದ ವ್ಯಾಖ್ಯಾನ ಅವರ ಅಗಾಧ ವಿದ್ವತ್ತು ಮತ್ತು ವಾಗ್ಮಿತೆಗೆ ಸಾಕ್ಷಿ ಮಿತ್ರ ಅವರು ಕನ್ನಡದ ಪ್ರಬಂಧಕಾರರಲ್ಲಿ ಮೊದಲನೆಯ ಸಾಲಿನವರು. ಅವರ ಪ್ರಬಂಧಗಳಲ್ಲಿ ಅವರ ವಿದ್ವತ್ತಿನ ಜೊತೆಗೆ ಸ್ವೋಪಜ್ಞ ಹಾಸ್ಯ ಸಂಲಗ್ನಗೊಂಡಿರುವುದನ್ನು ಮನಗಾಣಬಹುದು.

ರಾಮಾಯಣ, ಮಹಾಭಾರತ ಕಾವ್ಯಗಳಲ್ಲಿ ಮಿತ್ರ ಅವರು ಮಾಡಿರುವ ಕೆಲಸ ಲೋಕೋಪಕಾರಿಯಾದುದು, ಚಿರಸ್ಥಾಯಿಯಾದುದು. ರಾಮಾಯಣ ಮಹಾಭಾರತಗಳ ಪಾತ್ರ, ಸಂಗತಿಗಳ ಬಗ್ಗೆ ಅವರು ಬರೆದಿರುವ ಹೆಬ್ಬೊತ್ತಿಗೆಗಳು ಅವರ ಅಧ್ಯಯನದ ವೈಶಾಲ್ಯವನ್ನು ಸೂಚಿಸುವಂಥವು. 'ಕುಮಾರ ವ್ಯಾಸ ಭಾರತ ಕಥಾಮಿತ್ರ' ಅವರ ಗದ್ಯದ ಸೊಗಸಿಗೆ ಮತ್ತೊಂದು ಸಾಕ್ಷಿ.

ಹೇಳಲೇಬೇಕಾದ ಮತ್ತೊಂದು ಗ್ರಂಥ ಅವರ "ಛಂದೋಮಿತ್ರ" ಕಠಿಣ ಸಾಧ್ಯವಾದ ಛಂದಸ್ಸಿನ ವಿಷಯವನ್ನು ಮಿತ್ರ ಅವರು ತಮ್ಮ ವಿದ್ವತ್ತು ಮತ್ತು ಹಾಸ್ಯಶೀಲತೆಯಿಂದ ಸುಲಭಗ್ರಾಹ್ಯವಾಗಿಸಿ ಛಂದಸ್ಸಿನ ಅಧ್ಯಯನ ಮಾಡುವ ಅಧ್ಯಾಪಕ ವಿದ್ಯಾರ್ಥಿಗಳಿಗೆ ಮಹೋಪಕಾರ ಮಾಡಿದ್ದಾರೆ. ಇಷ್ಟಲ್ಲದೆ ಹಳಗನ್ನಡ ಗ್ರಂಥಗಳ ಸಂಪಾದನೆ, ಪಾಶ್ಚಿಮಾತ್ಯ ಪದ್ಯಗಳ ಭಾಷಾಂತರ, ಮುಂತಾದ ಕ್ಷೇತ್ರಗಳಲ್ಲೂ ಮಿತ್ರ ಅವರು ದೊಡ್ಡ ಕೃಷಿಯನ್ನೇ ಮಾಡಿ ಒಳ್ಳೆಯ ಬೆಳೆ ತೆಗೆದಿದ್ದಾರೆ. ■

# ಪುಸ್ತಕ ಪರಿಚಯ

● ಶಿವಕುಮಾರ್

ಹಲವು ದಿನಗಳ ಹಿಂದೆ ಗೆಳೆಯ ಶ್ರೀರಾಮ್ ಅವರು, "ನನ್ನ ಪೇಶಂಟ್ ಒಬ್ಬರು ಬರೆದಿರುವ ಪುಸ್ತಕ ಇದು. ಓದಿ ನೋಡಿ" ಎನ್ನುತ್ತಾ ಒಂದು ಪುಸ್ತಕವನ್ನು ಕೈಗಿತ್ತರು. " ಬಿದಿರು ನೀನ್ಯಾರಿಗಲ್ಲದವಳು" ಎಂಬ ಕೌತುಕ ಮೂಡಿಸುವ ಶೀರ್ಷಿಕೆಯ ಈ ಪುಸ್ತಕ ನಮ್ಮ ನಾಡಿನ ಖ್ಯಾತ ಮಹಿಳಾ ರಾಜಕಾರಣಿ ಶ್ರೀಮತಿ ಮೋಟಮ್ಮನವರು ಬರೆದಿರುವ ಆತ್ಮಕಥೆ. ರಾಜಕಾರಣಿಗಳು ತಮ್ಮ ಬಗ್ಗೆ ಬರೆದುಕೊಳ್ಳುವ ಸ್ವಪ್ರಶಂಸೆಯನ್ನು ಓದಲು ಬೇಕಾದ ಉತ್ಸಾಹ, ವ್ಯವಧಾನ,  ದೃಢನಿರ್ಧಾರ, ಸಂಕಲ್ಪ ಇವೆಲ್ಲವೂ ನನ್ನಲ್ಲಿದೆಯೇ ಎಂಬ ಸಂಶಯ ಬಲವಾಗಿದ್ದರೂ, ನೆಚ್ಚಿನ ಗೆಳೆಯನೊಂದಿಗಿನ ಮುಂದಿನ ಭೇಟಿಯಲ್ಲಿ ಈ ಪುಸ್ತಕದ ಓದಿನ ಬಗ್ಗೆ ಉತ್ತರಿಸಲೇ ಬೇಕಾದ ಅನಿವಾರ್ಯ ಕಾರಣದಿಂದ ಹಿಂಜರಿಕೆಯಿದ್ದರೂ ಪುಸ್ತಕವನ್ನು ಓದಲು ಕೈಗೆತ್ತಿಕೊಂಡೆ.


ಕೈಗೆತ್ತಿಕೊಂಡದ್ದು ಒಳ್ಳೆಯದಾಯಿತು. ಪುಸ್ತಕ ಸರಾಗವಾಗಿ ಓದಿಸಿಕೊಂಡು ಹೋಯಿತು. ನಿಸ್ಸಂಶಯವಾಗಿ ಓದುಗನ ಮೇಲೆ ಅತ್ಯಂತ ಪ್ರಭಾವ ಬೀರುವ ಪುಸ್ತಕ ಇದು. ತೀರ ಬಡತನದಲ್ಲಿ ಹುಟ್ಟಿದ ದಲಿತ ಹೆಣ್ಣುಮಗುವೊಂದು, ತನ್ನ ಪ್ರತಿಭೆ, ಸಂಕಲ್ಪ ಮತ್ತು ದುಡಿಮೆಯ ದೆಸೆಯಿಂದ ರಾಜ್ಯ ಸಚಿವೆಯ ಸ್ಥಾನಕ್ಕೆ ಏರುವ ಯಾತ್ರೆಯ ಕಥಾನಕದ ಜೊತೆಗೆ  ಇಪ್ಪತ್ತನೆಯ ಶತಮಾನದ ಉತ್ತರಾರ್ಧದ ನಮ್ಮ ನಾಡಿನಲ್ಲಿದ್ದ ಸಾಮಾಜಿಕ,  ರಾಜಕೀಯ ವ್ಯವಸ್ಥೆಗಳ ಚಿತ್ರಣವನ್ನೂ ಈ ಪುಸ್ತಕ ಬಹು ಸ್ವಾರಸ್ಯವಾಗಿ ನಿರೂಪಿಸುತ್ತದೆ.

ಈ ಪುಸ್ತಕದ ಬೆನ್ನುಡಿಯಲ್ಲಿ ಮೋಟಮ್ಮನವರ ಸಾಧನೆಗಳಿಗೆ ಒಂದು ಸೊಗಸಾದ ಉಪಮೆ ಇದೆ.

ಬಿದಿರು ಒಂದು ದಿನ ಬ್ರಹ್ಮನಿಗೆ ಬೇಸರದಿಂದ ಕೇಳಿತಂತೆ. "ಬೇಕಿತ್ತೇ ಈ ನಿನ್ನ ಸೃಷ್ಟಿಯೊಳಗೆ ನನ್ನದೊಂದು ಪಾತ್ರ ? ಹೂವಿಲ್ಲ, ಹಣ್ಣಿಲ್ಲ, ದಣಿದು ಬಂದವರಿಗೆ ನೆರಳು ನೀಡಲೂ ಆಗುವುದಿಲ್ಲ."

ಬ್ರಹ್ಮ ನುಡಿದನಂತೆ – "ಯಾಕೆ ಸಾಧ್ಯವಿಲ್ಲ ? ಮನಸ್ಸು ಮಾಡಿ ನೋಡು."

ಬಿದಿರು ಹಠ ಹಿಡಿದು ಬೆಳೆಯಿತಂತೆ. ಕೃಷ್ಣನ ಕೈಯ್ಯಲ್ಲಿ ಕೊಳಲಾಯಿತು. ಮಕ್ಕಳ ತೂಗುವ ತೊಟ್ಟಿಲಾಯಿತು. ಸುಮಂಗಲಿಯರ ಬಾಗಿನಕ್ಕೆ ಮೊರವಾಯಿತು. ಬಡವರ ಗುಡಿಸಿಲಿಗೆ ಗಳವಾಯಿತು, ಆರೋಗ್ಯಕ್ಕೆ ಔಷಧವಾಯಿತು, ಮೋಕ್ಷದ ದಾರಿಯಲ್ಲಿ – ಅಂತಿಮ ಯಾತ್ರೆಯಲ್ಲಿ ನೆರವಾಯಿತು ಮನಸ್ಸು ಮಾಡಿದರೆ ಯಾವ ಸಾಧನೆಯನ್ನೂ ಮಾಡಬಹುದು ಎಂದು ಲೋಕಕ್ಕೆ ಸಾರಿತು. ಹಾಗೆಯೇ ಮೋಟಮ್ಮನವರು ಮಹಿಳೆಯರಿಗೆ ಸ್ಫೂರ್ತಿಯ ಚಿಲುಮೆ, ಭರವಸೆಯ ಬೆಳಕು, ಮಾರ್ಗದರ್ಶಿ.




ಮೂಡಿಗೆರೆ ಸಮೀಪದ ಕೆಸವೊಳಲು ಒಂದು ಸಣ್ಣ ಗ್ರಾಮ. ಅಲ್ಲಿನ ಒಂದು ಕುಟುಂಬದಲ್ಲಿ ಮೂರನೆಯ

ಮಗಳಾಗಿ ಹುಟ್ಟಿದಾಕೆ ಮೋಟಮ್ಮ. ಮೋಟಮ್ಮ ಎಂಬ ಹೆಸರು ಹೇಗೆ ಬಂತು ಎಂಬುದೇ ಕುತೂಹಲಕರವಾಗಿದೆ. ಇಬ್ಬರು ಹೆಣ್ಣುಮಕ್ಕಳ ತಂದೆಯಾಗಿದ್ದ ಸಣ್ಣಯ್ಯನಿಗೆ ಮೂರನೆಯದೂ ಹೆಣ್ಣುಕೂಸು ಹುಟ್ಟಿದ್ದು ಬೇಸರ ತಂದದ್ದರಿಂದ ಆಕೆಗೆ ಯಾವ ನಾಮಕರಣವೂ ಆಗಲಿಲ್ಲ. ಆ ಮಗು ಗುಂಡು ಗುಂಡಗೆ ಮೋಟು ಮೋಟಾಗಿ ಇದ್ದದ್ದನ್ನು ನೋಡಿ ಯಾರೋ ನೆಂಟರೊಬ್ಬರು ಮೋಟಮ್ಮ ಎಂದು ಕರೆದರು. ಮೋಟಮ್ಮ ನಾಡಿನಲ್ಲಿ ಪ್ರಸಿದ್ಧ ವ್ಯಕ್ತಿಯಾಗಿ ಕೀರ್ತಿ ಗಳಿಸಿದ ನಂತರವೂ ಈಕೆ ತಮ್ಮ ಹೆಸರನ್ನು ಹಾಗೆಯೇ ಉಳಿಸಿಕೊಂಡಿರುವುದು ಗಮನಾರ್ಹ.

ಮೋಟಮ್ಮ ಶಾಲೆಗೆ ಸೇರಿದ ಪ್ರಸಂಗ ಇಲ್ಲಿ ನೋಡಿ. ಆಕೆ ಆರೇಳು ವರ್ಷದವಳಿದ್ದಾಗ ಗೆಳತಿಯರು ನೀನೂ ಶಾಲೆಗೆ ಬಾ ಎಂದು ಕರೆದರೆ ಸಡಗರದಿಂದ ತನ್ನ ಅಕ್ಕನ ಸೀರೆಯ ತುಂಡೊಂದನ್ನು ಸೀರೆಯಂತೆ ಉಟ್ಟುಕೊಂಡು ತಾನಾಗಿ ಹೋಗಿ ಸೇರಿಕೊಂಡಳು. ಕೆಲವು ಮಕ್ಕಳು ಶಾಲೆಗೆ ಹೋಗುವುದಿಲ್ಲವೆಂದು ಹಠಮಾಡುವುದುಂಟು. ಈ ಪುಟ್ಟ ಪೋರಿ ಯಾರಿಗೂ ಹೇಳದೆ ತಾನಾಗಿ ನಗುತ್ತಾ ಶಾಲೆಗೆ ಹೋದಳು. ಒಟ್ಟಾರೆ ಆಕೆಗೆ ಶಾಲೆ ಸಂತೋಷ ಸಂಭ್ರಮದ ತಾಣವಾಗಿತ್ತು. ಮೋಟಮ್ಮನವರ ಬಾಲ್ಯದ ಅನೇಕ ಘಟನೆಗಳು ಬಹು ಸ್ವಾರಸ್ಯವಾಗಿ ಈ ಕಥನದಲ್ಲಿ ಮೂಡಿಬಂದಿವೆ. ಶಾಟ್‌ಪಟ್ ಆಟಗಾರ್ತಿಯಾಗಿದ್ದು, ಓದಿನೊಂದಿಗೆ ಹಾಡುಗಾರಿಕೆಯನ್ನೂ ಕಲಿತದ್ದು ಇವೇ ಮುಂತಾಗಿ ಅನೇಕ ಸಾಧನೆಗಳು ಇವರಿಗೆ ಒಲಿದುಬಂದವು.

ದೇಶದಲ್ಲಿ ಶೇಕಡ ಅರ್ಧದಷ್ಟಿರುವ ಸ್ತ್ರೀಯರಿಗೆ ನ್ಯಾಯವಾಗಿ ದೊರಕಬೇಕಾದ ಸವಲತ್ತುಗಳು, ಅನುಕೂಲತೆಗಳು ಸ್ತ್ರೀ ಶಕ್ತಿ ಸಂಘಗಳಿಗೆ ಇಂದು ಒಂದು ನೆಲೆ ದೊರೆತಿದ್ದರೆ, ಕರ್ನಾಟಕದಲ್ಲಿ ಅದಕ್ಕೆ ಮೋಟಮ್ಮನವರ ಕಾಣಿಕೆ, ಪಾಲು ಹೆಚ್ಚಿನದು. ಇದೆಲ್ಲ ಸಾಧನೆಗಳ ವಿವರಗಳನ್ನು ಓದುವಾಗ ಇಷ್ಟೆಲ್ಲಾ ಸಾಧನೆಗಳನ್ನು ಮಾಡಲು ಸಾಧ್ಯವಾಗುವಂತಹ ಪರಿಸರ ನಮ್ಮ ನಾಡಿನಲ್ಲಿದೆಯಲ್ಲಾ ಎಂಬ ಸಂಗತಿಯ ಬಗ್ಗೆ ಹೆಮ್ಮೆ ಎನಿಸುತ್ತದೆ.

ಈ ಪುಸ್ತಕದಲ್ಲಿ ಬರುವ ಅಧ್ಯಾಯದ ಶೀರ್ಷಿಕೆಗಳೇ ಮೋಜಿನವು. ಕಾಫಿ ಕಪ್ಪಿನಲ್ಲಿ ಬಿರುಗಾಳಿ, ಹುತ್ತವ ಬಡಿದರೆ, ಬಿಸಿಲು ಕುದುರೆಯ ಬೆನ್ನೇರಿ ಇತ್ಯಾದಿ ತಲೆಬರಹಗಳು ನಿಜಕ್ಕೂ ಆಕರ್ಷಕವಾದವು.

ಮೋಟಮ್ಮನವರ ಸುದೀರ್ಘ ರಾಜಕೀಯ ಬದುಕಿನ ಎಲ್ಲ ಮುಖ್ಯ ಘಟನೆಗಳನ್ನೂ ಈ ಪುಟ್ಟ ಪರಿಚಯದಲ್ಲಿ ಹೇಳುವ ಉದ್ದೇಶ ನನಗಿಲ್ಲ.

ರಾಜಕಾರಣಿಗಳ ಬಗ್ಗೆ ಪೂರ್ವಾಗ್ರಹ ಹೊಂದಿದ್ದ ನನಗೆ ಈ ಓದು ಒಂದು ಕಣ್ಣು ತೆರೆಸುವ ಅನುಭವ ಎಂದು ಮಾತ್ರ ಹೇಳಬಲ್ಲೆ. ನಮ್ಮ ನಾಡಿನ ರಾಜಕಾರಣದ ಚರಿತ್ರೆಯಲ್ಲಿ ಇಂತಹ ಪುಸ್ತಕಗಳು ಬಹು ಮುಖ್ಯ ದಾಖಲೆಗಳಾಗುತ್ತವೆ. ಈ ವಿಷಯದಲ್ಲಿ ಆಸಕ್ತಿಯುಳ್ಳ ಎಲ್ಲರೂ ಅಗತ್ಯವಾಗಿ ಓದಬೇಕಾದಂತಹ ಪುಸ್ತಕ, "ಬಿದಿರು ನೀನ್ಯಾರಿಗಲ್ಲದವಳು."

**ಪ್ರಕಟಣೆ: ವಿಕಾಸ ಪ್ರಕಾಶನ. ಜಂಗಮವಾಣಿ: 9900095204**

# ಗುಂಡಿಗೆ ಬೀಳುವುದು

**● ಗಣೇಶ ಹೆಗಡೆ**

ನನ್ನ ಅನುಭವಕ್ಕೆ ಬಂದಹಾಗೆ ಗುಂಡಿಗೆ ಬೀಳುವುದು ಎಂಬ ರೂಢಿಯಲ್ಲಿರುವ ನುಡಿಕಟ್ಟಿನ ಭಾವಾರ್ಥ. 'ಎಲ್ಲೋ ಯಾರನ್ನೋ ನಂಬಿ ಮೋಸ ಹೋಗುವುದು' ಎಂದು. ನನ್ನನ್ನೇ ಉದಾಹರಣೆಯನ್ನಾಗಿ ತೆಗೆದುಕೊಂಡರೆ ಮದುವೆಯಾದ ಪ್ರಾರಂಭಿಕ ದಿನಗಳಲ್ಲೇ ಈ ನುಡಿಕಟ್ಟಿನ ಬಗ್ಗೆ ತಲೆಕೆಡಿಸಿಕೊಳ್ಳಬೇಕಾಯ್ತು. ಗಂಡ ಹೆಂಡರಿಗೆ ಯಾವುದೋ ಕ್ಷುಲ್ಲಕ ವಿಷಯದ ಬಗ್ಗೆ ಜಗಳ ಆರಂಭವಾಗಿ, ಈ ಜಗಳ ಉಂಡು ಮಲಗಿ ಮತ್ತು ಎದ್ದ ಮೇಲೂ ಕಂಟಿನ್ಯೂ ಆಗಿ ನಿಲ್ಲದ ಲಕ್ಷಣಗಳ ಹಂತಕ್ಕೆ ಬಂದು ತಲುಪಿತ್ತು.

'ನಾನು ಮೊದಲ ಸಲ ನಿಮ್ಮನ್ನು ನೋಡಿ ಗುಂಡಿಗೆ ಬಿದ್ದೆ. ಮದುವೆಯೇ ಆಗಬಾರದಿತ್ತು' ಎಂಬ ಇವಳ ಪ್ರಲೋಭನೆಗೆ ನಾನು ಸುಮ್ಮನೆ ಕೂರಲಾದೀತೆ?'

'ನಿನಗಿಂತಲೂ ಮೊದಲು ಗುಂಡಿಗೆ ಬಿದ್ದವನು ನಾನು. ನಿಮ್ಮಪ್ಪನ ಗಿಲೀಟು ಮಾತು ನನ್ನನ್ನು ಮರುಳನನ್ನಾಗಿ ಮಾಡಿತ್ತು" ಎಂದು ಆಪಾದಿಸಿದಾಗ, ಯಾಕೊ ಈ ಕೋಳಿ ಜಗಳ ಅಂತ್ಯ ಕಾಣದ ತ್ರಿಶಂಕು ಸ್ಥಿತಿಗೆ ತಲುಪಿದೆಯೆಂದೆನಿಸಿತ್ತು. ನಮ್ಮ ಮದುವೆಗೆ ಕಾರಣೀಭೂತರಾದ ಹಿತೈಷಿಗಳು ಈ ವಿಷಯ ತಿಳಿದು ತತ್‌ಕ್ಷಣ ನಮ್ಮ ನೆರವಿಗೆ ಧಾವಿಸಿ ಬಂದಿದ್ದರು. ಸಂಧಾನ ವಿಫಲವಾಗಿ ಯಾರು ಮೊದಲಿಗೆ ಗುಂಡಿಗೆ ಬಿದ್ದವರು? ಎಂಬ ತೀರ್ಮಾನಕ್ಕೆ ಬರಲು ಅವರೊಂದುಪಾಯ ಮಾಡಿದ್ದರು. ನಮ್ಮಿಬ್ಬರನ್ನೂ ಮನೆ ಮುಂದಿನ ರಸ್ತೆಯ ಮಧ್ಯೆ ನಿಲ್ಲಿಸಿ, ಎಂಟಾಣೆ ನಾಣ್ಯವನ್ನು ಆಗಸಕ್ಕೆ ಟಾಸ್‌ನಂತೆ ಚಿಮ್ಮಿದ್ದರು. ಆದರೆ ಆ ನಾಣ್ಯಕ್ಕೂ ಯಾಕೊ ಕನ್‌ಫ್ಯೂಸ್! ಆಗಿ ಅದು ಸರಸರನೆ ಉರುಳಿಕೊಂಡು ಹೋಗಿ ಆಳದ ಗುಂಡಿಯೊಳಗೆ ಬಿದ್ದು ರಕ್ಷಣೆ ಪಡೆದುಕೊಂಡಿತ್ತು. ದಿಕ್ಕು ತೋಚದೆ ಆ ಹಿತೈಷಿಗಳು ಬಾನಿನತ್ತ, ಶಿರವೆತ್ತಿ, ನಮ್ಮ ಕೈಯಲ್ಲಿ ಯಾವುದೂ ಇಲ್ಲ. ಥರ್ಡ್ ಅಂಪೈರ್! ಅಲ್ಲಿದ್ದಾನೆ. ಅವನ ತೀರ್ಪೇ ನಿರ್ಣಾಯದಾಯಕ ಎಂಬ ವೇದಾಂತದ ಮಾತುಗಳನ್ನಾಡಿ, ಶಿರವನ್ನು ಕೆಳಗೆ ಮಾಡದೆ ಬಿರಬಿರನೆ ನಡೆದುಬಿಟ್ಟಿದ್ದರು. ಈ ಅಚಾತುರ್ಯದಲ್ಲಿ ನಾಣ್ಯ ಬಿದ್ದ ಆ ಗುಂಡಿಗೆ ತಾವೇ ಬಿದ್ದು ಹೋದರೆ? ಎಂಬ ನಿಮ್ಮನುಮಾನದ ಪ್ರಶ್ನೆಗೆ ಮೌನವೇ ನನ್ನ ಉತ್ತರ.

ಇದು ಎರಡು ವರ್ಷಗಳ ಹಿಂದೆ ಜರುಗಿದ ಸತ್ಯ ಘಟನೆ. 'ವಯಸ್ಸಾಗಿದೆ, ಕಣ್ಣು ಮಂಜು, ದಯವಿಟ್ಟು, ಟು ವೀಲರ್ ರೈಡು ಮಾಡ್ಬೇಡಿ ಅಪಾಯ' ಎಂದು ಮಡದಿ, ಮಕ್ಕಳು, ಗೆಳೆಯರು ಸಾಕಷ್ಟು ಎಚ್ಚರಿಸಿದ್ದರೂ ಕೇರ್ ಮಾಡದ ನಾನು ಒಂದು ದುರ್ದಿನ ಪಾಲಿಕೆ ರಸ್ತೆಯಲ್ಲಿ 'ಗುಂಡಿಯನ್ನು ಅವಾಯ್ಡ್ ಮಾಡಲು ಹೋಗಿ ಸನಿಹದ ಮತ್ತೊಂದು ಗುಂಡಿಗೆ ಸ್ಕೂಟರ್ ಸಮೇತಾಬಿದ್ದಾಗ ತತ್‌ಕ್ಷಣ ನೆರೆದ ಜನ ಜಂಗುಳಿ, ತಮ್ಮತಮ್ಮಲ್ಲೇ ಮಾತನಾಡಿಕೊಳ್ಳುತ್ತಿದ್ದು ಕೇಳಿಸಿತು.

'ಇವರ ಅದೃಷ್ಟ ಚೆನ್ನಿತ್ತು. ಹತ್ತು ಅಡಿ ದೂರದಲ್ಲೇ ಮತ್ತೊಂದು ದೊಡ್ಡ ಗುಂಡಿಯಿತ್ತು'

“ದೇವರು ದೊಡ್ಡವನು. ಈ ಅವಘಡ ಸಣ್ಣ ಗುಂಡಿಯುಲ್ಲೇ ಪರ್ಯಾವಸನವಾಯ್ತು”

‘ಸ್ವಾಮಿ, ನಾನು ಕಂಡ ಹಾಗೆ ಇವರದು ಈ ಗುಂಡಿಯೊಳಗೆ ಬೀಳುತ್ತಿರುವ ಇಪ್ಪತ್ತನೆಯ ಕೇಸು ಒಂದು ಆಶ್ಚರ್ಯಕರ ಸಂಗತಿಯೆಂದರೆ ನನ್ನ ಬಾರ್‌ಗೆ ಬಂದು ವಾಪಸ್ಸು ಹೋಗುವ  ಯಾವ ಗಿರಾಕಿಗಳು ಒಮ್ಮೆಯೂ ಹೀಗೆ ಗುಂಡಿಗಳಿಗೆ ಬಿದ್ದ ನಿದರ್ಶನವಿಲ್ಲ. ಯಾಕೆಂದರೆ ಮನಸ್ಸು ಮತ್ತು ಅವರ ಕಾಲುಗಳು ಡೊಂಕು ಡೊಂಕಾಗಿ ರಸ್ತೆಯಲ್ಲಿ ಸಾಗುವುದರಿಂದ ಬಹುತೇಕ ಗುಂಡಿಗಳೇ! ಅವರನ್ನು ಅವಾಯ್ಡ್ ಮಾಡಿ ಬಿಡುತ್ತವೆ. ಆದರೆ, ಈ ನೇರ ಜನಗಳದ್ದೆ ಸಾಲ್ವ್ ಆಗದ  ಪ್ರಾಬ್ಲಮ್’

“ಅನಾದಿ ಕಾಲದಿಂದಲೂ ಈ ರಸ್ತೆ ಈ ಗುಂಡಿಗಳ ಮಧ್ಯೆಯೆ ಹಾದು ಹೋಗಿದೆ”

ಗುಂಡಿ ರಸ್ತೆಯೊಳಗೊ? ಗುಂಡಿಯೊಳೇ ರಸ್ತೆಯೋ? ಎಂಬ ದಾಸ ನುಡಿ ಇಲ್ಲಿ ನೆನಪಾಗುತ್ತಿದೆ.

ಇಂಥಹ ಸಾಂತ್ವನದ ಮಾತುಗಳನ್ನೆಲ್ಲಾ ಆಲಿಸಿ, ಉಸಿರು ತೆಗೆದುಕೊಳ್ಳಲು ಪ್ರಯತ್ನಿಸಿ ಗೋಣಾಡಿಸಲು ಹೋಗಿ ವಿಫಲನಾಗಿದ್ದೆ.

ಆಸ್ಪತ್ರೆಯಲ್ಲಿ ಹತ್ತು ದಿನ ಚಿಕಿತ್ಸೆ ಪಡೆದು ಡಿಸ್‌ಚಾರ್ಜ್ ಆಗಿ ಮನೆಗೆ ಮರಳಿ ಬಂದಾಗ, ನನ್ನ ಮಡದಿಯ ಮೂಲವರ್ತನೆಯೇ ಬದಲಾಗಿ ಹೋಗಿದ್ದರ ಮೊದಲರಿವು ನನಗುಂಟಾಗಿತ್ತು. ತಲೆಗೆ ಪೆಟ್ಟಾಗಿದ್ದು  ನನಗೋ ಅಥವಾ ಇವಳಿಗೋ? ಎಂಬ ಅನುಮಾನದ ಹುಳ ತಲೆಯನ್ನು ಹೊಕ್ಕಿತ್ತು.  ಯಾಕೆಂದರೆ ಹೆಜ್ಜೆ ಹೆಜ್ಜೆಗೂ ಸಿಟ್ಟಾಗುತ್ತಿದ್ದ ಇವಳು ಈಗ ಅಷ್ಟೇ ಶಾಂತಮೂರ್ತಿಯಾಗಿದ್ದಳು. ಗುಂಡಿಯೊಳಗೆ ನಾನು ಬಿದ್ದು ಬದುಕಿ ಬಂದದ್ದು ಸಾರ್ಥಕವಾಯ್ತು ಅಂತ ಅಂದುಕೊಳ್ಳುವ ಹಂತಕ್ಕೆ ಇನ್ನೇನು ತಲುಪಿದೆ ಎನ್ನುವ ಸಂದರ್ಭದಲ್ಲಿ  ಒಂದು ದಿನ ‘ರ್ರೀ...! ನೀವು ಈಚೀಚೆಗೆ ನನಗೆ ಚಂದ್ರನಂತೆ ಕಾಣಿಸುತ್ತೀರಿ’ ಎಂದಾಗ ಬೆಚ್ಚಿ ಬೀಳುವ ಸರದಿ ನನ್ನದಾಗಿತ್ತು. ಮೊನ್ನೆ ಗ್ರಹಣ ಹಿಡಿದಿದ್ದು, ಚಂದ್ರನಿಗೊ ಅಥವಾ ಇವಳಿಗೊ? ಎಂಬ ಪ್ರಶ್ನೆ ಗಂಟಲಲ್ಲೇ ಹೂತು ಹೋಗಿ, ಕುತೂಹಲ ತಡೆಯಲಾಗದೆ ‘ಯಾಕೆ?’ ಎಂದು ಪ್ರಶ್ನಿಸಿದೆ.

“ಯಾಕೆಂದರೆ ಮೊನ್ನೆ ಮೊಬೈಲ್ ನೋಡುತ್ತಿದ್ದೆ. “ನಾಸಾ” ಸಂಶೋಧನೆಯ ಪ್ರಕಾರ ಚಂದ್ರನಲ್ಲಿ ತುಂಬಾ ಕುಳಿಗಳಿವೆಯಂತೆ. ಮೊನ್ನೆ ನಿಮ್ಮ ತಲೆಯನ್ನು ಎಂಆರ್‌ಐ ಸ್ಕ್ಯಾನ್ ಮಾಡಿದ ವೈದ್ಯರೂ ರಿಪೋರ್ಟು ನೋಡಿ ಇದೇ ಅಭಿಪ್ರಾಯಪಟ್ಟರು ಎಂದು ಕಿಸಕ್ಕನೆ ನಕ್ಕಳು.

‘ಹೆಣ್ಣಿನ ವದನಾರವಿಂದ ಮತ್ತು ವರ್ಣನೆಯ ಬಗ್ಗೆ ಚಂದ್ರನಿಗೆ ಹೋಲಿಸಿ ಸುಂದರ ಕವಿತೆಗಳನ್ನು ಹೊಸೆದು ಬಿಸಾಕಿದ್ದ ‘ಕವಿವರ್ಗ’ದ ಮೇಲೆ ಕಂಡಾಪಟ್ಟೆ ಸಿಟ್ಟು ಬಂತು. ಅವರ ಭಾವನಾ ಲಹರಿ ಹೆಣ್ಣಿನ ಕೇವಲ ಮುಖದ ಲೆವೆಲ್ ಗಷ್ಟೇ ನಿಂತು ಸ್ವಲ್ಪ ಹತ್ತಿರದಲ್ಲೇ ಇದ್ದ ಮಿದುಳಿಗೇಕೆ ಪಸರಿಸಲಿಲ್ಲ? ಎಂಬ ಪ್ರಶ್ನೆ ಪ್ರಶ್ನಾತೀತವಾಗೇ ಉಳಿಯಿತು. ಜತೆಗೆ ಗಂಡಸರ ಮಿದುಳಿನಲ್ಲಿ ಕುಳಿಗಳಿವೆ! ಎಂಬ ಸತ್ಯಾಂಶ ಹೊರಗೆಡಹಿತಲ್ಲ ಎಂಬುದರ ಬಗ್ಗೆ ವಿಷಾದವೂ ಆಯಿತು.

ಮೊನ್ನೆ, ಮಠಾಧೀಶರೊಬ್ಬರು ಕಾರ್ಯ ನಿಮಿತ್ತ ನನ್ನನ್ನು ಭೇಟಿಯಾಗಲು ಬಂದಿದ್ದರು. ಛೇ...ಛೇ... ಗಾಬರಿಯಾಗಬೇಡಿ...ಇವರು ಅಂಥಹವರಲ್ಲಾ, ತುಂಬಾ ಗೌರವಾನ್ವಿತರು. ಮಠದ ಯಾವುದೊ ಇವಿಲ್ ಕ್ಷಮಿಸಿ ಸಿವಿಲ್ ವ್ಯಾಜ್ಯವೊಂದರ ಕೋರ್ಟ್ ಪ್ರಗತಿಯ ಬಗ್ಗೆ ವಿಚಾರಿಸಲು ಬಂದಿದ್ದರು. ಹೇಳುವುದನ್ನು ಮರೆತಿದ್ದೆ. ವೃತ್ತಿಯಲ್ಲಿ ನಾನು ಲಾಯರ್. ಮಠದ ಎಲ್ಲಾ ಕೇಸುಗಳನ್ನೂ ನಾನೇ ನಡೆಸುತ್ತಿದ್ದುದು.

'ಮಹಾಸ್ವಾಮಿ ಕ್ಷಮೆಯಿರಲಿ. ಮೊನ್ನೆ ತಾನೆ ಗುಂಡಿಯೊಳಗೆ ಬಿದ್ದು ಮರು ಜೀವ ಪಡೆದು ಬಂದಿದ್ದೇನೆ. ಇನ್ನೂ ಒಂದು ತಿಂಗಳು ಓಡಾಡುವ ಸ್ಥಿತಿಯಲ್ಲಿ ಇಲ್ಲ. ಇಲ್ಲದಿದ್ದರೆ, ನಾನೇ ಮಠಕ್ಕೆ ಖುದ್ದಾಗಿ...'

'ಛೇ..ಛೇ.. ವಳ್ಳೆಯ ಕೆಲಸವೇ ಆಯಿತು. ಅನ್ಯಥಾ ಭಾವಿಸದಿದ್ದರೆ ಒಂದು ಮಾತು. ಮುಂದೆಂದೂ ತಾವು ಮಠದ ಕಡೆಗೆ ಸುಳಿಯಬಾರದು'.

'ಯಾಕೆ?'

ಇದೇ ತಾನೆ ಚೇತರಿಸಿಕೊಳ್ಳುತ್ತೀದ್ದೀರಿ ಅಂದಿರಿ. ಅಲ್ಲೂ ಈಚೀಚೆಗೆ ಅಪಾಯದ ಗುಂಡಿಗಳು ಹುಟ್ಟಿಕೊಂಡಿವೆ. ಅದಕ್ಕೆಂದೇ ನಾವು ಅತಿ ಶೀಘ್ರದಲ್ಲೇ ಸಂನ್ಯಾಸಾಶ್ರಮ ತ್ಯಜಿಸಿ 'ಗೃಹಸ್ಥಾಶ್ರಮ' ಸ್ವೀಕರಿಸುವ ಬಗ್ಗೆ ಚಿಂತನೆ ನಡೆಸಿದ್ದೇವೆ'

ಅಯ್ಯೋ.. ಇನ್ನೂ ದೊಡ್ಡಗುಂಡಿಯಲ್ಲವೆ? ಎನಿಸಿತು. ಆದರೆ ಹಾಗೆ ಹೇಳುವ ಧೈರ್ಯ ನನಗಾಗಲಿಲ್ಲ.

... ಅದು....ಅದು... ■

---



● ದಂಸಆ

■ ಕಣ್ಣೀರ ಹನಿಗಿಂತ ಬೆವರ ಹನಿಗೆ ಹೆಚ್ಚು ಬೆಲೆ. ಹೇಗೆಂದರೆ ಕಣ್ಣೀರ ಹನಿ ಬರುವಂತೆ ನಟಿಸಬಹುದು ಆದರೆ ಬೆವರ ಹನಿ ಬರುವಂತೆ ನಟಿಸಲಾಗದು.

■ ಯಾರಾದರು ಏನಾದರೂ ತಪ್ಪು ಮಾಡಿದಾಗ ಅವರು ಸರಿಯಾಗಿ ಮಾಡಿದ್ದ ವಿಷಯಗಳನ್ನು ಮರೆಯಬೇಡಿ.

■ ದೇರ್ ಆರ್ ಥಿಂಗ್ಸ್ ವಿ ನೊ ವಿ ಡೋಂಟ್ ನೊ ಬಟ್ ದೇರ್ ಆರ್ ಆಲ್ಸೊ ಥಿಂಗ್ಸ್ ವಿ ನೊ ಬಟ್ ಡೋಂಟ್ ನೊ ಹೌ ವಿ ನೊ.

■ ನಾಲಿಗೆ ಮೇಲೆ ಆದ ಗಾಯ ಬೇಗನೆ ವಾಸಿ ಆಗುತ್ತೆಂದು ಮೆಡಿಕಲ್ ಸೈನ್ಸ್ ಹೇಳುತ್ತದೆ. ಆದರೆ ನಾಲಿಗೆ ಮಾಡುವ ಗಾಯ ವಾಸಿಯಾಗಲು ತುಂಬಾ ಸಮಯ ಬೇಕಾಗುತ್ತದೆ ಎಂದು ಮಾರಲ್ ಸೈನ್ಸ್ ಹೇಳುತ್ತದೆ.

■ ಬಿ ಸ್ಮಾರ್ಟ್! ನೊ ಒನ್ ಕೇರ್ಸ್ ಅಬೌಟ್ ಯುವರ್ ಎಫರ್ಟ್ಸ್, ಓನ್ಲಿ ದಿ ರಿಸಲ್ಟ್ಸ್.

■ ನೀವು ಏನಾಗಿದ್ದೀರಿ ಎಂಬುದನ್ನು ನೀವು ಮಾಡಿರುವ ಆಯ್ಕೆಗಳು ಹೇಳುತ್ತವೆ.

■ ಯಶಸ್ಸು ನಿಮ್ಮನ್ನು ಪ್ರೈವೇಟ್ ಆಗಿ ಆಲಂಗಿಸುತ್ತದೆ, ಆದರೆ ಸೋಲು ಪಬ್ಲಿಕ್ಕಾಗಿ ಹೊಡೆಯುತ್ತದೆ.

■ ಟು ಬಿ ಸಕ್ಸಸ್‌ಫುಲ್ ಯು ಡೋಂಟ್ ನೀಡ್ ಎ ಬ್ಯೂಟಿಫುಲ್ ಫೇಸ್ ಅಂಡ್ ಎ ಹಿರಾಯಿಕ್ ಬಾಡಿ ಬಟ್ ಎ ಸ್ಕಿಲ್ ಫುಲ್ ಮೈಂಡ್ ಅಂಡ್ ಎಬಿಲಿಟಿ ಟು ಪರ್ಫಾಮ್.

■ ಬದುಕೆಂಬ ಪಯಣ ನಿರಾಯಾಸವಾಗಿ ಸಾಗಬೇಕೆಂದರೆ ನಿರೀಕ್ಷೆಗಳೆಂಬ ಲಗೇಜನ್ನು ಕಡಿಮೆ ಮಾಡಿಕೊಳ್ಳಿ.

■ ಯಾವುದು ನಿಮಗೆ ಘಾಸಿ ಮಾಡುತ್ತದೊ ಅದು ನಿಮಗೆ ಏನೋ ಪಾಠ ಕಲಿಸುತ್ತದೆ. ಆದರೆ ನಿಮಗೆ ಘಾಸಿ ಆಗುತ್ತಲೇ ಇದ್ದರೆ ನೀವು ಏನನ್ನೂ ಕಲಿತೇ ಇಲ್ಲ ಎಂದಾಗುತ್ತದೆ.

■ ನೆವರ್ ಮಿಕ್ಸ್ ಯುವರ್ ವರ್ಡ್ಸ್ ವಿತ್ ಯುವರ್ ಮೂಡ್ ಬಿಕಾಸ್ ಯು ವಿಲ್ ಹ್ಯಾವ್ ಮೆನಿ ಆಪ್ಷನ್ಸ್ ಟು ಛೇಂಜ್ ಯುವರ್ ಮೂಡ್ ಬಟ್ ಯು ವಿಲ್ ನೆವರ್ ಗೆಟ್ ಎನಿ ಆಪ್ಷನ್ ಟು ರಿಪ್ಲೇಸ್ ಯುವರ್ ಸ್ಪೋಕನ್ ವರ್ಡ್ಸ್.

■ ನಾನು ಸಾಲ ಮರುಪಾವತಿ ಮಾಡದಿದ್ದಾಗ ಬ್ಯಾಂಕಿಗೆ ಅಸಮಾಧಾನ ಏಕಾಗಬೇಕೆಂಬುದು ನನಗೆ ತಿಳಿಯುತ್ತಿಲ್ಲ. ಏಕೆಂದರೆ ನನ್ನ ಬಳಿ ದುಡ್ಡು ಇರಲಿಲ್ಲ ಎಂದು ನಾನು ಸಾಲ ಪಡೆಯಲು ಬಂದಾಗ ಬ್ಯಾಂಕ್ ಮಂದಿಗೆ ತಿಳಿದೇ ಇತ್ತಲ್ವೆ?

■ ಸರಳ ಗಣಿತ: 2 ಗೆಟ್ ಅಂಡ್ 2 ಗಿವ್ ಕ್ರಿಯೇಟ್ ಮೆನಿ ಪ್ರಾಬ್ಲಮ್ಸ್. ಸೊ ಜಸ್ಟ್ ಡಬಲ್ ಇಟ್ – 4ಗೆಟ್ ಅಂಡ್ 4ಗಿವ್ ಸಾಲ್ವ್ಸ್ ಮೆನಿ ಪ್ರಾಬ್ಲಂಸ್.

■ ಒಬ್ಬ ಲೇಖಕ ಯಾವಾಗಲೂ ಬರೆಯತ್ತಲೇ ಇರುತ್ತಾನೆ. ಅವನು ಬರೆಯದೇ ಇದ್ದಾಗಲೂ ಸಹ.

■

# ಜೀವನ ರೂಪಿಸಿಕೊಂಡಿದ್ದು......

● ಎಚ್. ಗೋಪಾಲಕೃಷ್ಣ

ಪ್ರೈಮರಿ ಶಾಲೆ ನಾನು ಓದಿದ್ದು ತುಮಕೂರಿನಲ್ಲಿ. ಉಪ್ಪಾರಹಳ್ಳಿ ರೈಲ್ವೆ ಗೇಟ್ ಬಳಿ ಇದ್ದ ಸರ್ಕಾರಿ ಶಾಲೆ. ನಮ್ಮ ಮನೆ ಅಲ್ಲೇ ಇದ್ದ ರಾಮಕೃಷ್ಣಯ್ಯ ಅವರ ವಠಾರ ದಲ್ಲಿತ್ತು. ಅದೇ ವಠಾರ ದಲ್ಲಿ ಸಂಗೀತ ವಿದ್ವಾಂಸ ಶ್ರೀ ಲಕ್ಷ್ಮಣ ಶಾಸ್ತ್ರಿಗಳು ಸಹ ಒಬ್ಬರು. ಅವರ ಮಕ್ಕಳು ನನಗೆ ಆಗ ಸ್ನೇಹಿತರು. ಪ್ರೈಮರಿ ಶಾಲೆಯ ಯಾವ ಮೇಷ್ಟರೂ ಸಹ ಈಗ ನೆನಪಿಲ್ಲ, ನೆನಪಿನಿಂದ ಮಾಸಿದ್ದಾರೆ.

ಆದರೆ ಅಲ್ಲಿನ ಒಂದು ಘಟನೆ ಮಾತ್ರ ಇನ್ನೂ ಹಸಿರು ಹಸಿರು. ಶಾಲೆಯ ಮೇಷ್ಟ ರೊಬ್ಬರ ಹೆಸರು ದಾಸಪ್ಪ ಅಂತ. ಪ್ರತಿ ಸಂಜೆ ಅವರು ರೈಲು ಲೈನಿನ ಪಕ್ಕ ಉಪ್ಪಾರಹಳ್ಳಿ ಗೇಟಿನ ಮುಂದೆ ವಾಕಿಂಗ್ ಹೋಗುವ ರೂಡಿ. ಅವರನ್ನು ದಿನವೂ ನೋಡುತ್ತಿದ್ದ ನಮಗೆ ಅದೇನೋ ಒಂದು ರೀತಿ ಭಯ. ಅವರು ದೂರದಲ್ಲಿ ಕಾಣಿಸುತ್ತಿದ್ದ ಹಾಗೇ ನಾವು ಬಚ್ಚಿಟ್ಟು ಕೊಂಡು ಅವರು ಹೋದ ನಂತರ ಹೊರಗೆ ಬರುತ್ತಿದ್ದೆವು. ವಠಾರದ ಎದುರು ವಾಸ ಇದ್ದ ನಮಗಿಂತ ಕೊಂಚ ದೊಡ್ಡವ ಸೇತುರಾಮನಿಗೆ ಇದು ಒಂದು ತಮಾಷೆಯ ಕೌತುಕದ ಸಂಗತಿ. ಒಮ್ಮೆ ಹೀಗೆ ಮಾಡಿದ.

ದಾಸಪ್ಪ ಮೇಷ್ಟರು ಉಪ್ಪಾರ ಹಳ್ಳಿ ಗೇಟ್ ದಾಟಿ ಮುಂದೆ ಹೋದನಂತರ ನಾವು ಆಚೆ ಬಂದೆವು. ಅವನೂ ನಮ್ಮ ಜತೆ ಬಂದ. ಸುಮಾರು ಮುಂದೆ ದಾಸಪ್ಪ ಮೇಷ್ಟರು ಹೋಗ್ತಾ ಇದ್ದಾರೆ. ಸೇತು ರಾಮ ನಮ್ಮ ಪಕ್ಕದಲ್ಲಿ ನಿಂತ..

ಓ ದಾಸಪ್ಪಾ, ಓ ದಾಸಪ್ಪಾ, ಓ ದಾಸಪ್ಪಾ ಅಂತ ಜೋರಾಗಿ ಕೂಗಿದ. ಅವರು ನಿಂತು ಹಿಂದೆ ತಿರುಗಿದರು. ನಾವು ಅವರೇನು ಮಾಡುತ್ತಾರೋ ಎನ್ನುವ ಭಯದಿಂದ ಓಟ ಕಿತ್ತೆವು. ನಮಗಿಂತ ಮೊದಲೇ ಸೇತು ರಾಮ ಅಲ್ಲಿಂದ ಓಡಿದ್ದ.

ಮೇಷ್ಟರು ವಠಾರ ಕ್ಕೆ ಬಂದಿದ್ದು, ಹುಡುಗರು ಹೇಗೆ ಕೆಟ್ಟು ಹೋಗ್ತಾ ಇದ್ದಾರೆ ಅಂತ ಅಲ್ಲಿದ್ದ ಹೆಂಗಸರಿಗೆ ಬೈದು ಹೋಗಿದ್ದು ರಾತ್ರಿ ನಮ್ಮ ಅಮ್ಮನ ಮೂಲಕ ಗೊತ್ತಾಯಿತು. ಅಪ್ಪ ಬೆನ್ನ ಮೇಲೆ ಎರಡು ಬಿಟ್ಟು ಶಿಸ್ತು ಕಲೀಬೇಕು ಮೇಷ್ಟ ರನ್ನ ಹಾಗೆ ಕರಿಬಾರದು ಅಂತ ಬುದ್ಧಿ ಹೇಳಿದ್ದ...!

ಇಂಥ ದಾಸಪ್ಪ ಮೇಷ್ಟರು ತಲೆಯಲ್ಲಿ ಉಳಿದು ಕೊಳ್ಳಲು ಇನ್ನೂ ಒಂದು ಕಾರಣ ಇರಬಹುದು ಅನಿಸುತ್ತೆ. ನಮ್ಮ ದೊಡ್ಡಣ್ಣ, ನನಗೂ ಅವನಿಗೂ ಹದಿನೈದು ಹದಿನಾರು ವರ್ಷ ವ್ಯತ್ಯಾಸ. ಆಗಾಗ ನಮಗೆ ಪಾಠ ಹೇಳಿಕೊಡುವ, ತಮಾಷೆ ಮಾಡುವ ಅಭ್ಯಾಸ ಅವನಿಗೆ. ಒಂದು ಸಲ ಆಟ ಆಡ್ತಾ ಯಾರದ್ದಾದರೂ ವಿಷಯ ಹೇಳು ಅವರ ಹೆಸರು ಹೇಳ್ತೀನಿ ಅಂದ. ನಾಲ್ಕೋ ಐದೋ ಜನರದ್ದು ಆಯ್ತು.. ಅವರ ಹೆಸರು ಹೇಳಿ ಜಯದ ನಗೆ ಬೀರುತ್ತಾ ಕೂತ. ನನಗೆ ಒಳಗೊಳಗೇ ಕೋಪ. ಕೋಪದಲ್ಲಿ ನಮ್ಮ ದಾಸಪ್ಪ ಮೇಷ್ಟರು ಹೆಸರು ಗೊತ್ತಾ ನಿಂಗೆ..... ಅಂತ ಕೇಳಿದೆ. ಅಮ್ಮ ಅಕ್ಕ ಅಪ್ಪ.... ಮನೇಲಿದ್ದ ಎಲ್ಲರೂ ಹೆಂಚು ಹಾರುವ ಹಾಗೆ ನಕ್ಕರು. ಅವರು ಅದ್ಯಾಕೆ ನಕ್ಕರು ಅಂತ ಈಗಲೂ ಗೊತ್ತಿಲ್ಲ, ಆದರೆ ಅಂದು ನನಗೆ ಅವಮಾನ ಆಗಿದೆ ಅಂತ ಅಂದುಕೊಂಡಿದ್ದು ಹಾಗೇ ಮನಸ್ಸಿನ ಒಂದು ಮೂಲೆಲೀ ಕೂತು ಬಿಟ್ಟಿದೆ. ಅದರಿಂದ ದಾಸಪ್ಪ ಮೇಷ್ಟರ ಹೆಸರು ಇನ್ನೂ ಹಾಗೇ ಅಲ್ಲಿದೆ! ನಾಲ್ಕನೇ ಕ್ಲಾಸಿಗೆ ಅಪ್ಪ ಕುಟುಂಬ ಸಮೇತ ಬೆಂಗಳೂರು ಬಂದುಬಿಟ್ಟರು.

ಮಿಡಲ್ ಸ್ಕೂಲು ಶ್ರೀರಾಮಪುರದಲ್ಲಿ ಓದಿದ್ದು. ಗೋಪಾಲ ಸ್ವಾಮಿ ಅಯ್ಯರ್ ಹಾಸ್ಟೆಲ್ ಹಿಂಭಾಗ ನಮ್ಮ ಸ್ಕೂಲು. ಸ್ಕೂಲ್ ಹೆಡ್ ಮಾಸ್ತರು ಪೇಟ ಹಾಕಿಕೊಂಡು ಫುಲ್ ಸೂಟಿನಲ್ಲಿ ಬರ್ತಾ ಇದ್ದರು ಅದು ನೆನಪಿದೆ. ನಂಜುಂಡಯ್ಯ ಅಂತ ಒಬ್ಬರು

ಕನ್ನಡ ಮೇಷ್ಟರು ಮನೇಲಿ ಹಿಂದಿ ಪಾಠ ಮಾಡೋರು ಅವರ ನೆನಪೂ ಉಂಟು. ಇನ್ನೊಬ್ಬರು ಗುರುಸ್ವಾಮಿ ಅಂತ ಅವರಿಗೆ ಮೊದಲು ಒಂದು ಕಾಲು ಇರಲಿಲ್ಲ, ದಟ್ಟಿ ಪಂಚೆ ಶರ್ಟು ತೊಡುತ್ತ ಇದ್ದರು. ಒಳ್ಳೇ ಇಂಗ್ಲಿಷ್ ಪಾಠ.

ಆಮೇಲೆ ಇವರು ಒಂದು ಕಾಲು ಹಾಕಿಸಿಕೊಂಡು ವಾಕಿಂಗ್ ಸ್ಟಿಕ್ ಊರುತ್ತ ಫುಲ್ ಸೂಟಿನಲ್ಲಿ ಬರೋರು.... ಇವರ ನೆನಪೂ ಸಹ ಇದೆ.

ಹೈಸ್ಕೂಲು ಬಂದೆನಾ... ಅಲ್ಲಿನ ಮೇಷ್ಟರು ಬಿಡಿ, ಜತೆಯಲ್ಲಿ ಓದಿದ, ಮುಂದಿನ ಹಿಂದಿನ ಕ್ಲಾಸಿನ ಒಂದೊಂದು ಹುಡುಗಿ ಹೆಸರೂ ಸಹ ಈಗಲೂ ನೆನಪಿನಲ್ಲಿ..! ಆ ಕಾಲದ ಅಂದರೆ ಐದೂವರೆ ದಶಕದ ನಂತರವೂ ಹುಡುಗೀರ ಹೆಸರು ಅದು ಹೇಗೆ ನೆನಪಿನಲ್ಲಿದೆ ಅಂತ ನನ್ನಾಕೆ ಆಗಾಗ ಕಾಲು ಕೆರೆದು ಜಗಳಕ್ಕೆ ಬರುವುದುಂಟು!

ಹೈಸ್ಕೂಲಿನಲ್ಲಿ ನನ್ನ ಮೇಲೆ ತುಂಬಾ ಪ್ರಭಾವ ಬೀರಿದವರಲ್ಲಿ ಕೆ ಆರ್ ಎನ್, ಯು ವಿ ಆರ್ , ಬೀ ವಿ ಆರ್, ಬಿ.ಎಸ್.ಜಿ. ಯಾನೆ ಬಿ ಎಸ್ ಗುಂಡೂರಾವ್.... ಹೀಗೆ ಹತ್ತು ಹಲವು ಗುರುಗಳು.

ಶ್ರೀ ಕೆ. ಆರ್. ನರಸಿಂಹಮೂರ್ತಿ ಯಾನೆ ಕೆ.ಆರ್.ಎನ್..

ನರಸಿಂಹಮೂರ್ತಿಅಂದರೆ ನಮಗ್ಯಾರಿಗೂ ಯಾರು ಅಂತಲೇ ತಿಳಿಯೋದಿಲ್ಲ. ಆದರೆ ಕೆ.ಆರ್.ಎನ್. ಅಂದ ಕೂಡಲೇ, ನಾಲ್ಕೈದು ದಶಕಗಳ ಹಿಂದಿನ ನಮ್ಮ ಪ್ರೌಢಶಾಲಾ ದಿವಸಗಳಿಗೆ ನಮ್ಮ ಮನಸ್ಸು ಹಾರುತ್ತದೆ ಹಾಗೂ ಏಕ್ದಂ ಪುಟ್ಟ ಮಕ್ಕಳಾಗಿಬಿಡುತ್ತೇವೆ.

ಕೆ.ಆರ್.ಎನ್. ನಾನು ಹೈಸ್ಕೂಲಿಗೆ ಸೇರುವ ಮೊದಲೇ ವಿವೇಕವರ್ಧಿನಿಯ ಶಿಕ್ಷಕ ಗುಂಪಿನಲ್ಲಿದ್ದವರು. ಎಲ್ಲರಿಗಿಂತಲೂ ಹಿರಿಯರು ಮತ್ತು ನೋಡಿದ ಕೂಡಲೇ ಒಂದು ರೀತಿಯ ಆತ್ಮವಿಶ್ವಾಸ ಹಾಗೂ ಪ್ರೀತಿ ಹುಟ್ಟಿಸುವ ಮುಖಭಾವ ಅವರದ್ದು. ಪಾಠವನ್ನು ಸುಲಲಿತವಾಗಿ ಬಿಡಿಸಿ ಬಿಡಿಸಿ ಅವರು ಹೇಳುತ್ತಿದ್ದ ರೀತಿ ಮನೆಯಲ್ಲಿನ ಮುತ್ತಾತ ಮರಿಮಗನನ್ನು ಎದುರು ಕೂಡಿಸಿಕೊಂಡು ಗಾಯತ್ರಿ ಮಂತ್ರ ಹೇಳಿಕೊಡುವ ಹಾಗೆ ತೋರುತ್ತಿತ್ತು.

ಯಾರ ಮೇಲೂ ಕೋಪ ಮಾಡಿಕೊಳ್ಳದ, ಹಸನ್ಮುಖಿ ಅವರು. ಮೈಸೂರು ಶೈಲಿಯ ಕರಿ ಬಣ್ಣದ ಟೋಪಿ, ಕಚ್ಚೆ ಪಂಚೆ. ಸುಮಾರು ಕರಿಯ ಬಣ್ಣದ ಕೋಟು, ಹಣೆಗೆ ಗಂಧಅಕ್ಷತೆ.....ಆಗಿನ ಕಾಲದ ಸಭ್ಯ ಹಾಗೂ ಸುಸಂಸ್ಕೃತರ ಯುನಿಫಾರ್ಮು..

ತರಗತಿಯಲ್ಲಿ ಹೆಚ್ಚು ಅಂಕ ತೆಗೆಯುವ ಹಾಗೂ ಅತಿ ಕಡಿಮೆ ಅಂಕ ತೆಗೆಯುವ ವಿದ್ಯಾರ್ಥಿ ಇವರಿಗೆ ಸಮಾನ ಪ್ರೀತಿಪಾತ್ರರು. ನಾನು ಎರಡನೇ ಗುಂಪಿನ ಖಾಯಂ ಸದಸ್ಯ. ಶಾಲೆಯಿಂದ ಹೊರಗೆ ಸಿಕ್ಕಾಗ ಬಾರೋ ಅಂತ ಕೂಗುವರು. ಎಷ್ಟು ಸೋಶಿಯಲ್ ಸ್ಟಡೀಸ್‌ನಲ್ಲಿ ಈ ಸಲ.... ಅಂತ ಕೇಳುವರು. ನೂರಕ್ಕೆ ಹನ್ನೆರೆಡು ಸಾರ್ ಅನ್ನುತ್ತಿದ್ದೆ.

ಹೇಗೆ ಓದುವೆ, ಯಾವ ಹೊತ್ತಿನಲ್ಲಿ ಓದುವುದು.... ಹೀಗೆ ವಿಷಯ ತಿಳಿದು ಅದರ ಪರಿಷ್ಕರಣೆ ಮಾಡುತ್ತಿದ್ದರು. ತರಗತಿಯಲ್ಲಿ ಹುಡುಗರು ಹೇಗೆ ಓದುತ್ತಾರೆ ಅಂತ ನನ್ನ ಉದಾಹರಣೆ ಇಟ್ಟುಕೊಂಡು ಹೇಗೆ ಓದಬೇಕು ಅಂತ ವಿವರಿಸುತ್ತಿದ್ದರು. ಬಹುಶಃ ಮೇಷ್ಟು ಮೇಷ್ಟ್ರೇ ಕುಳಿತಾಗ ಈ ಸಂಗತಿ ಚರ್ಚೆ ಆಗುತ್ತಿತ್ತು ಅಂತ ಕಾಣುತ್ತೆ. ಮಿಕ್ಕ ಮೇಷ್ಟುಗಳು ನನ್ನ ಓದನ್ನು ನನಗೆ ತಿಳಿಸುತ್ತಾ ಇದ್ದದ್ದು ಹೀಗೆ..... ಏನೋ ಶಾಮನ ತಮ್ಮ ನೀನು, ಅವನು ಕ್ಲಾಸಿಗೇ ಫಸ್ಟ್. ನೀನೇಕೆ ಹೀಗೇ..? ನಮ್ಮಣ್ಣ ನನಗಿಂತ ಎರಡು ವರ್ಷ ಸೀನಿಯರ್ ಇದೇ ಶಾಲೇಲಿ ಮತ್ತು ಸಖತ್ ಬುದ್ಧಿವಂತ. ಇಡೀ ಹೈಸ್ಕೂಲಿನ ಜೀವನದಲ್ಲಿ ನನ್ನ ಪ್ರತಿಯೊಂದು ನಡಾವಳಿಯನ್ನು ಹೋಲಿಕೆಯಲ್ಲೇ ಜೀರ್ಣಿಸಿಕೊಂಡವನು ಅಂದರೆ ಅದು ನಾನೇ! ನಾನು ಶಿಕ್ಷಕ

ವೃಂದದಲ್ಲಿ ಶಾಮನ ತಮ್ಮ ಅಂತಲೇ ಗೊತ್ತಿದ್ದೋನು ಮತ್ತು ಈಗಲೂ, 50 ವರ್ಷದ ನಂತರವೂ ಸುಮಾರು ಅಂದಿನ ಗೆಳೆಯರು ಹಾಗೇ ಕೂಗುತ್ತಾರೆ. ಇದು ನನಗೆ ಖುಷಿನೂ ಕೊಡುತ್ತೆ. ಕೆ.ಆರ್.ಎನ್. ಹೈಸ್ಕೂಲಿನಿಂದ ನಿವೃತ್ತರಾದರು...ಸರ್ಕಾರಿ ಹುದ್ದೆಯಿಂದ ನಿವೃತ್ತರಾದ ಮೇಲೆ ಇಲ್ಲಿಗೆ ಸೇರಿದ್ದರು.

1971 ಅಂತ ಕಾಣುತ್ತೆ. ಅಷ್ಟರಲ್ಲಿ ನಾವು ಉದ್ಯೋಗಸ್ಥರಾಗಿದ್ದೆವು. ಒಂದು ದಿವಸ ತುರ್ತುತುರ್ತಾಗಿ ದುಗುಡದಿಂದ ಶಾಮು ಮನೆಯಿಂದ ಹೊರಟ, ಒಂದೆರೆಡು ಗಂಟೆ ನಂತರ ವಾಪಸ್ಸು ಬಂದ.

ಏನು ಏನಾಯಿತು... ಅಂತ ವಿಚಾರಿಸಿದೆ. ಕೆ.ಆರ್.ಎನ್. ಹೋಗಿಬಿಟ್ರು ಅಂತ ಶ್ರೀನಾಥಂಗೆ ಯಾರೋ ಹೇಳಿದ್ರಂತೆ, ಅವರ ಮನೆಗೆ ಹೋಗಿದ್ದೆವು.. ಅಂದ.

ಮತ್ತೆ ಇಷ್ಟು ಬೇಗ ಬಂದೆ... ನಾನು.

ಅವರ ಮನೆಗೆ ಹೋದರೆ ಮನೆ ಮುಂದೆ ಅವರೇ ಕೂತಿದ್ದರು, ಮಾತಾಡಿಸಿ ಬಂದೆವು...

ಶ್ರೀನಾಥ, ಶಾಮರಾವ್ ಇಬ್ಬರೂ ಕೆ.ಆರ್.ಎನ್. ಗೆ ಪಟ್ಟ ಶಿಷ್ಯರು. ಶ್ರೀನಾಥ್ ಎಂ.ಎಸ್. ಓದಿದರೆ, ಶಾಮು ಎಂ.ಡಿ.ಎಸ್. ಓದಿದ್ದು.

ಹೀಗಿತ್ತು ಗುರು ಶಿಷ್ಯರ ಸಂಬಂಧ.

ನಮ್ಮ ಬೌದ್ಧಿಕತೆಯನ್ನು ಉತ್ತಮ ಪಡಿಸಿಕೊಳ್ಳಲು ಭದ್ರವಾದ ಅಡಿಪಾಯ ನಮಗೆಲ್ಲರಿಗೂ ಪ್ರೌಢಶಾಲೆಯಲ್ಲಿಯೇ ಆರಂಭವಾಗಿತ್ತು. ಈ ಬುನಾದಿ ಹಾಕಿದ ಶಿಕ್ಷಕರಲ್ಲಿ ಬಿ.ಎಸ್.ಜಿ. ಸಹ ಪ್ರಮುಖರು. ಬಿಳಿಯ ಜುಬ್ಬಾ ಮತ್ತು ಪೈಜಾಮ ಇವರ ಸಮವಸ್ತ್ರ. ಇದನ್ನು ಬಿಟ್ಟು ಅವರನ್ನು ರೂಪಿಸಿಕೊಳ್ಳುವುದೇ ಸಾಧ್ಯವಿರಲಿಲ್ಲ. ಅಗಲವಾದ ಹಸ್ತದಲ್ಲಿ ಬೆರಳುಗಳನ್ನು ಬೊಂಬೆ ಆಡಿಸುವವರ ಗತ್ತಿನಲ್ಲಿ ಆಡಿಸುತ್ತಾ ಅವರು ಪಾಠ ಮಾಡುವುದನ್ನು ನೋಡುವುದೇ ಸಂತಸದ ಸಂಗತಿ. ಯಾರ ಮೇಲೂ ಸಿಡುಕಿದ್ದು ಕೋಪಿಸಿಕೊಂಡಿದ್ದು ನೆನಪೇ ಇಲ್ಲ. ಮಾಡುವ ಪಾಠದಲ್ಲಿ ತಾದ್ಯಾತ್ಮತೆ ಮತ್ತು ಅವು ಕೇಳುಗರಿಗೆ ಅರ್ಥವಾಗುವ ಹಾಗೆ ಹೇಳುವಲ್ಲಿ ಪರಿಣತಿ ಇವರಿಗಿತ್ತು. ಕನ್ನಡ ಮತ್ತು ಸೈನ್ಸ್ ಇವರು ನಮಗೆ ಬೋಧಿಸಿದ್ದು. ಪಾಠದ ಜತೆಗೆ ಇತರೆ ವಿಷಯಗಳಲ್ಲೂ ಜ್ಞಾನ ತುಂಬಿದವರು. ಕಾಲೇಜು ದಿನಗಳಲ್ಲಿ ಯಾವ್ಯಾವ ಪುಸ್ತಕ ಓದಬೇಕು ಅಂತ ಒಂದು ಪಟ್ಟಿ ಹೇಳಿದ್ದರು. ಅದರಲ್ಲಿ ಅಂದಿನ ಎಲ್ಲಾ ಕ್ಲಾಸಿಕ್ ಪುಸ್ತಕಗಳ ಹೆಸರು ಇದ್ದವು. ವುದರಿಂಗ್ ಹೈಟ್ಸ್, ಆನ್ನ ಕರೇನಿನಾ, ಡೇವಿಡ್ ಕಾಪರ್‌ಫೀಲ್ಡ್, ಡಿಸ್ಕವರಿ ಆಫ್ ಇಂಡಿಯಾ.... ಹೀಗೆ. ಆಯಾಚಿತವಾಗಿ ಈ ಪುಸ್ತಕಗಳನ್ನು ಓದುವಾಗ ಬಿ.ಎಸ್.ಜಿ. ನೆನಪಿಗೆ ಬರಲೇಬೇಕು. ಇನ್ನೊಂದು ನಮಗೆ ಅರಿವಿಲ್ಲದ ಹಾಗೆ ನಮ್ಮಲ್ಲಿ ಉತ್ತಮ ಸಾಹಿತ್ಯ ಓದುವ ಅಭಿರುಚಿ ಬೆಳೆಸಿದ ಅವರ ರೀತಿ. ಜಿ.ಪಿ. ರಾಜರತ್ನಂ, ಪುತಿನ, ಮಲ್ಯ ಮುಂತಾದ ಹಿರಿಯ ಸಾಹಿತಿಗಳನ್ನು ತುಂಬಾ ಹತ್ತಿರದಿಂದ ನೋಡುವ, ಅವರ ಮಾತು ಕೇಳುವ ಅವಕಾಶ ಬೇರೆ ಯಾವ ಶಾಲೆಯಲ್ಲಿ ಸಿಕ್ಕಿತೋ ಇಲ್ಲವೋ ನಮಗಂತೂ ಇದು ಸಹಜವಾಗಿ ಅನ್ನುವಹಾಗೆ ಸಿಕ್ಕಿತು. ಅಲ್ಲದೆ ಜಿ.ಪಿ.ಆರ್. ಅವರ ಸುಮಾರು ಕಿರುಹೊತ್ತಿಗೆಗಳು ನಮಗೆ ಸಿಕ್ಕಿದ್ದೂ ಇವರ ಮೂಲಕವೇ. ಜಿ.ಪಿ.ಆರ್. ಯಾವುದಾದರೂ ಕಾರ್ಯಕ್ರಮಕ್ಕೆ ಆಹ್ವಾನ ಪಡೆದಾಗ ಇಂತಿಷ್ಟು ಮೌಲ್ಯದ ಪುಸ್ತಕ ಕೊಂಡರೆ ಬರುವುದಾಗಿ ಷರತ್ತು ಹಾಕುತ್ತಿದ್ದ ಸಂಗತಿ ಎಷ್ಟೋ ವರ್ಷಗಳ ನಂತರ ತಿಳಿದಿದ್ದು. ಬಿ.ಎಸ್.ಜಿ. ಈ ಶರತ್ತುಗಳಿಗೆ ಒಪ್ಪಿ ಹಿರಿಯರನ್ನು ನಮಗೋಸ್ಕರ ಕರೆ ತರುತ್ತಿದುದು ಅವರ ಮೇಲಿನ ಅಭಿಮಾನ ಹೆಚ್ಚಿಸಿತು. ಇದು ರಾಜಾಜಿನಗರದ ವಿವೇಕ ವರ್ಧಿನಿ ಶಾಲೆ ನಮ್ಮನ್ನು ಅದರ ತೆಕ್ಕೆಗೆ ತೆಗೆದುಕೊಂಡ ರೀತಿ.

ಶಾಲಾ ದಿನಗಳ ನಂತರ ಬಿ.ಎಸ್.ಜಿ.ಅವರ ಸಂಪರ್ಕ ಕಡಿಮೆ ಆಗಿತ್ತು.1995

ರಲ್ಲಿ ಭಾರತೀಯ ವಿದ್ಯಾ ಭವನದಲ್ಲಿ ಒಂದು ಕಾರ್ಯಕ್ರಮ ಯೋಜಿಸಿದ್ದೆವು. ನಾನೇ ಕಾರ್ಯಕ್ರಮದ ನಿರೂಪಕ. ಸಭಿಕರ ಮಧ್ಯೆ ಬಿ.ಎಸ್.ಜಿ. ಅವರನ್ನು ನೋಡಿದೆ. ಕೆಂಪು ನೀಲಿ ಚೌಕಳಿಯ ಬುಶ್ ಶರ್ಟ್ ಮತ್ತು ಎಂದಿನ ದೊಗಲೆ ಪಾಯಿಜಾಮ ಅವರ ಅಂದಿನ ಡ್ರೆಸ್ಸು. ಕಾರ್ಯಕ್ರಮ ಮುಗಿದ ನಂತರ ಅವರನ್ನು ಮಾತನಾಡಿಸಲು ಹೋದರೆ ಅವರೇ ನನ್ನ ಬಳಿ ಬರುತ್ತಿದ್ದರು. ಕೈಮುಗಿದು ನನ್ನ ಸಾಹಿತ್ಯ ಮಿತ್ರರ ಪರಿಚಯ ಮಾಡಿದೆ. ಸುಮಾರು ಎಲ್ಲರೂ ಅವರಿಗೆ ತಿಳಿದವರೇ. ನಿವೃತ್ತಿ ನಂತರ ಭಾರತೀಯ ವಿದ್ಯಾಭವನದ ಒಂದು ವಿಭಾಗದ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಿದ್ದರು. ನಂತರ ಸುಮಾರು ಕಾರ್ಯಕ್ರಮಗಳಲ್ಲಿ ಅವರ ಭೇಟಿ ಮಾಡುತ್ತಿದ್ದೆ. ನನ್ನ ಗೆಳೆಯರೆದುರು ಐ ಆಮ್ ಪ್ರೌಡ್ ಆಫ್ ಹಿಮ್ ಅಂತ ನನ್ನ ಬಗ್ಗೆ ಅವರು ಹೇಳುತ್ತಿದ್ದರೆ ನಾಚಿಕೆಯಿಂದ ಕುಗ್ಗಿ ಹೋಗುವ ಸ್ಥಿತಿ ನನ್ನದಾಗುತ್ತಿತ್ತು.

ನಮ್ಮಣ್ಣ ನಾನು ಆಗಾಗ ಬಿ.ಎಸ್.ಜಿ. ಅವರನ್ನು ನೆನೆಯುತ್ತಿದ್ದೆವು. ನಮ್ಮನ್ನು ರೂಪಿಸಿದ ಹಲವು ವ್ಯಕ್ತಿಗಳು ಹಾಗೂ ಶಕ್ತಿಗಳಲ್ಲಿ ಬಿ.ಎಸ್.ಜಿ. ಅವರಿಗೆ ಒಂದು ಪ್ರಮುಖ ಸ್ಥಾನವಿದೆ.

ಯಾವಾಗಲಾದರೂ ಧುತ್ತೆಂದು ಅವರ ಮುಂದೆ ನಿಲ್ಲಬೇಕು, ಅವರನ್ನು ಪ್ರೀತಿಯಿಂದ ಅಪ್ಪಿಕೋ ಬೇಕು ಅನ್ನುವ ಆಸೆ ಈಚೆಗೆ ಮನಸ್ಸಿನಲ್ಲಿ ಬರುತ್ತಿದೆ.

(ಶ್ರೀ ಬಿ.ಎಸ್.ಜಿ. ಅವರು ಕಳೆದ ವರ್ಷ ನವೆಂಬರ್‌ನಲ್ಲಿ ಕಾಲವಾದರು)

ನಂತರ ಕಾಲೇಜು ದಿವಸಗಳಲ್ಲಿ ಎಂ ಇ ಎಸ್ ಕಾಲೇಜಿನಲ್ಲಿ ಶ್ರೀನಿವಾಸ ಶರ್ಮಾ, ಕ ವೆಂ ರಾಜಗೋಪಾಲ್, ಎಸ್ ಶ್ರೀನಿವಾಸ ರಾವ್, ಕಮಲಮ್ಮ, ಶಾರದಮ್ಮ ನೆನಪಿನಲ್ಲಿ ಉಳಿದರೆ ಗ್ಯಾಸ್ ಕಾಲೇಜಿಗೆ ಬಂದ ನಂತರ ಜ್ಞಾನದ ರಾಶಿಯೇ ಅಲ್ಲಿತ್ತು. ಎಂ ವಿ ಸೀತಾರಾಮಯ್ಯ, ಹಂಪನಾ, ಬ್ರಹ್ಮಪ್ಪ, ನಂಜುಂಡ ಶಾಸ್ತ್ರಿ ಇವರು ಭಾಷಾ ಬೋಧನೆ ಮಾಡಿದರೆ ರಾಮಾಚಾರ್ ಫಿಸಿಕ್ಸು, ನಾವಡ ಫೋಟೋ ಎಲೆಕ್ಟ್ರಿಸಿಟಿ, ಉಮರ್ಜಿ ಮ್ಯಾತ್ಸು, ಸೇತು ರಾವ್ ಅನಲಿಟಿಕಲ್ ಕೆಮಿಸ್ಟ್ರಿ.... ಹೀಗೆ ದಿಗ್ಗಜರ ಗುಂಪು ಅಲ್ಲಿತ್ತು. ಯಾವ ಕ್ಲಾಸಿಗೂ ಬಂಕ್ ಮಾಡೋ ಹಾಗಿರಲಿಲ್ಲ. ಆದರೂ ಕಾಲೇಜಿನ ಅರ್ಧ ಫರ್ಲಾಂಗ್ ದೂರದಲ್ಲಿ ಇರುವ ಟಾಕೀಸುಗಳು ಮಾರ್ನಿಂಗ್ ಶೋಗೆ ಬಾರಯ್ಯಾ ಅಂತ ಕೈ ಬೀಸಿ ಕರೆದರೆ ಯಾವ ಸನ್ಯಾಸಿ ತಾನೇ ಇಲ್ಲ ಅಂದಾನು.... ಹೀಗಾಗಿ ಅದೆಷ್ಟು ಸಿನಿಮಾ ನೋಡಿದೆವೋ ನೆನಪಿಲ್ಲ. ಆ ಕಾಲದ ಕ್ಲಾಸಿಕ್ ಸಿನೆಮಾಗಳು ಅದೂ ಕ್ಲಾಸಿಗೆ ಚಕ್ಕರ್ ಹೊಡೆದು ನೋಡಿದವು, ಈಗಲೂ ಮೆದುಳಿನ ಒಂದು ಮೂಲೆಯಲ್ಲಿ ಗಟ್ಟಿಯಾಗಿ ಕೂತಿವೆ..

ಮತ್ತೊಂದು ಆಕರ್ಷಣೆ ಅಂದರೆ ಆಗ ಸೆಂಟ್ರಲ್ ಕಾಲೇಜು ಮೈದಾನದಲ್ಲಿ ನಡೆಯುತ್ತಿದ್ದ ರಣಜಿ ಮತ್ತು ವಿದೇಶದ ಟೀಮುಗಳ ಜತೆ ನಮ್ಮವರು ಆಡುತ್ತಿದ್ದ ಕ್ರಿಕೆಟ್ ಮ್ಯಾಚುಗಳು. ನಾಲ್ಕಾಣೆ ಟಿಕೆಟ್ ಇದ್ದರೂ ಯಾವ ಮ್ಯಾಚನ್ನೂ ಟಿಕೆಟ್ ತಗೊಂಡು ನೋಡಿಲ್ಲ. ಬದಲಿಗೆ ಕಾಂಪೌಂಡ್ ಹಾರಿ ಅಥವಾ ಪ್ರಸನ್ನ ಕುಮಾರ್ ಮೆಮೋರಿಯಲ್ ಹಾಲ್ ಹತ್ತಿ ಅಲ್ಲಿ ಮರದ ಕೊಂಬೆ ಹಿಡಿದು ಇಳಿದು ಮೈದಾನ ಸೇರುತ್ತಿದ್ದೆವು ಮತ್ತು ಅದು ಹೇಗೋ ಮುಂದೆ ಪೆವಿಲಿಯನ್ ಸಹ ನಮ್ಮದಾಗುತ್ತಿತ್ತು..... ಪ್ರಸನ್ನ, ಚಂದ್ರಶೇಕರ್, ಸುಬ್ರಹ್ಮಣ್ಯಂ, ಕುಂದರನ್, ಜಯಪ್ರಕಾಶ್ ಮೊದಲಾದ ಅಂದಿನ ಕ್ರಿಕೆಟ್ ಆಟಗಾರರ ಕೈಗಳನ್ನು ಅದೆಷ್ಟು ಬಾರಿ ಕುಲುಕಿದ್ದೇವೋ ಲೆಕ್ಕ ಇಲ್ಲ!

ಆಗ ಇನ್ನೂ ಚಿನ್ನಸ್ವಾಮಿ ಸ್ಟೇಡಿಯಂ ಹುಟ್ಟಿರಲಿಲ್ಲ! ಮತ್ತೆ ಆ ಕಾಲ ಬರಬಾರದೇ ಅಂತ ಈಗ ಅನ್ನಿಸುತ್ತೆ.

ಹೀಗೆ ನಾವು ಐವತ್ತು ವರ್ಷದ ಹಿಂದೆ ನಮ್ಮ ಜೀವನ ರೂಪಿಸಿಕೊಂಡು ಬದುಕಿ ಬಾಳಿದ್ದು....

■

# ಗಾದೆ ಗುಡಾಣ

**● ಪ್ರಕಾಶ್**

ಇಲ್ಲ, ವೇದ ಸುಳ್ಳಾದರೂ ಗಾದೆ ಸುಳ್ಳಾಗಲ್ಲ ಅಂತ ನಾನು ಸಾಧಿಸುಕ್ಕೆ ಹೊರಟಿಲ್ಲ . ಗಾದೆಗಳು ಎಲ್ಲ ಭಾಷೆಗಳಲ್ಲೂ ಎಲ್ಲ ಸಂಸ್ಕೃತಿಗಳಲ್ಲೂ ಹಾಸುಹೊಕ್ಕಾಗಿವೆ. ಆಶ್ಚರ್ಯವೆಂದರೆ ಒಂದು ಭಾಷೆಯ ಗಾದೆಗೆ ಅದೇ ಅರ್ಥಬರುವ ಅಥವಾ ವಿರುದ್ಧವಾದ ಅರ್ಥ ಬರುವ ಗಾದೆಯೊಂದು ಬೇರೆ ಭಾಷೆಯಲ್ಲಿ ಕಾಣಬಹುದು. ಇಲ್ಲಿ ನೋಡಿ. ಕೆಳಗೆ ಒಂದು ಇಂಗ್ಲೀಷ್ ಗಾದೆ ಮತ್ತು ಕನ್ನಡದ ಅದರ ಅವಳಿ ಗಾದೆ ಕೊಟ್ಟಿದೆ. ಇಂತಹ ಉದಾಹರಣೆಗಳು ನಿಮಗೂ ಹೊಳೆದರೆ ಅಗತ್ಯವಾಗಿ ನಮಗೆ ಬರೆದು ತಿಳಿಸಿ.

1. ಹೀ ಹೂ ಹೆಸಿಟೇಟ್ಸ್ ಇಸ್ ಲಾಸ್ಟ್ **ತಾಳಿದವನು ಬಾಳೀಯಾನು.**
2. ಹೌ ಯು ಸೋ, ಸೋ ಯು ವಿಲ್ ರೀಪ್ **ಮಾಡಿದ್ದುಣ್ಣೋ ಮಹರಾಯ**
3. ಎ ಥಿಂಗ್ ವೆಲ್ ಬಿಗನ್ ಇಸ್ ಹಾಫ್ ಡನ್ **ಆರಂಭ ಶೂರಾಃ ಖಲು ದಾಕ್ಷಿಣಾತ್ಯಃ**
4. ಬಾರ್ಕಿಂಗ್ ಡಾಗ್ಸ್ ಸೆಲ್ಡಂ ಬೈಟ್ **ಬೊಗಳುವ ನಾಯಿ ಕಚ್ಚುವುದಿಲ್ಲ ವದರೂ ನಾಯಿ ಕಡಿಯಂಗಿಲ್ಲ. ( ಧಾರವಾಡದಲ್ಲಿ)**

   (ಇದನ್ನು ನಂಬಿ ನಾನು ಹದಿನಾಲ್ಕು ಇಂಜೆಕ್ಷನ್ ತಗೋಬೇಕಾಯಿತು.)
5. ಬೆಗ್ಗರ್ಸ್ ಕೆನಾಟ್ ಬಿ ಛೂಸರ್ಸ್ **ಧರ್ಮಕ್ಕೆ ದಟ್ಟಿ ಕೊಟ್ಟರೆ ಮೊಳ ಹಿಡಿದು ನೋಡಿದನಂತೆ**
6. ಡಿಸ್ಕ್ರೀಷನ್ ಇಸ್ ದ ಬೆಟರ್ ಪಾರ್ಟ್ ಆಫ್ ವ್ಯಾಲರ್. **ಆತುರಗಾರನಿಗೆ ಬುದ್ಧಿ ಮಟ್ಟ**
7. ಡೋಂಟ್ ಬೈಟ್ ದ ಹ್ಯಾಂಡ್ ದಟ್ ಫೀಡ್ಸ್ ಯು **ಉಪ್ಪು ತಿಂದ ಮನೆಗೆ ಎರಡು ಬಗೆಯಬಾರದು.**
8. ಕ್ಯಾರಿಯಿಂಗ್ ಕೋಲ್ ಟು ನ್ಯೂಕ್ಯಾಸಲ್ **ಸಾಗರಕ್ಕೆ ಒಂದು ಚಮಚ ನೀರೆರೆದಂತೆ**
9. ಡೋಂಟ್ ಕೌಂಟ್ ಯುವರ್ ಚಿಕನ್ ಬಿಫೋರ್ ದೆ ಆರ್ ಹ್ಯಾಚ್ಡ್ **ಕೂಸು ಹುಟ್ಟುಕ್ಕೆ ಮುಂಚೆ ಕುಲಾವಿ ಹೊಲಿಸಿದರಂತೆ**
10. ಆಲ್ ದಟ್ ಗ್ಲಿಟರ್ಸ್ ಇಸ್ ನಾಟ್ ಗೋಲ್ಡ್. **ಹೊಳೆಯುವುದೆಲ್ಲ ಚಿನ್ನವಲ್ಲ.**
11. ಡೋಂಟ್ ಜಡ್ಜ್ ಎ ಬುಕ್ ಬೈ ಇಟ್ಸ್ ಕವರ್ **ಮುಖ ನೋಡಿ ಮಣೆ ಹಾಕು**
12. ಇಟ್ ಇಸ್ ನೆವರ್ ಟೂ ಲೇಟ್ ಟು ಮೆಂಡ್ **ಗಿಡವಾಗಿ ಬಗ್ಗದ್ದು, ಮರವಾಗಿ ಬಗ್ಗೀತೇ ?**
13. ಪೆನ್ ಇಸ್ ಮೈಟಿಯರ್ ದಾನ್ ದ ಸೋರ್ಡ್ **ತೊಟ್ಟಿಲು ತೂಗುವ ಕೈ ರಾಜ್ಯವನ್ನಾಳೀತು**
14. ಟೂ ಹೆಡ್ಸ್ ಆರ್ ಬೆಟರ್ ದಾನ್ ಒನ್ **ಹೆಡ್ಡರಾದರೂ ದೊಡ್ಡವರು ವಾಸಿ**
15. ವೇರ್ ದೇರ್ ಇಸ್ ಎ ವಿಲ್, ದೇರ್ ಇಸ್ ಎ ವೇ **ಮನಸ್ಸಿದ್ದರೆ ಮಾರ್ಗ.**

■

# ವೈದ್ಯರಾಜ ನಮಸ್ತುಭ್ಯಂ ಜನಜೀವ ಸಂರಕ್ಷಕ:

● ಬೇಲೂರು ರಾಮಮೂರ್ತಿ

'ವೈದ್ಯರಾಜ ಸಮಸ್ತುಭ್ಯಂ ಯಮರಾಜ ಸಹೋದರ:, ಯಮಸ್ತು ಹರತೇ ಪ್ರಾಣಾನ್, ವೈದ್ಯೋ ಪ್ರಾಣಾನ್ ಧನಾನಿ ಚ' ಅಂದುಕೊಂಡು ಸೋಮಿ ಪಕ್ಕದಲ್ಲಿ ಕೂತಾಗ ಸೋಮು ಓರೆಗಣ್ಣಿಂದ ಅವಳ ಕಡೆ ನೋಡಿದ. ಇವಳಿಗೆ ಸೊಂಟ ನೋವೋ, ಮಂಡಿ ನೋವೋ, ಕೀಲು ನೋವೋ ಬಂದಿರಬೇಕು, ಈಗ ಡಾಕ್ಟರ್ ಹತ್ರ ಕರ್ಕೊಂಡು ಹೋಗು ಅಂದರೆ ಸಾವಿರವೋ ಎರಡು ಸಾವಿರವೋ ಜೋಬಿಂದ ಆಚೆ ಹೋಗಿ ಬೀಳುತ್ತೆ ಅನಿಸಿತು.

ಎಷ್ಟು ತಿಂಗಳೇ ಅಂತ ಕೇಳಿದ. ಯಾರಿಗೆ ಅಂದಳು.

ಇಲ್ಲಿ ಇರೋದು ಒಂದು ಗಂಡು ಇನ್ನೊಂದು ಹೆಣ್ಣು. ಅಂದ ಮೇಲೆ ಹೆಣ್ಣಿಗೇ ತಾನೇ ಎಷ್ಟು ತಿಂಗಳು ಅಂತ ಕೇಳೋದು.

ಮೂರು ತಿಂಗಳು ಅಂದಳು ಸೋಮಿ.

ಸೋಮಿ ಬೆಚ್ಚಿ ಸೋಫಾದಿಂದ ಕೆಳಗೆ ಬಿದ್ದ.

ಇದೇನೇ ಈ ವಯಸ್ಸಿನಲ್ಲಿ ನಿನಗೆ ನಾಚಿಕೆಯಾಗಲ್ವೇನೇ ಅಂದ.

ನನಗೆ ನಾಚಿಕೆ ಆದರೆ ಅದರ ಎರಡರಷ್ಟು ನಾಚಿಕೆ ನಿಮಗಾಗಬೇಕು, ನೀವಿಲ್ಲದೇ ಮೂರು ತಿಂಗಳೇ ?

ಕಳ್ಳನನ್ನು ಕುತ್ತಿಗೆ ಪಟ್ಟಿ ಹಿಡಿದು ಪೋಲೀಸರು ಕೇಳಿದಂತಿತ್ತು.

ನಿಮ್ಮನ್ನು ಕಟ್ಕೊಂಡ ಮೇಲೆ ಮೂರು ತಿಂಗಳು ಅಂತ ಹೇಳ್ಕೊಳೋ ಸೌಭಾಗ್ಯ ನನಗೆ ಬಂದಿದ್ದು ಜೀವನದಲ್ಲಿ ಒಂದೇ ಬಾರಿ ನನ್ನ ಸ್ನೇಹಿತೆಯರನ್ನು ನೋಡಿ ಅವರೆಲ್ಲಾ ಮೂರು ಮೂರು ಸಾರಿ ನನಗೆ ಮೂರು ತಿಂಗಳು ಅಂತ ಹೇಳಿ ಬೀಗಿದ್ದಾರೆ.

ಹರಿದು ಹೋದ ಪ್ಯಾಂಟಿನ ಬಗ್ಗೆ ಕಳೆದುಹೋದ ಕಾಲದ ಬಗ್ಗೆ ಹೆಚ್ಚು ಮಾತಾಡಬಾರದು. ಈಗ ಮೂರು ತಿಂಗಳಿನ ವಿಷಯಕ್ಕೆ ಬಾ, ಅದು ಬಿಟ್ಟು ಮಾತು ತಿರುಗಿಸಬೇಡ.

ರೀ ನಾನು ನಿಮಗೆ ನನ್ನನ್ನು ಡಾಕ್ಟರ್ ಹತ್ತಿರ ಕರ್ಕೊಂಡು ಹೋಗಿ ಯಾಕೋ ಈಚೀಚೆಗೆ ಮಂಡಿ ನೋವು ಷುರುವಾಗಿದೆ ಅಂತ ಹೇಳಿ ಮೂರು ತಿಂಗಳಾಯಿತು ಅಂದಾಗ ಸೋಮು ನಿರಾಳವಾದ.

ಅಷ್ಟೇ ತಾನೇ ಕರ್ಕೊಂಡು ಹೋದರಾಯಿತು. ನೀವು ಹೆಂಗಸರು ಸ್ವಲ್ಪ ಮೊಂಡುತನ ಬಿಟ್ಟರೆ ಮಂಡಿ ನೋವು ತಾನೇ ತಾನಾಗಿ ಹೋಗುತ್ತೆ.

ನೀವೇನ್ರೀ ನನಗೆ ಮಂಡಿ ನೋವು ಅಂದ್ರೆ ಒಳ್ಳೆ ಮಂಡಿ ಲೆಕ್ಕ ಬರೆಯೋರ ತರಹ ಮಾತಾಡ್ತೀರ.

ಅದ್ಸರಿ ಇವತ್ತೇಕೆ ಇದ್ದಕ್ಕಿದ್ದ ಹಾಗೆ ಡಾಕ್ಟರ ಹತ್ತಿರ ಹೋಗಬೇಕು ಅನಿಸಿತು. ಅದೂ ಅಲ್ದೆ ಅದ್ಯಾವುದೋ ಕಾಲದ ಸುಭಾಷಿತ ಹೇಳ್ತಿದೀಯ.

ಹಾಗೇ ನೆನಪಾಯಿತು ಕಣ್ರೀ. ಡಾಕ್ಟರನ್ನು ಸುಮ್ಮನೆ ತಮಾಷೆಗೆ ಯಮರಾಜ ಸಹೋದರ: ಎನ್ನಬಹುದು. ಆದರೆ ಅದು ನಿಜ ಅಲ್ಲ ಅಲ್ವೇನ್ರೀ.

ಖಂಡಿತಾ ನಿಜ ಅಲ್ಲಾ. ವೈದ್ಯರು ಅಂದರೆ ಅವರು ನಮ್ಮ ಪ್ರಾಣ ಉಳಿಸುವ ದೇವರು.

ಯಾರು ನಿಮ್ಮ ಸ್ನೇಹಿತ ರಾಮೇಶ್ವರ ವೈದ್ಯರೇ.

ಲೇ ಅವರಲ್ವೇ ಅವರು ಅವರ ವಂಶದ ಹೆಸರು ಇಟ್ಕೊಂಡಿರೋದು ವೈದ್ಯ ಅಂತ. ನಾನು ಹೇಳ್ತಿರೋದು ನಿಜವಾದ ವೈದ್ಯರು. ಅವರು ಪ್ರಾಣ ಉಳಿಸಿದ್ದಕ್ಕೆ ಎಷ್ಟು ಕೊಟ್ಟರೂ ಸಾಲದು.

ನಾವು ಕೊಡೋದೇನು ಅವರೇ ಎಷ್ಟು ಬೇಕೋ ಅಷ್ಟು ಕಿತ್ಕೊತಾರಲ್ಲ. ರೀ ನಮ್ಮ ಸ್ನೇಹಿತರೊಬ್ಬರು ಹೇಳ್ತಿದ್ದರು ಒಂದು ಹೃದಯರೋಗದ ಆಸ್ಪತ್ರೆಯಲ್ಲಿ ಅಂಬುಲೆನ್ಸ್ ಶಬ್ದ ಕೇಳಿದರೆ ಸಾಕು ಆಸ್ಪತ್ರೆ ಒಳಗಿಂದ ದಾದಿಯರು ಒಂದು ಸ್ಟ್ರೆಚರ್ ಹಿಡಿದು ಓಡಿ ಬರ್ತಾರಂತೆ. ರೋಗಿಗಳು ಅಂದರೆ ಎಷ್ಟೊಂದು ಕಾಳಜಿ ಅಲ್ವೇನ್ರೀ

ಹೌದು ಹೃದಯರೋಗಿಗಳ ವಿಚಾರದಲ್ಲಿ ಒಂದೊಂದು ನಿಮಿಷ ಕಳೆದರೂ ಪ್ರಾಣ ಉಳಿಸೋದು ಕಷ್ಟ.

ಆದರೆ ಅವರು ಹೇಳಿದ್ದು ಹಾಗಲ್ವಂತೆ.

ಅಂದ್ರೆ ಏನೇ.

ಅಂಬುಲೆನ್ಸ್ ಶಬ್ದ ಕೇಳಿದ ತಕ್ಷಣ ಮಾಡ್ತಿರೋ ಕೆಲಸ ಬಿಟ್ಟು ಓಡಿ ಬರೋದು ಯಾಕೇಂದ್ರೆ ಒಂದೈದಾರು ಲಕ್ಷ ನಮ್ಮ ಆಸ್ಪತ್ರೆ ಅಕೌಂಟಿಗೆ ಬರುತ್ತೆ ಎನ್ನೋ ಖುಷಿಯಿಂದ ಅಂತೆರೀ.

ಅದೊಂದು ರೀತಿಯ ತಮಾಷೆಯ ಮಾತಿರಬಹುದು. ಒಂದು ವೇಳೆ ಅವರು ಹಾಗೆ ಬರಲಿಲ್ಲ ಅಂದ್ರೆ ಏನು ಗತಿ. ರೋಗಿ ಅಂಬುಲೆನ್ಸ್‌ನಲ್ಲೇ ಹರಹರಾ ಅಂದು ಬಿಡಬುದಲ್ವಾ.

ಆದರೂ ಈಗೀಗ ವೈದ್ಯಕೀಯ ರಂಗದಲ್ಲಿ ಬಹಳ ಸುಧಾರಣೆಗಳು ಅಭಿವೃದ್ಧಿಗಳು ಆಗಿವೆ. ಎಷ್ಟೋ ಘೋರ ಕಾಹಿಲೆಗಳಿಗೆ ಸುಲಭ ಚಿಕಿತ್ಸೆ ಬಂದಿದೆ. ತಮ್ಮ ಪ್ರಾಣವನ್ನು ಒತ್ತೆ ಇಟ್ಟು ಇನ್ನೊಂದು ಪ್ರಾಣವನ್ನು ಕಾಪಾಡುವ ವೈದ್ಯರನ್ನು ನಾವು ಯಾವಾಗಲೂ ದೇವರಿಗೆ ಹೋಲಿಸಬೇಕು.

ಹೌದೂರಿ ದೇವರು ನಮ್ಮನ್ನು ಹುಟ್ಟಿಸಿ ಎಲ್ಲ ಅಂಗಗಳನ್ನೂ ಸರಿಯಾಗಿ ಕೊಟ್ಟು ಕಳಿಸಿರುತ್ತಾನೆ. ಆದರೆ ಅದು ಕೆಟ್ಟುಹೋದರೆ ನಾವು ಮತ್ತೆ ದೇವರ ಹತ್ತಿರನೇ ಹೋಗೋಕಾಗಲ್ಲ ಅದಕ್ಕೆ ಅವನು ವೈದ್ಯರ ರೂಪದಲ್ಲಿ ಇಲ್ಲಿ ಇರುತ್ತಾನೆ. ನಮ್ಮೂರಲ್ಲಿ ಒಬ್ಬರು ವೈದ್ಯರು ಇದ್ದರು. ಅವರತ್ರ ಏನಾದರೂ ಕಾಹಿಲೆ ಅಂತ ಹೋದರೆ ಸುಮ್ಮನೆ ಅವರು ರೋಗಿಯ ಕೈ ಹಿಡಿದು ಏನಾಗಿಲ್ಲ ಬಿಡಯ್ಯ. ಒಂದು ಗುಳಿಗೆ ನುಂಗಿ ಮಲಗಿಕೋ ಎಲ್ಲ ಸರಿಹೋಗುತ್ತೆ ಅಂದರಂತೆ.

ನಾವು ಏನೇ ಕೆಲಸ ಮಾಡುವಾಗ ನಂಬಿಕೆ ಇಟ್ಟುಕೊಂಡಿರುವಂತೆ ವೈದ್ಯರ ಹತ್ತಿರ ಹೋದಾಗಲೂ ನಂಬಿಕೆ ಇರಬೇಕು.

ರೀ ನನ್ನ ಸ್ನೇಹಿತೆ ಹೇಳ್ತಿದ್ಲು. ಅವರ ಊರಲ್ಲಿ ಒಬ್ಬರು ಡಾಕ್ಟರು ಇದ್ದರಂತೆ ಅವರು ಯಾವ ರೋಗಿ ಹೋದರೂ ಪರೀಕ್ಷೆ ಮಾಡಿ ಎರಡು ಮಾತ್ರೆ ಕೊಟ್ಟು ಒಂದು ರಾತ್ರಿ ಮಲಗಿದಾಗ ತಗೋ, ಬೆಳಗ್ಗೆ ಎದ್ರೆ ಇನ್ನೊಂದು ತಗೋ ಅಂತ ಹೇಳ್ತಿದ್ರಂತೆ.

ಎಲ್ಲಾ ವೃತ್ತಿಯವರ ಬಗೆಗೆ ಜೋಕುಗಳು ಇರೋ ಹಾಗೆ ವೈದ್ಯರ ಬಗೆಗೂ ಇದೆ. ಆದರೆ ಅವುಗಳನ್ನು ಹಾಗೆ ಕೇಳಿ ಕೊಂಚ ನಕ್ಕು ಸುಮ್ಮನಿರಬೇಕು.

ರೀ ನಿಮಗೆ ಡಾಕ್ಟರ ಬಗೆಗೆ ಇರೋ ಒಂದು ಬೊಂಬಾಟ್ ಜೋಕು ಗೊತ್ತಾ

ಹೇಳು ಅದೇನು.

ಒಬ್ಬರು ಡಾಕ್ಟರು ಎಲ್ಲರಂತೆ ಅವರೂ ಮದುವೆಯಾದರಂತೆ. ಡಾಕ್ಟರು ಬಹಳ ಬ್ಯೂಟಿಫುಲ್ ಆಗಿದ್ರಂತೆ. ಅವರ ಹೆಂಡತಿಯೂ ಡಾಕ್ಟರಂತೆ ರೀ. ಅವರೂ ಇವರಿಗಿಂತ ತುಂಬಾ ಬ್ಯೂಟಿಫುಲ್ ಅಂತೆ. ಸೌಂದರ್ಯದಲ್ಲಿ ಒಬ್ಬರಿಗೊಬ್ಬರು ಪೈಪೋಟಿ ಎನ್ನುವಂತೆ ಇದ್ರಂತೆ ರೀ. ಇಬ್ಬರೂ ಬೇರೆ ಬೇರೆ ಆಸ್ಪತ್ರೆಗಳಲ್ಲಿ ಕೆಲಸ ಮಾಡ್ತಿದ್ರಂತೆ. ಕಾಲಕ್ರಮೇಣ ಡಾಕ್ಟರೂ ಗರ್ಭಿಣಿಯಾಗಿ ಮಗು ಹೆತ್ತರಂತೆ. ಎಲ್ಲರೂ ಅಚ್ಚರಿಪಡುವಂತೆ ಮಗು ಮಾತ್ರ ಬಹಳ ಕಪ್ಪಾಗಿತ್ತಂತೆ ಎಲ್ಲರಿಗೂ ಅಚ್ಚರಿಯಾದರೂ ಡಾಕ್ಟರಿಗೆ ಅಚ್ಚರಿಯಾಗಿರಲಿಲ್ಲವಂತೆ. ಆದರೆ ಡಾಕ್ಟರ್ ಸ್ನೇಹಿತರು ಕುತೂಹಲ ತಡೆಯಲಾರದೇ ಹೌ ಈಸ್ ದಿಸ್ ಡಾಕ್ಟರ್ ನೀವೂ ಬಹಳ ಚನ್ನಾಗಿದ್ದೀರ, ನಿಮ್ಮ ಹೆಂಡತಿಯೂ ಅಷ್ಟೇ ಚನ್ನಾಗಿದ್ದಾರೆ. ಆದರೆ ನಿಮ್ಮಿಬ್ಬರಿಗೆ ಹುಟ್ಟಿರುವ ಮಗು ಈ ಪಾಟಿ ಕಪ್ಪಗಿದೆ ಅಂತ. ಅದಕ್ಕೆ ಡಾಕ್ಟರು ನೋಡಿ ನಿಮಗೆಲ್ಲಾ ಅಚ್ಚರಿಯಾಗಿರಬಹುದು, ನನಗೆ ಅಚ್ಚರಿಯಾಗಿಲ್ಲ. ಯಾಕೆ ಗೊತ್ತಾ. ನಮಗೆ ಮದುವೆಯಾಗಿ ಮೂರು ವರ್ಷ ಆಯಿತು. ನನ್ನ ಹೆಂಡತಿ ಡಾಕ್ಟರಾದರೂ ಬಹಳ ಚನ್ನಾಗಿ ಅಡುಗೆ ಮಾಡ್ತಾಳೆ. ಆದರೆ ಒಂದೇ ತಾಪತ್ರಯ ಅಂದ್ರೆ ಏನು ಅಡಿಗೆ ಮಾಡಿದರೂ ಎಲ್ಲಾ ಸೀಸಿಬಿಡ್ತಾಳೆ. ರೊಟ್ಟಿ, ಉಪ್ಪಿಟ್ಟು, ದೋಸೆ, ಚಪಾತಿ, ಪರೋಟ ಕಡೆಗೆ ಅನ್ನ ಮಾಡಿದರೂ ಸೀಸಿಬಿಡ್ತಾಳೆ. ಹಾಗೆ ಮಗೂನೂ ಸೀಸಿಬಿಟ್ಟಿದ್ದಾಳೆ ಅಂದರಂತೆ.

ಇದು ಜೋಕು ಚನ್ನಾಗಿದೆ. ಆದರೆ ವಾಸ್ತವವಾಗಿ ನಾವು ಯೋಚಿಸಿದರೆ ಡಾಕ್ಟರ ವೃತ್ತಿ ಒಂದು ರೀತಿ ಸಮಾಜವನ್ನು ಆರೋಗ್ಯಕರವಾಗಿ ಇಡುವಂಥದು. ಎಷ್ಟೋ ವೇಳೆ ಅವರಿಗೆ ಅವರದೇ ಜೀವನ ಇದೆಯೋ ಇಲ್ಲವೋ ಅನ್ನುವಷ್ಟು ತುರ್ತಿನಲ್ಲಿ ಇರುತ್ತಾರೆ. ಆರೋಗ್ಯ ಕ್ಷೇತ್ರದಲ್ಲಿ ಇಷ್ಟೊಂದು ಆವಿಷ್ಕಾರ ಆಗಿರೋದು ಏನು ಸುಮ್ಮನೇನಾ. ಒಂದು ಕಾಲದಲ್ಲಿ ಔಷಧವೇ ಇಲ್ಲದ ಕಾಹಿಲೆಗಳಿಗೆ ನಮ್ಮ ವೈದ್ಯಸಮೂಹ ಸರಿಯಾದ ಔಷಧ ಕಂಡುಹಿಡಿದಿದ್ದಾರೆ. ಇನ್ನೊಂದು ತಮಾಷೆ ಪ್ರಸಂಗ ಹೇಳ್ತೀನಿ ಕೇಳು. ಒಂದು ಸಾರಿ ಮನೇಲಿದ್ದ ಅಜ್ಜಿಗೆ ಹುಷಾರಿರಲಿಲ್ಲವಂತೆ. ಆಗ ತಂದೆ ತನ್ನ ಮಗನನ್ನು ಕರೆದು ನೋಡೋ ಅಜ್ಜಿಗೆ ಹುಷಾರಿಲ್ಲ ಹೋಗಿ ಡಾಕ್ಟರನ್ನು ಕರ್ಕೊಂಡು ಬಾ ಅಂದರಂತೆ. ಆಗ ಮಗ ಹೋಗಿ ಡಾಕ್ಟರನ್ನು ಕರ್ಕೊಂಡು ಬಂದನಂತೆ. ನೊಡಿದರೆ ಅವನು ಕರ್ಕೊಂಡು ಬಂದಿದ್ದು ಪಶುವೈದ್ಯರನ್ನು. ಎಲ್ಲರೂ ಕಣ್ಣುಬಿಟ್ರಂತೆ. ಅಜ್ಜಿ ಕಿರುಚಾಡಿದಳಂತೆ. ಯಾಕೋ ಹೀಗೆ ಮಾಡಿದರೆ ಅಂದರೆ ನಾನು ಅಜ್ಜೀನ ಕತ್ತೆ ಅಂದ್ಕೊಂಡಿದ್ದೆ ಅಂದನಂತೆ. ಯಾಕೋ ಹಾಗೆ ಅಂದ್ಕೊಂಡಿದ್ದೆ ಅಂದ್ರೆ ಮತ್ತೆ ಅಮ್ಮ ಯಾರ ಹತ್ರ ಮಾತಾಡುವಾಗಲೂ ಅಜ್ಜಿ ಕಡೆ ಕೈ ತೋರಿಸಿ ನಮ್ಮನೇಲಿ ಒಂದು ಕತ್ತೆ ಇದೆ ಅಂತಿದ್ಲು. ಅದಕ್ಕೇ ನಾನು ಪಶುವೈದ್ಯರನ್ನು ಕರ್ಕೊಂಡು ಬಂದೆ ಅಂದ್ನಂತೆ. ಅಲ್ಲಿಗೆ ಮನೆ ಗುಟ್ಟು ರಟ್ಟಾಯಿತು.

ರೀ. ನಮಗೆ ತಲೆನೋವು, ಹೊಟ್ಟೆನೋವು, ಮಂಡಿನೋವು ಬರಿಸ್ಕೊಳೋದು ಗೊತ್ತು. ಆದರೆ ಅವರಿಗೆ ಅವುಗಳನ್ನು ನಿವಾರಣೆ ಮಾಡೋದು ಗೊತ್ತು. ಅದಕ್ಕೇ ಅವರಿಗೆ ನಾವು ವೈದ್ಯರಾಜ ನಮಸ್ತುಭ್ಯಂ ಜನಜೀವ ಸಂರಕ್ಷಕ: ಎಂದೆನ್ನೋಣವೇ.

ಖಂಡಿತಾ. ವೈದ್ಯರು ಇಲ್ಲದೇ ಈ ಸಮಾಜವೇ ಇಲ್ಲ. ನಾವು ದೇವರಿಗೆ ಕೈ ಮುಗಿಯುವುದನ್ನು ಮರೆತರೂ ಪರವಾಗಿಲ್ಲ ನಮ್ಮನ್ನು ಚನ್ನಾಗಿ ಇಟ್ಟಿರುವ, ಸಮಯ ಸಂದರ್ಭ ನೋಡದೇ ರೋಗಿಗಳ ಪ್ರಾಣ ಉಳಿಸುವ ವೈದ್ಯರೇ ದೇವರು. ■

# ಮಧ್ಯಾಹ್ನದಲ್ಲಿ ಉದ್ಯಾನ

**● ಕೆ ಎನ್ ಮಹಾಬಲ**

ನಿವೃತ್ತಿಯ ನಂತರ ಅದೊಂದು ದಿನ ಬೆಳಿಗ್ಗೆ ಯಾರನ್ನೋ ಕಾಣಲು ಹೊರಟಿದ್ದೆ. ಹೊರಡುವಾಗ ಕಾಲೇಜು ಉಪನ್ಯಾಸಕಿಯಾದ ಮಡದಿ ನಾನು ಒಂಬತ್ತಕ್ಕೆ ಹೊರಡುತ್ತಿದ್ದೇನೆ.ಬರೋದು ಎಷ್ಟು ಹೊತ್ತಿಗೆ ಎಂದು ಕೇಳಿದಳು.ನಾನು ಗೊತ್ತಿಲ್ಲ ಎಂದೆ. ಮನೆ ಬೀಗದಕೈ ಇದೆಯಾ? ಎಂದು ಕೇಳಿದಾಗ ಬಹಳ ಆತ್ಮವಿಶ್ವಾಸದಿಂದ ಜೇಬು ಮುಟ್ಟಿ ನೋಡಿಕೊಳ್ಳದೆಯೇ ಇದೆ, ಇದೆ ಎರಡು ಸಲ ಹೇಳಿದ್ದೆ. ವಾಪಸು ಬಂದಾಗ ಹತ್ತು ಗಂಟೆಯಾಗಿತ್ತು.ಜೇಬು ತಡಕಾಡಿದಾಗ ಬೀಗದಕೈ ಕಾಣೆ. ಬಿದ್ದುಹೋಯಿತೇ? ಅಥವಾ ತೆಗೆದುಕೊಂಡೇ ಹೋಗಿರಲಿಲ್ಲವೇ? ಅಂತೂ ಉತ್ತರಕ್ಕೆ ಮಡದಿ ವಾಪಸು ಬರುವವರೆಗೂ ನಾಲ್ಕು ಗಂಟೆಯವರೆಗೂ ಕಾಯದೆ ಬೇರೆ ದಾರಿಯಿಲ್ಲ.

ಹೊಟ್ಟೆಗೂ ನ್ಯಾಯ ಸಲ್ಲಿಸಬೇಕಾದ ಸಮಯ ಬಂದಿದ್ದರಿಂದ ಹತ್ತಿರದ ಹೋಟೆಲಿಗೆ ಉಪಾಹಾರ ಸೇವಿಸಿದೆ ಕಾಫಿಯ ಜತೆ. ಸಮಯ ಹತ್ತೂವರೆ ಆಗಿತ್ತು. ಬಡಾವಣೆಯಲ್ಲಿ ನಾಲ್ಕು ಸುತ್ತು ಹಾಕಿದೆ. ಮನೆಯ ಹತ್ತಿರದ ಮೆಡಿಕಲ್ ಅಂಗಡಿ, ದಿನಸಿ ಅಂಗಡಿ, ಹಾಲಿನ ಬೂತ್, ಹಾಪ್ ಕಾಮ್ಸ್ ಎಲ್ಲರ ಹತ್ತಿರವೂ ಮಾತಿನ ಸರಕು ಖಾಲಿಯಾಗುವವರೆಗೆ ಕಾಡು ಹರಟೆ ಹೊಡೆದರೂ ಹನ್ನೊಂದೂವರೆ ದಾಟಲಿಲ್ಲ.ಯಾಕೋ ಗಡಿಯಾರವೂ ಸಮಯ ತಡೆ ಚಳವಳಿ ನಡೆಸುತ್ತಿದೆಯೇ ಎನಿಸಿತು.ಬಿಸಿಲು ಏರುತ್ತಿತ್ತು.ಮನೆಯ ಹತ್ತಿರದ ಉದ್ಯಾನವನಕ್ಕೆ ಲಗ್ಗೆ ಇಟ್ಟರೆ ಹೇಗೆ? ಎಂದುಕೊಂಡೆ. ತಡವೇಕೆ ಎನ್ನುತ್ತ ಪಾರ್ಕಿನತ್ತ ಹೆಜ್ಜೆ ಇರಿಸಿದೆ.ಬಹುಶಃ ನನ್ನ ನಿರುದ್ಯೋಗದ ದಿನಗಳಲ್ಲಿಯೂ ಆ ಅವೇಳೆಯಲ್ಲಿ ಯಾವುದೇ ಉದ್ಯಾನದತ್ತ ಹೋಗಿರಲಿಲ್ಲ.

ಮೊದಲು ಕಂಡದ್ದು ಹಿರಿಯರ ಚಾವಡಿ ಎಂದೇ ನಾಮಾಂಕಿತವಾಗಿದ್ದ ಹಸಿರಿನ ಮಧ್ಯೆ, ಹೆಂಚಿನ ಛಾವಣಿ ಹೊದಿಸಿದ, ಪಂಚಕೋನ ಆಕೃತಿಯಲ್ಲಿ ಸುತ್ತಲೂ ಬೆಂಚುಗಳ ಜೋಡಿಸಿದ ಲತಾಮಂಟಪ. ಅಲ್ಲಿ ನನಗಿಂತ ಮೊದಲೇ ಸ್ಥಳ ಆಕ್ರಮಿಸಿದ್ದವರು ಹಲವು ಜನರಿದ್ದರು.ಅಂದಿನ ವೃತ್ತಪತ್ರಿಕೆ ಚಲ್ಲಾಪಿಲ್ಲಿಯಾಗಿ ಹರಡಿದ್ದವು."ಅ" ಪತ್ರಿಕೆಯ ಮೊದಲ ಹಾಳೆ ಒಂದು ಕಡೆ "ಆ "ಪತ್ರಿಕೆಯ ಮಧ್ಯದ ಹಾಳೆ ಮತ್ತೊಂದು ದಿಕ್ಕು.ಒಳ್ಳೆ ಆನೆ ಹೊಕ್ಕ ಕಬ್ಬಿನ ತೋಟದಂತಾಗಿತ್ತು ಅಲ್ಲಿನ ಸ್ಥಿತಿ..ಪವಡಿಸಿದ್ದ ಒಬ್ಬ ಕುಂಭಕರ್ಣ ವಂಶಜ ಸೊಳ್ಳೆ ಮುತ್ತದಿರಲೆಂದು ಒಂದು ಹಾಳೆ ಮುಖದ ಮೇಲೆ ಹಾಕಿಕೊಂಡಿದ್ದ. ಮತ್ತೊಬ್ಬ ಹಾಳೆಯನ್ನು ತನ್ನ ಬಿಳಿ ಪ್ಯಾಂಟು ಕೊಳೆಯಾಗುತ್ತದೆಂದು ಅಡಿಗೆ ಹಾಕಿಕೊಂಡಿದ್ದ.ಮಗದೊಬ್ಬ ವಾತಾವರಣ ತಂಪಾಗಿದ್ದರೂ ಬೀಸಣಿಗೆಯಂತೆ ವೃತ್ತಪತ್ರಿಕೆ ಮಡಿಸಿ ಗಾಳಿ ಹಾಕಿಕೊಳ್ಳುತ್ತಿದ್ದ.ಎಲ್ಲ ಪತ್ರಿಕೆಗಳನ್ನೂ ಕ್ರಮದಲ್ಲಿ ಜೋಡಿಸಿಕೊಂಡು ಒಂದು ಸಲವಲ್ಲ ನಾಲ್ಕು ಸಲ ಓದಿ ಪಕ್ಕಕ್ಕಿಟ್ಟೆ. ಮೊಬೈಲ್ ತೆಗೆದು ಸುಡೋಕು ಇತ್ಯಾದಿ ಆಟಗಳನ್ನು ಬ್ಯಾಟರಿ ಪೂರ್ಣ ಮುಗಿಯುವವರೆಗೂ ಆಡಿದೆ. ಅಲ್ಲಿಗೆ ಮೊಬೈಲ್ ಕತೆ ಮುಗಿಯಿತು.

ಸುತ್ತ ಕಣ್ಣಾಡಿಸಿದೆ. ಉದ್ಯಾನ ಅಂಥ ನಿರ್ಜನವಾಗಿಯೇನೂ ಇರಲಿಲ್ಲ.ಅಲ್ಲಿ

ದ್ವೀಪದಂತೆ ಇದ್ದ ಹಲವು ಬಗೆ ಜನ ಕಂಡರು.ಅಲ್ಲಿ ಒಂದು ಬೆಂಚಿನ ಮೇಲೆ ವಯಸ್ಕ ಗಂಡಸರು ತಮ್ಮ ಹೆಂಡತಿಯರಿಗೆ ಹಗಲಿರುಳೆನ್ನದೆ ನಿರಂತರವಾಗಿ ಪ್ರಸಾರವಾಗುವ ಸೀರಿಯಲ್ಗಳನ್ನು ನಿರಾತಂಕವಾಗಿ ನೋಡಲು ಅನುವಾಗುವಂತೆ ಉದ್ಯಾನ ಸೇರಿದ್ದರು. ಮಧ್ಯಾಹ್ನ ಊಟದ ಹೊತ್ತಿನವರೆಗೆ ಅವರಿಗೆ ಬಹುಶಃ ಮನೆಗೆ ಪ್ರವೇಶವಿರಲಿಲ್ಲ.

ಅರೆ ಇದೇನು ! ದೂರದ ಆ ಮೂಲೆಯಲ್ಲಿ ವರ್ತುಲಾಕಾರದಲ್ಲಿ ನಿಂತ ಜನರ ಗುಂಪು ಏನು ಮಾಡುತ್ತಿರಬಹುದು? ಪಕ್ಕದಲ್ಲಿ ಕುಳಿತಿದ್ದ ನಿತ್ಯ ಭೇಟಿ ನೀಡುವ ಆಸಾಮಿಯನ್ನು ಕೇಳಿದೆ "ಸಾರ್ ಅದು ಸೇಲ್ಸ್ ಮೀಟಿಂಗ್. ಆ ಬಿಳಿತಲೆಯ ಹಿರಿಯ ಸೇಲ್ಸ್ ಮ್ಯಾನೇಜರ್, ಟೈ ಹಾಕಿಕೊಂಡು ಕೈಕಟ್ಟಿ ನಿಂತ ಹೈಕಳು ಸೇಲ್ಸ್ ಮಾನ್ ಗಳು.ನಿನ್ನೆಯ ವ್ಯಾಪಾರ ಹೇಗಿತ್ತು? ಇವತ್ತಿನ ವ್ಯಾಪಾರ ಎಲ್ಲಿ ಹೇಗೆ ಅಂತ ಚರ್ಚೆ ನಡೀತಾ ಇದೆ ಇವತ್ತು ಯಾಕೋ ದಿನಾ ಬರೋ ಇಬ್ಬರು ಹುಡುಗೀರು ಕಾಣ್ತಾ ಇಲ್ಲ " ಎಂದು ವಾರ್ತಾಮಾಧ್ಯಮದವರ ಹಾಗೆ ಪಿನ್ ಟು ಪಿನ್ ವಿವರ ನೀಡಿದ. ಆಹಾ ಮಧ್ಯಾಹ್ನದ ಉದ್ಯಾನ ನಿಜಕ್ಕೂ ದೇಶದ ಅರ್ಥಿಕತೆಗೆ ಎಷ್ಟು ಉಪಯುಕ್ತ ಎಂದುಕೊಂಡೆ

ರಂಗದಿಂದಷ್ಟು ದೂರ ಎನ್ನುವಂತೆ ಅಲ್ಲಿ ಪ್ರತ್ಯೇಕವಾಗಿ ಕುಳಿತಿದ್ದ ಆ ಯುವಜೋಡಿ ಪ್ರಪಂಚದಲ್ಲಿ ತಾವಿಬ್ಬರೇ ಎನ್ನುವಂತೆ ಆನಂದಲೋಕದಲ್ಲಿ ವಿಹರಿಸುತ್ತಿದ್ದರು. ತಂತಮ್ಮ ಮನೆಗಳಿಂದ ತಂದಿದ್ದ ತಿನಿಸುಗಳನ್ನು ಪರಸ್ಪರ ತಿನ್ನಿಸುವ ಭೂಮದೆಲೆಯ ಲೀಲೆಯಲ್ಲೂ ಮೈಮರೆತಿದ್ದರು. ಛೇ! ಕಣ್ಣು ಹಾಕಬೇಡ ಅವರ ಸಂತಸಕ್ಕೆ ಅಡ್ಡಿ ಮಾಡಬೇಡ ಎಂದು ನನ್ನ ಮನಸ್ಸು ಎಚ್ಚರಿಸಿದಾಗ ಅಲ್ಲಿಂದ ನನ್ನ ದೃಷ್ಟಿ ಬದಲಿಸಿದೆ.

ಕೈಯಲ್ಲಿ ಹ್ಯಾಂಡಿಕ್ಯಾಮ್ ಹಿಡಿದು ಅಲ್ಲಿದ್ದ ಜನರೊಂದಿಗೆ ಮಾತನಾಡುತ್ತ ವಾರ್ತಾ ಮಾಧ್ಯಮದವರಂತೆ ಕಾಣುತ್ತಿದ್ದ ನಾಲ್ಕು ಜನರ ಗುಂಪು ನನ್ನತ್ತಲೂ ಧಾವಿಸಿತು. ಮುಖಕ್ಕೆ ಮೈಕ್ ಹಿಡಿದ ಒಬ್ಬ "ಮಧ್ಯಾಹ್ನದಲ್ಲಿ ಉದ್ಯಾನದ ಭೇಟಿ ಬಗ್ಗೆ ನಿಮಗೇನನ್ನಿಸುತ್ತದೆ" ಎಂದು ಕೇಳಿದ. ನಾನು "ನಾನು ಏನು ಹೇಳಲಿ, ನನಗಿದು ಅಪರೂಪದ ಭೇಟಿ "ಎಂದೆ. ಪಕ್ಕದವನತ್ತ ಚಲಿಸಿದರು. ಆ ಅನುಭವಸ್ಥ ಬಹಳ ಹೊತ್ತು ಅವರಿಗೆ ಕೊರೆದ.

ಅಲ್ಲಿ ಒಂದು ಬೆಂಚಿನ ಮೇಲೆ ವಿಧಾನಸೌಧದ ನಿವೃತ್ತ ಅಧಿಕಾರಿ ಮಂಚೇಗೌಡರು ಹೈಸ್ಕೂಲು ಬಾಲಕನೊಬ್ಬನೊಡನೆ ಚದುರಂಗದ ಆಟ ಆಡುತ್ತಿದ್ದರು. ವಯಸ್ಸು, ಅನುಭವ, ಅಂತಸ್ತುಗಳ ಭೇದವಿಲ್ಲದೆ ಕಿರಿಯನೊಬ್ಬನೊಡನೆ ಆಟವಾಡುವ ಅವರ ಮನೋಭಾವ ಮೆಚ್ಚುಗೆಯಾಯಿತು.ಅವರು ನನಗೆ ಪರಿಚಿತರಾಗಿದ್ದರೂ ಆಟದಲ್ಲಿ ಮುಳುಗಿದ್ದ ಅವರನ್ನು ಮಾತನಾಡಿಸಲು ಮನಸ್ಸಾಗಲಿಲ್ಲ.ಚದುರಂಗದಲ್ಲಿ ಮುಳುಗಿ ರಾಜ್ಯ ಕಳೆದುಕೊಂಡ ಅವಧ್ ಪ್ರಾಂತ್ಯದ ನವಾಬ ವಾಜೀದ್ ಅಲಿ ಷಾನ ಪತನ ಸಾರುವ ಮುನ್ಷಿ ಪ್ರೇಮ್ ಚಂದರ ಕತೆ ಶತರಂಜ್ ಕೆ ಕಿಲಾಡಿ ನೆನಪಾಯಿತು.

ಪಾರ್ಕಿನ ಬೇಲಿಯಾಚೆ ಒಬ್ಬ ತನ್ನ ಮೋಟಾರ್ ಬೈಕ್ ನಿಲ್ಲಿಸಿ ಸೀಟಿನ ಮೇಲೆ ಕೇಕ್ ಇಟ್ಟು ತನ್ನ ಗೆಳೆಯನ ಹುಟ್ಟುಹಬ್ಬ ಆಚರಿಸುತ್ತಿದ್ದಾನೆ. ಅವನು ಕೇಕ್

ಕತ್ತರಿಸುವಾಗ "ಈ ದಿನ ಜನುಮದಿನಾ " ಹಾಡುತ್ತಿದ್ದಾನೆ. ಯಥಾಪ್ರಕಾರ ಗೆಳೆಯನ ಹೆಗಲ ಮೇಲೆ ಕೈಯಿಟ್ಟು ಸೆಲ್ಫಿ . ವಾರೆವಾ! ಹುಟ್ಟುಹಬ್ಬದ ಆಚರಣೆ ಎಷ್ಟು ಸರಳ ವಿನೂತನ,ಸ್ಮರಣೀಯ?!

ಹೀಗೇ ಕಾಲ ಸರಿಯುತ್ತ ಮಧ್ಯಾಹ್ನ ಮೂರು ಗಂಟೆ ಸಮಯವಾಯಿತು. ಇನ್ನರ್ಧ ಗಂಟೆ ಇಲ್ಲೇ ಕುಳಿತು ಕಾಲ ಕಳೆದು ಹೊರಟರೆ ಮನೆಯ ಬಾಗಿಲು ತೆರೆದಿರುತ್ತದೆ. ಕೀ ಮರೆತದ್ದಕ್ಕೆ ತಕ್ಕ ಸಮಜಾಯಿಷಿ ಹುಡುಕಿದರಾಯಿತು ಅಷ್ಟೆ. ಬೇರೆ ಎಲ್ಲಿ ಹೋಗಿದ್ದರೂ ಹೀಗೆ ಕಾಲ ಕಳೆಯಲಾಗುತ್ತಿರಲಿಲ್ಲ. ಇಷ್ಟೊಂದು ಅಪೂರ್ವ ಹಾಗೂ ರಮ್ಯ ವಾಸ್ತವಗಳು ನನ್ನ ಅನುಭವದ ಖಾತೆಗೆ ಜಮಾ ಆಗುತ್ತಿರಲಿಲ್ಲ. ಇಂಥ ಅನುಭವಗಳ ಆಧಾರದಲ್ಲಿ ಮಧ್ಯಾಹ್ನದಲ್ಲಿ ಉದ್ಯಾನವೂ ಸಂತಸಕರ ಅನುಭವಗಳ ತವರು.

---

## ಏನೇ ಹೇಳಿ ಮನುಷ್ಯನಷ್ಟು ವೈರಸ್ ರೂಪಾಂತರ ಹೊಂದಲ್ಲ

ಸಾಲ ಬೇಕಾದಾಗ ಒಂದು ರೂಪ
ಮರು ಪಾವತಿಗೆ ಇನ್ನೊಂದು ರೂಪ
ನೌಕರಿ ಇಲ್ಲದಾಗ ಒಂದು ರೂಪ
ನೌಕರಿ ಸಿಕ್ಕ ಮೇಲೆ ಸುರೂಪ

ತಿಂದಾಗ ಒಂದು ರೂಪ
ತಿಂದು ತಿನ್ನದಂತೆ ಇರೊ ಇನ್ನೊಂದು ರೂಪ
ಕುಡಿಯದ ಮೊದಲು ಒಂದು ರೂಪ
ಕುಡಿದ ಮೇಲೆ ಹಲವು ರೂಪ

ಚುನಾವಣೆ ಮೊದಲು ಒಂದು ರೂಪ
ಗೆದ್ದ ಮೇಲೆ ಅಪರೂಪ
ಅಧಿಕಾರದಲ್ಲಿ ಇದ್ದಾಗ ಒಂದು ರೂಪ
ವಿರೋಧ ಪಕ್ಷದಲ್ಲಿದ್ದಾಗ ಮತ್ತೊಂದು ರೂಪ

ಗೆಲ್ಲುವವರಿಗೂ ಒಂದು ರೂಪ
ಗೆದ್ದ ಮೇಲೆ ಊಸರವಳ್ಳಿ ರೂಪ
ಹುದ್ದೆಗಾಗಿ ಒಂದು ರೂಪ
ಆಮೇಲೆ ಬರಿ ಪ್ರತಾಪ

ಪ್ರವಚನದಲ್ಲಿ ಒಂದು ರೂಪ
ಪಲ್ಲಂಗದಲ್ಲಿ ಇನ್ನೊಂದು ರೂಪ
ಒಳಗೊಂದು ರೂಪ
ಹೊರಗೊಂದು ರೂಪ

ಮಾತಿನಲ್ಲಿ ಒಂದು ರೂಪ
ಮೌನದಲ್ಲಿ ಇನ್ನೊಂದು ರೂಪ
ಬರಹದಲ್ಲಿ ಒಂದು ರೂಪ
ಬದುಕಿನಲ್ಲಿ ಇನ್ನೊಂದು ರೂಪ

ಏನೇ ಹೇಳಿ ಮನುಷ್ಯನಷ್ಟು
ವೈರಸ್ ರೂಪಾಂತರ ಹೊಂದಲ್ಲ...

**ಇಂಟರ್‌ನೆಟ್‌ನಿಂದ**

# ನನ್ನ ಚೆನ್ನೈ ಪ್ರವಾಸ

● ಎಸ್. ಕೆ. ರಾಮಮೂರ್ತಿ

ನವೆಂಬರ್ ತಿಂಗಳು ಬಂದ್ರೆ ಎಲ್ರಿಗೂ ಜ್ಞಾಪಕ ಬರೋದು ಕನ್ನಡ ರಾಜ್ಯೋತ್ಸವ ತಾನೇ. ನಂಗೆ ಜ್ಞಾಪಕ ಬರೋದು ನನ್ನ ಚೆನ್ನೈ ಪ್ರವಾಸ.

ಕೆಲವು ವರ್ಷಗಳ ಹಿಂದೆ, ಚೆನ್ನೈಗೆ ಏನೋ ಕೆಲಸದ ನಿಮಿತ್ತ ಹೋಗಿ, ಚೆನ್ನೈನಿಂದ ವಾಪಸ್ ಟ್ರೈನ್ನಲ್ಲಿ ಬರ್ತಾಯಿದ್ದೆ. ಮಧ್ಯಾಹ್ನದ ಸುಡು ಬಿಸಿಲು. ಕಾದಿರಿಸಿದ ಆಸನಗಳು, ಆದರೂ ಕೆಲವರು ಗಡಿಬಿಡಿಯಲ್ಲಿ, ಕೆಲವರು ನಿಧಾನವಾಗಿ ಆಸೀನರಾಗುತ್ತಿದ್ದರು. ಇರಲಿ, ಹಾಗೇ ನನ್ನ ಪಕ್ಕದಲ್ಲಿ (ಅಂದ್ರೆ ಪಕ್ಕದ ಆ ಬದಿಯಲ್ಲಿ) ಇಬ್ಬರು ಯುವಕರು ಕುಳಿತಿದ್ದರು. ಒಬ್ಬನ ಕೈಯಲ್ಲಿ ಇಂಗ್ಲಿಷ್ ಪೇಪರ್ ಇತ್ತಾದ್ದರಿಂದ ನಮ್ಮ ಬೆಂಗಳೂರಿನ ಹುಡುಗ ಅನ್ಕೊಂಡೆ.

ಮತ್ತೊಬ್ಬನ ಕೈಯಲ್ಲಿ ತಮಿಳು ಮ್ಯಾಗಜಿನ್ ಯಾವುದೂ ಇರಲಿಲ್ಲವಾದರೂ ಚೆನ್ನೈನವನೇ ಇರಬಹುದು ಅನ್ಕೋತಿದ್ದೆ. ಸ್ವಲ್ಪ ಹೊತ್ತಿಗೆ ಹಾಗೇ ನಿದ್ದೆಗೆ ಜಾರಿದೆ. ನನಗೆ ಯಾವಾಗಲೂ ಹಾಗೆ, ಬಸ್, ರೈಲುಗಾಡಿಗಳಲ್ಲಿ ಬೇಗ ಹಾಗೂ ಚೆನ್ನಾಗಿಯೇ ನಿದ್ದೆ ಬಂದು ಬಿಡುತ್ತೆ. ಸ್ವಲ್ಪ ಹೊತ್ತಿಗೆ ಇಬ್ಬರೂ ಮಾತಿಗೆ ಶುರು ಮಾಡಿದ್ರು. ನಿದ್ದೆಯ ಮಂಪರಿನಲ್ಲಿ ಯುವಕರ ಮಾತುಕತೆ ಸ್ವಲ್ಪ ಸ್ವಲ್ಪ ಕಿವಿಮೇಲೆ ಬೀಳ್ತಿತ್ತು.

ನಮ್ಮ ಕನ್ನಡದಕಲಿ ಅಂತ ಕಾಣ್ಸುತ್ತೆ – ಯೂ ಆರ್ ಫ್ರಮ್? ಗುನುಗಿತು.

ಐ ಆಮ್ ಫ್ರಮ್ ಚೆನ್ನೈ. ಸೋ ಯೂ ಪ್ಲೀಸ್. . .?.

ಐ ಆಮ್ ಫ್ರಮ್ ಬ್ಯಾಂಗಳೂರ್, ಬೆಂಗಳೂರು ಅನ್ನೋದಕ್ಕೆ ಏನ್ ಧಾಡಿ ಅಂತ ಮನಸ್ನಲ್ಲೇ ಅಂದ್ಕೊಂಡೆ.

ಹಾಗಿದ್ರೆ ನಿಮಗೆ ಕನ್ನಡ ಬರುತ್ತೆ ಅಂತಾಯ್ತು – ಚೆನ್ನೈ ಹೇಳ್ತು.

ಯಸ್, ಯಸ್ ಮೈ ಮದರ್ ಟಂಗ್ ಈಸ್ ಕನ್ನಡ ಅಂತ ದೇಶೀ ಬ್ಯಾಂಗಳೂರ್ ಗುನಿಗಿತು. ಮತ್ತೇ . . . ಹೋವ್ ಈಸ್ ದಟ್ ಯೂ ನೋ ಕನ್ನಡ ಅಂತು ನಮ್ಮ ಬೆಂಗಳೂರಿ.

ಚೆನ್ನೈ: ನಮ್ಮ ತಂದೆಯವರಿಗೆ ಬೆಂಗಳೂರಿಗೆ ಟ್ರಾನ್ಸ್‌ಫರ್ ಆಗಿತ್ತು. ನಾವು 5 ವರ್ಷ ಬೆಂಗಳೂರಿನಲ್ಲೇ ಇದ್ವಿ. ನಾನು ಇಂಜಿನೀರಿಂಗ್ ಓದಿದ್ದು ಬೆಂಗಳೂರಿನಲ್ಲೇ. ಆ ಸಮಯದಲ್ಲಿ ನಾನು, ನನ್ನ ತಂಗಿ, ನಮ್ಮ ತಾಯಿ ಚೆನ್ನಾಗೇ ಕನ್ನಡ ಕಲಿತ್ವಿ. ನಮ್ಮ ತಂದೆಗೆ ಅರ್ಥವಾಗುತ್ತೆ. ನಮ್ಮ ತಾಯಿ ಇಂಗ್ಲಿಷ್, ತಮಿಳ್ ಪತ್ರಿಕೆ ಗಳ ಜೊತೆ ಕನ್ನಡ ಪತ್ರಿಕೆಗಳನ್ನೂ ಹಾಕಿಸ್ಕೊಳ್ತಾ ಇದ್ರು. ಸುಧಾ, ತರಂಗ ಅಂತ ಎಲ್ಲಾ ವಾರ, ಮಾಸಿಕಗಳನ್ನೂ ಅವರೇ ತರ್ತಾ ಇದ್ರು. ಈಗಲೂ ಚೆನ್ನೈನಲ್ಲಿ ಯಾವುದೇ ಕನ್ನಡ ವಾರಪತ್ರಿಕೆ, ಮಾಸಪತ್ರಿಕೆ ಕಂಡರೂ ಹಿಡ್ಕೊಂಡ್ ಬರ್ತಾರೆ. ನೋಡಿ ಈ ವಾರದ ಸುಧಾ ಸಿಕ್ತು ಅಂತ ತಂದಿದ್ರು ನಾನು ಎತ್ಕೊಂಡ್ ಬಂದಿದೀನಿ.

ನಮ್ಮ ಬ್ಯಾಂಗಳೂರ್, ಐ ಆಲ್ಸೋ ಕ್ಯಾನ್ ಸ್ಪೀಕ್ ಹಿಂದಿ, ತಮಿಳ್, ತೆಲುಗು ಇನ್ ಅಡಿಷನ್ ಟು ಇಂಗ್ಲಿಷ್ ಅಂತೂ.

ಅಯ್ಯೋ ರಾಮ್ನೇ, ಇನ್ ಅಡಿಷನ್ ಟು ಕನ್ನಡ ಅನ್ನುತ್ತೆ ಅನ್ಕೊಂಡ್ರೆ ಇಂಗ್ಲಿಷ್ ಅಂತಿದ್ಯಲ್ಲಾ ಅಂತ ಮನಸ್ನಲ್ಲೇ ಅನ್ಕೊಂಡೆ. ಚೆನ್ನೈ – ನೀವ್ ಬಿಡೀಪ್ಪಾ ಪಂಚಭಾಷಾ ಪ್ರವೀಣರು ಹಾಗಾದ್ರೆ ಅಂತೂ. ಬ್ಯಾಂಗಳೂರ್ . . . . ಹ್ಹಿ ಹ್ಹೀ ಅಂತ ನಗ್ತು. ಅಂದ ಹಾಗೆ ತಾವು ಚೆನ್ನೈಗೆ ಬಂದ ಉದ್ದೇಶ? – ಚೆನ್ನೈ ಕೇಳ್ತು.

ಯೂ ನೋ, . . .ಆನ್ ಸಮ್ ಪ್ರಾಜೆಕ್ಟ್ ವರ್ಕ್ ಫಾರ್ ಎ ಶಾರ್ಟ್ ಪೀರಿಯಡ್, ಫಾರ್ ಎಬೌಟ್ 3 ಮಂತ್ಸ್. ಮೈ ಫ್ಯಾಮಿಲಿ ಈಸ್ ಇನ್ ಬ್ಯಾಂಗಳೂರ್ ಓನ್ಲಿ. ಚಿಲ್ರನ್ ಆರ್ ಸ್ಟಡೀಯಿಂಗ್ ಯೂ ನೋ, . . . . ಮೈ ಮದರ್ ಅಂಡ್ ವೈಫ್ ವಿಲ್ ಟೇಕ್ ಕೇರ್ ಆಫ್ ದೆಮ್, ಡ್ಯೂರಿಂಗ್ ವೀಕ್ ಎಂಡ್ ಐ ವಿಲ್ ಬಿ ವಿಸಿಟಿಂಗ್ ಅಂಡ್ ಮೀಟ್ ಫ್ಯಾಮಿಲಿ. ಅನದರ್ 15 ಡೇಸ್, ಐ ವಿಲ್ ಗೋ ಬ್ಯಾಕ್ ಟು ಮೈ ಪ್ಲೇಸ್ . ನಮ್ಮ ಕನ್ನಡದ ಕಲಿ ಇನ್ನೂ ಏನೇನೋ ಉಲಿಯುತ್ತಿತ್ತು. ನನಗೋ ನಿದ್ದೆ ಮಂಪರು. ಅವರ ಗುನುಗುನು ಕೇಳಿಸ್ತಾ ಇತ್ತು ಹಾಗೆ ನಿದ್ದೆಗೆ ಜಾರಿದೆ. ನನ್ನ ಮನಸ್ಸು ಏನೇನೋ ಯೋಚಿಸ್ತಿತ್ತು. ಬೆಂಗಳೂರಿ ಇಂಗ್ಲಿಷ್ ಮಾತಾಡುತ್ತೆ ಚೆನ್ನೈ ಕನ್ನಡ ಮಾತಾಡುತ್ತೆ. ಹಾಗೇ ಎಷ್ಟು ಹೊತ್ತು ನಿದ್ದೆಮಾಡಿದ್ನೋ ಗೊತ್ತಿಲ್ಲ. ಮಧ್ಯದಲ್ಲಿ ಎಚ್ಚರವಾಯ್ತು. ಕಾಫಿ . . . ಕಾಫಿ ಅಂತಾ ಹುಡುಗ ಕೂಗ್ತಾ ಇದ್ದ.

ನಮ್ಮ ಬೆಂಗಳೂರಿ ಲೆಟ್ ಅಸ್ ಹ್ಯಾವ್ ಸಮ್ ಕಾಫೀ ಯಾರ್ ಅಂತು.

ಚೆನ್ನೈ – ಬೇಡ ಸರ್, ನಮ್ಮಮ್ಮ ಪ್ಲಾಸ್ಕ್ನಲ್ಲಿ ಕಾಫಿ ಹಾಕ್ಕೊಟ್ಟಿದಾರೆ. ಇಬ್ಬರಿಗೂ ಆಗುತ್ತೆ. ನಮ್ಮಮ್ಮ ಮೈಸೂರ್ ಕಡೆ ತರಹಾನೇ ತುಂಬಾನೇ ಚೆನ್ನಾಗಿ ಕಾಫಿ ಮಾಡ್ತಾರೆ. ರುಚಿ ನೋಡಿ ಅಂತು.

ನಮ್ಮ ಬೆಂಗಳೂರಿ ಓಕೇ ಓಕೇ. . . . ಐ ಹ್ಯಾವ್ ಸಮ್ ಬಿಸ್ಕತ್ಸ್, ವಿ ಕ್ಯಾನ್ ಹ್ಯಾವ್ ವಿತ್ ಕಾಫಿ ಅಂತು.

ಚೆನ್ನೈ – ಬೇಡ, ನಮ್ಮಮ್ಮ ಜೊತೆಗೆ ಕೋಡುಬಳೇನು ಕೊಟ್ಟಿದಾರೆ. ನಿಮ್ಮ ಸುಬ್ಬಮ್ಮನ ಅಂಗಡಿ ಕೋಡುಬಳೆಗಿಂತಾನು ಚೆನ್ನಾಗಿ ಮಾಡ್ತಾರೆ. ಬೆಂಗಳೂರಿನಲ್ಲಿದ್ದಾಗ ಪಕ್ಕದ ಮನೆಯವರು ಒಬ್ಬರು ತಿಪಟೂರಿನ ಕಡೆಯವರು ಇದ್ರೂ, ಅವರ ಹತ್ರ ಕೇಳಿ ಮಾಡೋದನ್ನ ಕಲಿತ್ಕೊಂಡಿದ್ದು ಅಂತ ಹೇಳ್ತಿರ್ತಾರೆ.

ನಮ್ಮ ಬೆಂಗಳೂರಿ ಆಯ್ತು ಅಂತು. . . . ಮತ್ತೆ, ಕೋಡುಬಳೆ ಈಸ್ ವೆರಿ ನೈಸ್ ಯಾರ್. ಮೈ ಮದರ್ ಪ್ರಿಪೇರ್ಸ್ ವೆರಿ ನೈಸ್ ನಿಪ್ಪಟ್ಟು ಅಂತ ಹೇಳ್ತು.

ಚೆನ್ನೈ – ನಮ್ಮಮ್ಮ ಮದ್ದೂರ್ ವಡೇನೂ ತುಂಬಾ ಚೆನ್ನಾಗಿ ಮಾಡ್ತಾರೆ ಅಂತ ಸೇರಿಸ್ತು. ಇನ್ನೂ ಏನೇನೋ ಅಮ್ಮಂದಿರ ಗುಣಗಾನ ಮಾಡಿಕೊಳ್ತಿದ್ರು. ಚೆನ್ನೈ ಹುಡುಗ ಆ ಬದಿಯಲ್ಲಿ ಕುಳಿತಿದ್ದನಾದ್ದರಿಂದ, ನನಗೆ ಅವರು ಕಾಫಿ ಬೇಕಾ ಅಂತ ಕೇಳುವ ಅವಕಾಶ ಬರ್ಲಿಲ್ಲ. ನಾನು ಕಾಫಿ ಮಾರುವ ಹುಡುಗ ಬಿಸಿ ಬಿಸಿ ಅಂತ ಹೇಳಿ ಕೊಟ್ಟ ತಣ್ಣನೆ ಕಾಫಿ ಕುಡಿದೆ. ಕಾಫಿ ನಂತರ ಮಾತಿಗೆ ಸ್ವಲ್ಪ ವಿರಾಮ. ಬೆಂಗಳೂರಿ ಕೈಗೆ ಇಂಡಿಯಾ ಟುಡೇ ಬಂತು, ಚೆನ್ನೈ ಕೈಯಲ್ಲಿ ಸುಧಾ ಬಂತು, ದಿನ ತಂತಿ, ಕಲ್ಕಿನೂ ಪಕ್ಕದಲ್ಲಿ ಇತ್ತು, ನಾನೂ ಕಸ್ತೂರಿ ಓದ್ತಾ ನಿದ್ದೆಗೆ ಜಾರಿದೆ.

ನಿದ್ದೆಯ ಮಂಪರಿನಲ್ಲಿ, ಬೆಂಗಳೂರಿ – ಚೆನ್ನೈ ರವರ ಸಂಭಾಷಣೆ ಸ್ವಲ್ಪ ಕೇಳ್ತಾ ಇತ್ತು.

ಮನಸ್ನಲ್ಲೇ, ಅಯ್ಯೋ ಯಾಕ್ ಹೀಗೆ? ಕನ್ನಡ ಅಂದ್ರೆ ಅಸಡ್ಡೆಯೇ, ಕೀಳರಿಮೆಯೇ? ಬೇರೆ ಭಾಷೆಗಳನ್ನು ಕಲಿಯಲಿ, ಬೇರೆ ಸಂಸ್ಕೃತಿಗಳ ಬಗ್ಗೆ ತಿಳಿದುಕೊಳ್ಳಲಿ,. ಅದರ ಜೊತೆಗೆ ನಮ್ಮ ಭಾಷೆ, ನಮ್ಮತನವನ್ನುಉಳಿಸಿಕೊಳ್ಳಬೇಕು, ಆದರಿಸಬೇಕು.... ಅನ್ನುವ ಬದ್ಧತೆ, ಭಾದ್ಯತೆ ಇಲ್ಲವಾಗಿ ಹೋಗ್ತಿದೆಯಲ್ಲಾ ಅನ್ನಿಸುಕ್ಕೆ ಶುರುವಾಯ್ತು. ಇಂಗ್ಲಿಷ್ ಬರುತ್ತೆ ಅಂತ ತೋರಿಸಿಕೊಳ್ಳುವ ತೋರಿಕೆ, ಹೆಚ್ಚುಗಾರಿಕೆಯೇ? ಅಂತಾ ಮನಸ್ಸು ಯೋಚಿಸ್ತಾಇತ್ತು. ಯಾಕೋ, ಕೇರಳದ ತಿರುಪುನಿತ್ತೂರಿನಲ್ಲಿ ಜನಿಸಿ, ಮಲೆಯಾಳಂ ಮಾತೃ ಭಾಷೆಯಾದ್ರೂ, ಕನ್ನಡಿಗರೇ ಆಶ್ಚರ್ಯ ಪಡುವಂತೆ ಕನ್ನಡವನ್ನು ಶ್ರೀಮಂತವಾಗಿ ಬೆಳೆಸಿದ, ಕನ್ನಡಸಾಹಿತ್ಯಕ್ಕೆ ಅದರಲ್ಲೂ ಹಾಸ್ಯ ಸಾಹಿತ್ಯಕ್ಕೆ ಒಂದು ಭದ್ರ ಬುನಾದಿ ಹಾಕಿಕೊಟ್ಟ ನಾ. ಕಸ್ತೂರಿ ಮನದಲ್ಲಿ ಹಾದು ಹೋದರು.

ಎಚ್ಚರವಾದಾಗ ಬೆಂಗಳೂರು ಬಂದಿತ್ತು. ಎಲ್ಲರು ಗಡಿಬಿಡಿ ಯಿಂದ ಇಳೀತಾ ಇದ್ರು. ಆಗಲೇ ಬೆಂಗಳೂರಿ ಮತ್ತು ಚೆನ್ನೈ ಕೈ ಕೈ ಹಿಡ್ಕೊಂಡ್ ಇಳಿದು ಹೋಗ್ತಾ ಇದ್ರು. ಇಳಿಯುವಾಗ ಬೆಂಗಳೂರೀ ನ ಮಾತಾಡಿಸ್ತೀನಿ, ಸ್ವಲ್ಪ ಬುದ್ಧಿವಾದ ಹೇಳೋಣ, ನಾನು ಹೇಗೂ ಹಿರಿಯ ನಾಗರೀಕ, ಬೆಂಗಳೂರಿ ಸ್ವಲ್ಪ ಗುರ್ ಅಂದ್ರೂ ಪರ್ವಾಗಿಲ್ಲ ಅನ್ಕೊಂಡಿದ್ದೆ, ಆದ್ರೆ ಆಗ್ಲೇ ಇಲ್ಲ. ಅವ್ರಾದ್ರೋ ಹುಡುಗರು, ನಂಗೆ ಅವರಷ್ಟು ಬೇಗ ಹೆಜ್ಜೆ ಹಾಕೋಗಾಗುತ್ಯೇ?.

ನಾನು ಸಾವಕಾಶವಾಗಿ ಇಳಿದು, ಒಬ್ನೇ ಇದ್ದದ್ರಿಂದ ಆಟೋ ಯಾಕೆ ಅಂತ ಬಸ್ ಹಿಡಿದು ನಿಂತ್ಕೊಂಡ್, ಹಿಡ್ಕೊಂಡ್ ಮನೆ ಸೇರಿದೆ.

ನಿಂತ್ಕೊಂಡ್, ಹಿಡ್ಕೊಂಡ್ ಯಾಕೆ ಹೋದ್ರಿ ಅಂದ್ರ ಬಸ್ ನಲ್ಲಿ ಸೀಟ್ ಎಲ್ಲಿ ಸಿಗುತ್ತೆ.

ಹಿರಿಯನಾಗರೀಕರಿಗೆ ಮೀಸಲಿರುತ್ತೆ ಅಂದ್ರಾ?

ಅಯ್ಯೋ! ನೀವು ಬಸ್‌ನಲ್ಲಿ ಓಡಾಡಿಲ್ಲ ಅನ್ಸುತ್ತೆ. ಅವುಗಳಲ್ಲಿ, ಹುಡುಗರು, ಕೆಲಸಕ್ಕೆ ಹೋಗುವವರು ಕೂತಿರ್ತಾರೆ. ಸೌಜನ್ಯಕ್ಕೂ ಕೂತ್ಕೋಳಿ ಅಂತ ಹೇಳಲ್ಲ. ಒಂದೇ ಒಂದ್ಸಲ ತುಂಬಾ ಹಿಂದೆ, ಇದು ಹಿರಿಯ ನಾಗರಿಕರ ಸೀಟು ಬಿಟ್ಕೊಡಪ್ಪ ಅಂತ ಒಬ್ಬನ್ನ ಕೇಳಿದ್ದೆ. ಆತ ನನಗೆ ದಬಾಯಿಸಿ, ನಾವು ದಿವಸಾ ಓಡಾಡೋವ್ರು, ನಮ್ಮ ಕಷ್ಟ ನಿಮಗೇನ್ ಗೋತಾಗುತ್ತೆ ನಿಮಗೇನ್ ಮಹಾ ವಯಸ್ಸಾಗಿರೋದು ಅಂದ. ಬಸ್ ಕಂಡಕ್ಟರ್ ಮುಖ ನೋಡ್ದೆ, ಸ್ವಲ್ಪ ಅಡ್ಜಸ್ಟ್ ಮಾಡ್ಕೊಂಡ್ ಹೋಗಿ ಸಾರ್ ಅಂದ, ಅವತ್ತಿಂದ ಇವತ್ತಿನವರೆಗೂ ಅಡ್ಜಸ್ಟ್ ಮಾಡ್ಕೊಂಡ್ ಬಸ್ನಲ್ಲಿ ಹೋಗೋದಾದ್ರೆ, ನಿಂತ್ಕೊಂಡ್, ಹಿಡ್ಕೊಂಡ್ ಹೋಗೋ ಅಭ್ಯಾಸ ಮಾಡ್ಕೊಂಡಿದೀನಿ.

■

---

ಸಮಾರಂಭದಲ್ಲಿ ಒಬ್ಬ ಹಿರಿಯರು ತಮ್ಮನ್ನು ಸರಿಯಾಗಿ ವಿಚಾರಿಸಿಕೊಳ್ಳಲಿಲ್ಲ ಎಂದು ಸಿಟ್ಟಿನಿಂದ ಗೊಣಗುತ್ತಿದ್ದರು. ನಾನು ಅವಮಾನ ಮಾಡಿಸಿಕೊಳ್ಳಲು ಇಲ್ಲಿಗೆ ಬರಬೇಕಾಗಿರಲಿಲ್ಲ ಅಲ್ಲೇ ಇದ್ದ ಮತ್ತೊಬ್ಬ ಅತಿಥಿ ಹೌದೇ, ಹಾಗಿದ್ದರೆ ನೀವು ಅವಮಾನ
ಮಾಡಿಸಿಕೊಳ್ಳಲು ಎಲ್ಲಿಗೆ ಹೋಗುತ್ತೀರ ಎಂದು ತಿಳಿಸುವಿರಾ ಎಂದು ಕೇಳಿದಾಗ ಹಿರಿಯರು ತಲೆತಿರುಗಿ ಬೀಳೋದೊಂದು ಬಾಕಿ

# ಮೈಸೂರು ದಸರಾ ಸಡಗರ

● **ಜಿ.ವಿ.ನಿರ್ಮಲ**

ದಸರಾ ಅಂದ್ರೆ ಮೈಸೂರು, ಮೈಸೂರು ಅಂದ್ರೆ ದಸರಾ ಅನ್ನೋದು ಎಲ್ಲರಿಗೂ ತಿಳಿದಿರೋ ವಿಷ್ಯ. ಇಂದಿಗೂ ಮೈಸೂರು ದಸರಾ ಕೇವಲ ಭಾರತದಲ್ಲಿ ಮಾತ್ರವಲ್ಲ ಜಗತ್ಪ್ರಸಿದ್ಧ. ಅದರಲ್ಲಿಯೂ ರಾಜರ ಆಳ್ವಿಕೆಯಲ್ಲಿ ಮೈಸೂರು ಅರಮನೆ ದರ್ಬಾರಿನ ವೈಶಿಷ್ಟ್ಯಗಳನ್ನು ಕಂಡಿದ್ದವರಿಗೆ ಅದನ್ನು ಎಷ್ಟು ಬಣ್ಣಿಸಿದರೂ ಸಾಲದು. ನಮ್ಮ ಮನೆಯಲ್ಲಿ ನಮ್ಮ ತಾಯಿ ಇಂದಿಗೂ ಅರಮನೆ ದಸರಾದ ಎಷ್ಟೋ ಸ್ವಾರಸ್ಯಕರವಾದ ವಿಷಯಗಳನ್ನು ಪ್ರತಿ ದಸರಾ ಹಬ್ಬದಲ್ಲಿ ವರ್ಣಿಸುವುದು ಸರ್ವೇಸಾಮಾನ್ಯ. ಮೈಸೂರಿನಲ್ಲಿ ಬಹಳ ಹಿಂದೆ ವಾಸವಾಗಿದ್ದವರ ಮನಸ್ಸಿನಲ್ಲಿ ದಸರಾದ ವೈಭವದ ಚಿತ್ರ ಅಚ್ಚಳಿಯದೇ ನಿಂತಿದೆ ಎಂದರೆ ಉತ್ಪ್ರೇಕ್ಷೆಯಲ್ಲ. ನಮ್ಮ ತಂದೆಗೆ ಇದರಲ್ಲಿ ಯಾವುದೇ ಆಸಕ್ತಿ ಇರಲಿಲ್ಲ. ನಮ್ಮ ತಾಯಿ ಅವರ ತಂದೆಯ ಕಾಲದಲ್ಲಿ ಸಾಕಷ್ಟು ನೋಡಿದ್ದರಿಂದ ಅವರಿಗೂ ಸ್ವಾತಂತ್ರ್ಯಾನಂತರದ ದರ್ಬಾರಿನಲ್ಲಿ ಯಾವ ಆಕರ್ಷಣೆಯೂ ಇರಲಿಲ್ಲ. ನಾವು ದೊಡ್ಡವರಾಗುತ್ತಿದ್ದಂತೆ ಎಷ್ಟೋ ಸಂಭ್ರಮಗಳು ಕಡಿಮೆಯಾಗಿದ್ದರೂ ಸಾಕಷ್ಟು ನೋಡಿದ್ದೀವಿ; ಸಂಭ್ರಮಿಸಿದ್ದೀವಿ. ನನಗೂ ಹಲವಾರು ವಿಷಯಗಳು ನೆನಪಿನಲ್ಲಿವೆ. ಈ ನೆನಪುಗಳಲ್ಲಿ ನನ್ನ ದಸರಾ ದಾವಣಿಯೂ ಒಂದು.

ಇದರ ಹಿನ್ನೆಲೆ ನಾನು ದಸರಾ ದರ್ಬಾರಿಗೆ ಹೋಗಿದ್ದು; ಸರಿಯಾಗಿ ಹೇಳಬೇಕೆಂದರೆ ಹೋಗಲು ಪ್ರಯತ್ನಿಸಿದ್ದು. ಸುಮಾರು 1961–62ರ ಸಮಯವಿರಬೇಕು. ದಸರಾ ಹಬ್ಬ ಸಮೀಪಿಸುತ್ತಿದ್ದಂತೆ ದರ್ಬಾರಿಗೆ ಹೋಗಲು ಯಾರಿಗೆ ಪಾಸು ಸಿಕ್ಕಿದೆ? ಯಾರು ಹೋಗುತ್ತಿದ್ದಾರೆ? ನಮಗೂ ಪಾಸು ಸಿಗುವುದೇ ಎಂದು ಎಲ್ಲರನ್ನೂ ಕೇಳುವುದೇ ನಮ್ಮ ಕೆಲಸ. ಪಾಸುಗಳಲ್ಲಿಯೂ ಉತ್ತಮ, ಮಧ್ಯಮ ವರ್ಗಗಳಿರುತ್ತವೆ. ದರ್ಬಾರ್ ಪಾಸುಗಳು ಕೆಲವು ಪ್ರತಿಷ್ಠಿತ ವ್ಯಕ್ತಿಗಳಿಗೆ ಅವರವರ ಅಂತಸ್ಥಿಗೆ ತಕ್ಕಂತೆ ಅರಮನೆ ಆಫೀಸಿನಲ್ಲಿ ನೀಡುತ್ತಿದ್ದರು. ಬೇರೆಯವರಿಗೆ ದುಡ್ಡು ಕೊಟ್ಟರೂ ಸಿಕ್ಕುತ್ತಿರಲಿಲ್ಲ. ಕೆಲವರು ಯಾರನ್ನಾದರೂ ಕಾಡಿ, ಬೇಡಿ, ಹೇಗೋ ಮಾಡಿ ಸಂಪಾದಿಸುತ್ತಿದ್ದರು.

ನನಗೆ ಆಗ ತಾನೇ 12 ವರ್ಷಗಳಾಗಿತ್ತು. ಮಹಾರಾಜರ ದರ್ಬಾರಿಗೆ 12ವರ್ಷ ಮೇಲ್ಪಟ್ಟವರಿಗೆ ಮಾತ್ರ ಪ್ರವೇಶವಿದ್ದುದರಿಂದ ನಾನು ಮೊತ್ತಮೊದಲ ಬಾರಿಗೆ ದರ್ಬಾರ್ ನೋಡಲು ಕಾತುರಳಾಗಿದ್ದೆ. ನನ್ನ ಅಕ್ಕ ನನಗಿಂತ ನಾಲ್ಕು ವರ್ಷ ದೊಡ್ಡವಳು. ಅವಳು ಒಂದೆರೆಡು ಬಾರಿ ದರ್ಬಾರ್ ನೋಡಿದ್ದರೂ ಮತ್ತೊಮ್ಮೆ ನೋಡಲು ಸಿದ್ಧವೇ. ಬೆಳೆಯುತ್ತಿದ್ದ ನಮಗೆ ಎಲ್ಲವನ್ನೂ ಕಾಣುವ ಆಸೆ. ನಮ್ಮ ಅದೃಷ್ಟಕ್ಕೆ ದಸರಾ ದರ್ಬಾರಿಗೆ ಇಬ್ಬರು ಮಹಿಳೆಯರು ಹೋಗಬಹುದಾದ ಮಧ್ಯಮ ವರ್ಗದ 'ಪಾಸ್'ಗಳನ್ನು ಯಾರೋ ಆ ಬಾರಿ ನಮಗೆ ಕೊಟ್ಟರು. ನಮಗೆ ಖುಷಿಯೋ ಖುಷಿ.

ದರ್ಬಾರು ಕರಾರುವಾಕ್ಕಾಗಿ 7 ಗಂಟೆಗೆ ಶುರುವಾಗುತ್ತದೆ. ದರ್ಬಾರ್ ವೀಕ್ಷಕರು 4 ಗಂಟೆಗೇ ಅರಮನೆಯ ಪ್ರಾಂಗಣದಲ್ಲಿರಬೇಕು. ಜೊತೆಗೆ 'ಡ್ರೆಸ್ ಕೋಡ್' ಇರುತ್ತದೆ. ಪುರುಷರಿಗೆ ಕಪ್ಪು ಕೋಟು, ಪೈಜಾಮ, ಉತ್ತರೀಯ ಮತ್ತು ಪೇಟ. ಎಲ್ಲವನ್ನೂ

ಬಾಡಿಗೆಗೆ ಪಡೆಯಬಹುದಾಗಿತ್ತು. ಮಹಿಳೆಯರಿಗೆ ಸೀರೆ ಅಥವಾ ಲಂಗ–ದಾವಣಿ ಧರಿಸುವುದು ಕಡ್ಡಾಯ. ನಾನು ನಮ್ಮಕ್ಕ ಇಬ್ಬರೂ ಸಿದ್ಧವಾದೆವು. ನಾನು ಅಂದೇ ಮೊದಲ ಬಾರಿ ದಾವಣಿ ಉಡಲು ಮುಂದಾದೆ. ಲಂಗದ ಮೇಲೆ ಒಂದು ಲಾಡಿ ಕಟ್ಟಿ ದಾವಣಿ ಧರಿಸಿದೆ. ಅದೇನು ಅಷ್ಟು ಕಷ್ಟದ ಕೆಲಸವಲ್ಲ. ನಮ್ಮ ಮನೆ ಜಯನಗರದಲ್ಲಿತ್ತು. ಬಹಳ ಬೇಗ ಬಸ್ಸಿನಲ್ಲಿ ಹೊರಟು ಅರಮನೆಯ ಪ್ರಾಂಗಣ ತಲುಪಿದೆವು. ನಾವು ಬಹಳ ಬೇಗ ಎಂದುಕೊಂಡರೂ ಆಗಲೇ ಸಾಕಷ್ಟು ಜನ ಜಮಾಯಿಸಿದ್ದರು. ನಾವು ಆ ಗುಂಪಿಗೆ ಸೇರಿದೆವು.

ಸುಮಾರು ಹೊತ್ತು ಕಾದ ನಂತರ ಬಾಗಿಲು ತೆಗೆಯಿತು. ಇದ್ದವರೆಲ್ಲರೂ ನಮ್ಮ ನಮ್ಮ ಶಕ್ತ್ಯಾನುಸಾರ ನುಗ್ಗಿ ಮುಂದೆ ಹೋದೆವು. ಮತ್ತೊಂದು ಬಾಗಿಲು ತೆರೆಯುವ ತನಕ ಮತ್ತಷ್ಟು ಹೊತ್ತು ಕಾದೆವು. ಮುಂದಿನ ಬಾಗಿಲು ತೆರೆದಾಗ ಮಹಡಿ ಹತ್ತುವ ಅವಾಂತರ. ಎದ್ದು–ಬಿದ್ದು ನಮ್ಮ ನಮ್ಮ ಸೀರೆ, ದಾವಣಿಗಳನ್ನು ಬೀಳದಂತೆ ಜೋಪಾನವಾಗಿ ಹಿಡಿದುಕೊಂಡು, ಕೈ–ಕೈ ಹಿಡಿದು ಮೇಲೇರಿದೆವು. ಉದ್ದವಾದ ಕಾರಿಡಾರ್ ದಾಟಿದ ನಂತರ ಒಂದು ಬಾಗಿಲಲ್ಲಿ ಪಾಸುಗಳನ್ನು ಪರೀಕ್ಷಿಸಿ ಒಬ್ಬೊಬ್ಬರನ್ನೇ ಒಳಗೆ ಕಳಿಸುತ್ತಿದ್ದರು. ನಾವು ಕಾರಿಡಾರ್ನಲ್ಲಿ ಮುಂದೆ ಮುಂದೆ ಸರಿಯುತ್ತಿದ್ದವು. ಬಾಗಿಲು ಇನ್ನೂ ದೂರವಿತ್ತು. ನಮ್ಮ ಎದೆ ಹೊಡೆದುಕೊಳ್ಳುತ್ತಿತ್ತು. ನಮ್ಮ ಸರದಿ ಬರುವುದೇ? ನಮಗೆ ಪ್ರವೇಶ ದೊರೆಯುವುದೇ ಎಂದು ನನಗಂತೂ ಆತಂಕವಾಗುತ್ತಿತ್ತು.

ನನ್ನ ಆತಂಕ ನಿಜವಾಯ್ತು. ನಮ್ಮ ಮುಂದೆ ಇನ್ನೂ ಬಹಳ ಜನರಿದ್ದಂತೆಯೇ ಬಾಗಿಲು ಮುಚ್ಚಿತು! ಎಲ್ಲರೂ 'ಓ' ಎಂದು ನಿರಾಶೆಯಿಂದ ಕೂಗಿದರು. ದರ್ಬಾರ್ ಹಾಲ್ ತುಂಬಿದ ನಂತರ ಒಂದು ಪಿಳ್ಳೆಯನ್ನೂ ಒಳಗೆ ಬಿಡುವುದಿಲ್ಲ. ಸ್ವಲ್ಪ ಹೊತ್ತು ಅಲ್ಲಿ ನಿಲ್ಲುವುದಕ್ಕೂ ಬಿಡದೆ ಎಲ್ಲರನ್ನೂ ಹೊರಗೆ ದಬ್ಬಿ–ದೂಡಿ ಬಾಗಿಲು ಜಡಿದರು. ನಾನು ಮತ್ತು ನಮ್ಮಕ್ಕ ಬಾಗಿಲಾಚೆ ದೂಡಿದವರಲ್ಲಿದ್ದೆವು. ಬಹಳ ನಿರಾಶೆಯಿಂದ ಹೊರನಡೆದೆವು.

ಮುಂದೇನು? ಬಸ್ ಹಿಡಿದು ಮನೆಗೆ ಹೋಗುವುದೆಂದು ಹೊರಟೆವು. ನನಗೆ ನಿರಾಶೆಯ ಜೊತೆಗೆ ದಾವಣಿಯ ಮೇಲೆ ಕೋಪ ಬಂತು. ಅಷ್ಟು ಹೊತ್ತೂ ಅದರ ಮೇಲೆ ಗಮನವಿರಲಿಲ್ಲ. ಈಗ ಅದನ್ನು ಯಾಕಾದರೂ ಉಟ್ಟಿರುವೆನೋ ಎಂದು ಕೋಪ ಬಂತು. ನಿರಾಶೆಯ ದುಃಖವೂ ಜೊತೆ ಸೇರಿತು. ಒಂದು ದೊಡ್ಡ ಮರದ ಮರೆಗೆ ಹೋಗಿ ರಪರಪನೆ ದಾವಣಿ ಬಿಚ್ಚಿ ಮಡಿಸಿದೆ. ಲಂಗದ ಮೇಲೆ ಕಟ್ಟಿದ್ದ ಲಾಡಿಯನ್ನೂ ಬಿಚ್ಚಿ ಉಂಡೆ ಮಾಡಿದೆ. ಎರಡನ್ನೂ ನನ್ನ ಕೈಚೀಲದಲ್ಲಿ ತುರುಕಿದೆ. ಸ್ವಾತಂತ್ರ್ಯ ದೊರಕಿದಂತೆ ಎಷ್ಟೋ ಸಮಾಧಾನವಾಯಿತು. ಮನಸ್ಸು ಶಾಂತವಾಯಿತು. ಮೂಲೆಯಲ್ಲಿದ್ದ ಅಂಗಡಿಯಿಂದ ಖಾರದಕಡ್ಲೇಕಾಯಿ ಕೊಂಡು ತಿನ್ನುತ್ತಾ ಬಸ್ಟಾಂಡ್ಗೆ ಹೋದೆವು. ಮುಂದೆ ಮತ್ತಷ್ಟೋ ಬಾರಿ ದರ್ಬಾರು ನೋಡಿದೆ. ಆದರೂ ಈ ಮೊದಲ ಅನುಭವವನ್ನು ಎಂದಿಗೂ ಮರೆಯಲಾರೆ. ■

---

**ಸಂತಸದಿಂದ ನುಲಿಯೋಣ ಕಳೆಯಿತು ಒಂದು ವರ್ಷ**
**ಬರಮಾಡಿಕೊಳ್ಳೋಣ ಆಶಾಭಾವನೆಯಿಂದ ಹೊಸ ವರ್ಷ**
**2023 ಹೊಸ ವರ್ಷಕ್ಕೆ ಅಪರಂಜಿಯ ಎಲ್ಲ ಓದುಗರಿಗೂ ಶುಭಾಷಯಗಳು**

# ಸಿಪಾಯಿ ರಾಮು

**● ಮಹಾಂತೇಶ ಬಾಗೇವಾಡಿ**

ಈ ಸಿಪಾಯಿ ರಾಮು ನಮ್ಮ ಕಾಲೇಜಿನ ಸಿಪಾಯಿ ಆತನಿಗೆ ಬಯಲಾಟದ, ನಾಟಕದ ಗೀಳುಜಾಸ್ತಿ ನಾನು ಈ ಕಾಲೇಜಿಗೆ ಉಪನ್ಯಾಸಕನಾಗಿ ಹೊಸದಾಗಿ ಬಂದಾಗ,ಆ ದಿನಗಳಲ್ಲಿ ನನಗೆ ಗೊತ್ತು ಇರಲಿಲ್ಲ. ನಮ್ಮ ಪ್ರಾಚಾರ್ಯರು ಹೇಳಿರಲಿಲ್ಲ. ಸಿಪಾಯಿ ರಾಮು ಮಾತಿಗೊಮ್ಮೆ ಆಯಿತು. "ಮಹಾಸ್ವಾಮಿ " ಎನ್ನುತ್ತಿದ್ದ ಕಾಲೇಜಿನ ಕೈತೋಟದಲ್ಲಿ ಸ್ವಚ್ಚಭಾರತ ಅಭಿಯಾನ ಕೈಗೊಂಡಾಗಲೂ ಇವತ್ತಿನ ಕೆಲಸಕ್ಕೆ ನಾನು ಅಣಿಯಾಗುತ್ತಿದ್ದೇನೆ. ನನಗೆ ಅಪ್ಪಣೆ ಕೊಡಿ ಮಹಾಪ್ರಭು ಎಂದ ನಾನು ನನ್ನ ಹಿಂದೆ, ಮುಂದೆ ತಿರುಗಿ ನೋಡಿದೆ.

ಇದು ಕಾಲೇಜು ಇಲ್ಲಿ ಯಾರು ರಾಜರು ಇಲ್ಲಾ ಇದು ರಾಜರ ಆಸ್ಥಾನವು ಇಲ್ಲಾ, ಮಹಾಸ್ವಾಮಿ ಎಂದೆನು.

ಈ ಸನ್ನಿವೇಶ ನೋಡಿ ಪ್ರಾಚಾರ್ಯರು ವಿದ್ಯಾರ್ಥಿಗಳು ನಕ್ಕರು.

ಕ್ಷಮಿಸಿ ನನಗೆ ಬಯಲಾಟದ ನಂಟು ಬಿಡಲಾಗುತ್ತಿಲ್ಲ ಯಾರಾದರೂ ಸಂಭಾಷಣೆ ಹೇಳಿದರೆ ಪ್ರತಿಕ್ರಿಯೆ ತಕ್ಷಣದಲ್ಲಿಯೇ ಕೊಡಬೇಕು. ಎನಿಸುತ್ತದೆ.ಏನು ಮಾಡಬೇಕು. ಗೊತ್ತಾಗುತ್ತಿಲ್ಲ. ಪ್ರಭು ಅಂತಾ ಮತ್ತೆ ಎಂದನು.

ಮಹಾಪ್ರಭು ಪ್ರಾಚಾರ್ಯರು ನೀವು ಬರೀ ಪ್ರಭು ಅಂದಾ

ಬೇಜಾರಾದಾಗ ಮನರಂಜನೆಗೆ ನಿನ್ನ ಸಂಭಾಷಣೆ ಬಳಸಿದರೆ ಆಗ ಸಮಯಕ್ಕೆ ಚೆನ್ನಾಗಿರುವದು.ಅಂತಾ ಹೇಳಿದೆ. ಮದ್ಯಾಹ್ನವಾದ ಕೂಡಲೇ ಬಾರಯ್ಯ ಸಿಪಾಯಿ ರಾಮು ಊಟ ಮಾಡುವ ಅಂದಾಗ ಸರಿ ಸರ್, ಅಂತಾ ವಾಸ್ತವಕ್ಕೆ ಬರುತ್ತಿದ್ದನು.

ಊಟದಲ್ಲಿ ನಂಜಿಕೊಳ್ಳಲು ಉಪಹಾರ ಮಂದಿರಕ್ಕೆ ಹೋಗಿ ಮೆನಸಿನಕಾಯಿ ಬಜ್ಜಿ ತೆಗೆದುಕೊಂಡು ಬಾ ಅಂತಾ ಕಳುಹಿಸಿದರೆ, ಹೋದ ಸಿಪಾಯಿರಾಮು ಅರ್ಧ ಘಂಟೆಯಾದರೂ.... ಬರಲಿಲ್ಲ. ಅವನಿಗೆ ಕರೆಮಾಡಿದರೆ ನೀವು ಉಪಹಾರ ಮಂದಿರಕ್ಕೆ ಹೋಗಿ ಅಂತಾ ಹೇಳಿದರಲ್ಲಾ, ಇಲ್ಲಿ ಊಟದ ಮಂದಿರ ಇದೆ.

ಇಲ್ಲಿ ಉಪಹಾರದ ಮಂದಿರ ಹುಡುಕುತ್ತಿರುವೆನು.

ಅಯ್ಯೋ ಶಿವನೆ ಅಂತಾ ನನಗೆ ಕೋಪ ಬಂದರೂ, ಆತನ ಕನ್ನಡ ಭಾಷೆಗೆ ಬಳಸುವ ಪದಗಳು, ನನ್ನ ಕೋಪವನ್ನು ತಣ್ಣಾಗಾಗುವಂತೆ ಮಾಡಿತು. ಊಟದ ಮಂದಿರದ ಮಾಲೀಕರ ಹತ್ತಿರ ಮೊಬೈಲ್ ಕೊಡು. ನಾನು ಮಾತನಾಡುತ್ತೇನೆ. ಅಂದಾಗ ನಮ್ಮ ಸಿಪಾಯಿ ರಾಮು ಕೊಟ್ಟ ಹೇಳಿ ಮಹಾಸ್ವಾಮಿ ಎಂದರು.

ಏನ್ರಿ ನೀವು ಹೀಗೆ ಮಾತನಾಡುತ್ತೀರಾ ಎಂದಾಗ ಇಲ್ಲಾ ಸಿಪಾಯಿರಾಮು ಉಪಹಾರಮಂದಿರ ಎಲ್ಲಿದೆ.ಅಂತಾ ಕೇಳಿದಕ್ಕೆ ನಾನು ಹಾಗೆ ಹೇಳಿದೆ.ಎಂದರು.

ಸಿಪಾಯಿರಾಮು ಕೈಯಲ್ಲಿ ಒಂದು ಪ್ಲೇಟ ಮೆನಸಿನಕಾಯಿ ಬಜ್ಜಿ ಕೊಟ್ಟು ಕಳುಹಿಸಿ ಅಂದಾಗ ಸರಿ ಅಂತಾ ಅಂದರು.

ಕಾಲೇಜಿನ ಕೆಲಸ ಜಾಸ್ತಿ, ಸಿಪಾಯಿರಾಮು ಬಂದ, ಬಜ್ಜಿ ತಂದ. ಇನ್ನು ನಾನು ಅವನಿಗೆ ವಿವರಣೆ ಕೇಳಿದರೆ, ಸಂಭಾಷಣೆ ಸಹಿತ ಬೆಳ್ಳಿತೆರೆಯ ಸಿನಿಮಾವನ್ನೆ ಹೇಳುತ್ತಾನೆ.ಅಂತಾ ಮೌನಕ್ಕೆ ಶರಣಾದೆನು.

ಆದರೂ ಸಿಪಾಯಿರಾಮು ಪ್ರಯತ್ನಿಸಿದ ಸಾರ್, ಸಾರ್ ಅಂತಾ ನಾ

ಹೇಳಿದೆ.ಊಟದ ಮಧ್ಯೆ ಮಾತನಾಡಬೇಡ ಅಂತಾ ಆದರೆ ನಮ್ಮ ಪ್ರಚಾರ್ಯರು ಸಿಪಾಯಿರಾಮು ಏನೋ ಹೇಳಲು ಪ್ರಯತ್ನಿಸುತ್ತಾನೆ. ಕೇಳಿ ಅಂದಾಗ ಸುಮ್ಮನಿರಿ ಸರ್...ಊಟ ಮಾಡುವದನ್ನು ಬಿಟ್ಟು ಶ್ರೀಕೃಷ್ಣ ಪಾರಿಜಾತ ಶುರುಮಾಡುತ್ತಾನೆ.ಅಗತ್ಯಕ್ಕೆ ತಕ್ಕಷ್ಟೆ ಮಾತನಾಡಬೇಕು ಅವನೊಟ್ಟಿಗೆ ಅಂದಾಗ ಪ್ರಾಚಾರ್ಯರು ನಸುನಕ್ಕು ಸುಮ್ಮನಾದರು.

ಕಾಲೇಜಿನ ಕೆಲಸದಲ್ಲಿ ಜೆರಾಕ್ಸ್ ಮಾಡಿಸಲು ಮೂಲಪ್ರತಿಕೊಟ್ಟು ಅಲ್ಲಿ ಜೆರಾಕ್ಸ್ ಅಂಗಡಿಗೆ ಹೋಗು ಅಂದಾಗ, ಮಹಾಪ್ರಭು ನಕಲು ಪ್ರತಿ ತೆಗೆದುಕೊಡುವ ಅಂಗಡಿ ಇದೆ.

ಮಹಾಸ್ವಾಮಿ ಅಂತಾ ಅವರು ಹಾಗೆ ಮಾತನಾಡುತ್ತಾ ಸಮಯ ಕಳೆಯುತ್ತಾರೆ. ಬೇಗ ಬಾರಯ್ಯ ಅಂತಾ ಹೇಳಿದರೆ.

ಬಂದ ಕೂಡಲೇ ಕ್ಷಮಿಸಿ ಮಹಾಪ್ರಭು ತಡವಾಯಿತು.

ಅಂದಾಗ ಸರಿ ಮಂತ್ರಿ ಅಂತಾ ಪ್ರಾಚಾರ್ಯರು ಸಾತ ಕೊಟ್ಟಾಗ ನನಗೆ ನಗಬೇಕೊ....? ಇಲ್ಲಾ ಸಿಟ್ಟಾಗಬೇಕೋ....? ತಿಳಿಯಲಿಲ್ಲ.

ಪರೀವಿಕ್ಷಣೆಗೆ ಮೇಲಾಧಿಕಾರಿಗಳು ಬಂದಿದ್ದರು.ಪರೀವಿಕ್ಷಣೆ ಮುಗಿಯಿತು.ಊಟಕ್ಕೆ ಹೋಗೋಣ ಎಂದಾಗ ಬೇಡಾ ಇಲ್ಲಿಯೇ ಏನಾದರೂ ಉಪಹಾರ ತರಿಸಿಬಿಡಿ ನನಗೆ ಸಮಯವಾಗುತ್ತದೆ. ಅಂದಾಗ ಸಿಪಾಯಿರಾಮುಗೆ ಉಪಹಾರ ತರಲು ಸೂಚಿಸಿದೆ.

ನಿಮ್ಮಲ್ಲಿ ಮೆನಸಿನಕಾಯಿ ಬಜ್ಜಿ ಚೆನ್ನಾಗಿ ಮಾಡುತ್ತಾರಂತೆ ಅವನ್ನು ತರಿಸಿ ರುಚಿನೋಡೋಣಾ ಅಂದಾಗ ಸಿಪಾಯಿರಾಮುವಿಗೆ ಹೇಳಿದೆನು. ಸಿಪಾಯಿರಾಮು ಆಗಲೇ ಉಪಹಾರದ ಪೊಟ್ಟಣದೊಂದಿಗೆ ಹಾಜರಾಗಿದ್ದ ಮುಖದಲ್ಲಿ ನಾಚಿಕೆ ಇತ್ತು.

ಅದರಲ್ಲೂ ನಸುನಗುವಿನ ಮಂದಹಾಸ ಬೇರೆ, ಸಿಪಾಯಿರಾಮು ಉಪಹಾರ ಇಷ್ಟು ಬೇಗನೆ ತಂದಿದ್ದಾನೆ.ಅಂದರೆ ಏನೋ ಯಡವಟ್ಟಾಗಿದೆ. ನನಗೆ ಸಂಶಯ ಕಾಡಿತು. ತಕ್ಷಣವೇ ಉಪಹಾರದ ಪೊಟ್ಟಣ ಬಿಚ್ಚಿ ನೋಡಿದರೆ ಮೆನಸಿನಕಾಯಿ ಬಜ್ಜಿ ಬದಲಿಗೆ ಪೂರಿ, ಸಾಗು ತಂದಿರುವದು.

ನನ್ನ ಊಹೆ ಸರಿಯಾಯಿತು. ಆದರೆ ಇದಕ್ಕೆ ವಿವರಣೆ ಕೇಳಿದರೆ ಅಲ್ಲಿ ನಡೆದ ಬಯಲಾಟದ ಸಂಗ ಸನ್ನಿವೇಶದೊಂದಿಗೆ ಅಭಿನಯ ಮಾಡಿ ತೋರಿಸುತ್ತಾನೆ. ಅಂತಾ ಸಿಪಾಯಿ ರಾಮುಗೆ ಮೌನವಾಗಿ ಇರುವಂತೆ ಹೇಳಿ ಮತ್ತೆ ಹೇಗೋ ಆ ಸಂದರ್ಭವನ್ನು ಸರಿತೂಗಿಸಿದೆನು.

ಪರೀವಿಕ್ಷಕರು ಹೋದಮೇಲೆ ಸಿಪಾಯಿರಾಮು ಉಪಹಾರ ಮಂದಿರದಲ್ಲಿ ಏನು ನಡೆಯಿತು.

ಅಂದಾಗ ಯುವರಾಣಿ ಬಜಿ ಕರೆಯುತ್ತಿದ್ದಳು. ಮಹಾರಾಜ ಗಲ್ಲಾ ಪೆಟ್ಟಿಗೆಯ ಮೇಲೆ ಕುಳಿತಿದ್ದನು.

ಸಿಪಾಯಿರಾಮು ನನ್ನ ಸ್ವಯಂವರದ ಕುರಿತು ಮಹಾರಾಜರು ಯೋಚಿಸುತ್ತಿದ್ದಾರೆ ಅಂದಾಗ ನನಗೆ ಆವೇಶ ತಡೆಯಲು ಆಗಲಿಲ್ಲ.

ನನ್ನ ಮನದ ಇಂಗಿತವನ್ನು ವ್ಯಕ್ತಪಡಿಸಬೇಕು.ಯುವರಾಣಿಗೆ ನನ್ನ ಮೇಲೆ ಪ್ರೀತಿ ಇರುವ ಕಾರಣಕ್ಕೆ ತನ್ನ ಸ್ವಯಂವರದ ಕುರಿತು ಸುಳಿವು ನೀಡಿದಳು. ಆದರೆ ನನಗೆ ನನ್ನ ಕರ್ತವ್ಯದ ಕರೆ ಎಚ್ಚರಿಸಿತು.

ಪರೀವಿಕ್ಷರಿಗೆ ಉಪಹಾರ ತರಲು ಹೇಳಿದ್ದು ನೆನಪಾಗಿ ಶೀಘ್ರವಾಗಿ

ಆಗಮಿಸಿದೆನು.ಆ ವೇಗದಲ್ಲಿ ಉಪಹಾರದ ಪೊಟ್ಟಣದಲ್ಲಿ ಏನಿದೆ ಗಮನಿಸಲಾಗಲಿಲ್ಲ ಮಹಾಪ್ರಭುನನ್ನ ಮನ್ನಿಸಿ ಆದರೆ ಅಲ್ಲಿ ಯುವರಾಣಿ ನನ್ನೊಟ್ಟಿಗೆ ಆಡಿದ ಮಾತುಗಳ ಸಂಭ್ರಮದಲ್ಲಿ ಉಪಹಾರದ ಯಡವಟ್ಟಾಗಿದೆ ಅಂತಾ ಸಮರ್ಥನೆ ನೀಡಿದನು. ಸಿಪಾಯಿರಾಮುವಿನ ಯಡವಟ್ಟು ಒಂದೆರಡಲ್ಲಾ. ಮದ್ಯಾಹ್ನದ ಊಟದ ಸಮಯ ತಹಶೀಲ್ದಾರ್ ಇಲಾಖೆ ಸಿಬ್ಬಂದಿಗಳು ಸಿಪಾಯಿರಾಮು ಬರುವದನ್ನೆ ನೋಡುತ್ತಿದ್ದರು.

ಶರಣು ಸಿಪಾಯಿರಾಮು ಅಂದಕೂಡಲೇ ನಿಮಗೂ ಶರಣು ಶರಣಾರ್ಥಿ ನಿಮ್ಮ ಆಗಮನ ಇತ್ತಿಚಿಗೆ ತುಂಬಾ ಅಪರೂಪವಾಗಿದೆ.

ಅಂದಾಗ ಮಹಾರಾಜನನ್ನು ನೋಡಿದಾಗ "ಆಗ ಗಲ್ಲಾ ಪೆಟ್ಟಿಗೆ ಮೇಲೆ ಕುಳಿತ ಮಹಾರಾಜ" ಇವರ ಆಗಮನ ನಮಗೆ ತುಂಬಾ ಆತಂಕವನ್ನು ಉಂಟುಮಾಡಿದೆ. ಅದಕ್ಕೆ ಸಿಪಾಯಿರಾಮು ಅವರ ಆಗಮನ ಅಪರೂಪವಾಗಿದೆ.ಅಂದಾಗ ಸಿಪಾಯಿರಾಮುವಿಗೆ ಕಿವಿ ಚುರುಕಾದವು. ಯುವರಾಣಿಯ ತಂಟೆಗೆ ಬಾರದಿರಲಿ ಎಂಬ ಎಚ್ಚರಿಕೆ ನೀಡುತ್ತಿರುವದು. ಸಿಪಾಯಿರಾಮುವಿಗೆ ಖಾತ್ರಿಯಾಯಿತು.

ತಕ್ಷಣ ತನ್ನ ಮಾತಿನವರೆಸೆ ಬದಲಿಸಿದನು. ನಮ್ಮ ವಿದ್ಯಾಲಯದಲ್ಲಿ ಕೆಲಸದ ಕಾರ್ಯದ ಹೊರೆಯಾಗಿದೆ.

ನಮ್ಮ ವಿದ್ಯಾಲಯದ ಮುಂದೆ ಸುಂದರ ಕೈತೋಟವಿದೆ.

ಹೊಸ ಬಗೆಯ ಹೂಗಳ ಗಿಡಗಳನ್ನು ನೆಡುವ ಕೆಲಸದಲ್ಲಿ ನಿರತನಾಗಿದ್ದೇನೆ. ಅಂತಾ ಹೇಳಿದಾಗ ಅವರೆಲ್ಲಾ ನಗುತ್ತಿದ್ದರು ಆದರೆ ಮಹಾರಾಜ ಉಪಹಾರ ಮಂದಿರದ ಮಾಲೀಕನಿಗೆ ಕೋಪ ಯಾಕಂದರೆ ಅವನ ಮಗಳನ್ನೆ ಯುವರಾಣಿ ಎನ್ನುತ್ತಿದ್ದ ಸಿಪಾಯಿರಾಮು ಆದರೆ ಮಹಾರಾಜನಿಗೆ ಯುವರಾಣಿ ತನ್ನ ಸ್ವಯಂವರದ ಕುರಿತು ಹೇಳಿದಾಗ ಸಂಶಯ ಮೂಡಿದಾಗ ಸಿಪಾಯಿರಾಮು ಉಪಹಾರ ಮಂದಿರದ ಮಾಲೀಕನ ವಕ್ರ ದೃಷ್ಟಿಗೆ ಕಾರಣಾದನು.

ನಾನು ಹಾಗೂ ಪ್ರಾಚಾರ್ಯರು ಸಿಪಾಯಿರಾಮುವಿಗೆ ಯುವರಾಣಿ ಸುದ್ದಿ ತಗೆದರೆ ಮೌನಕ್ಕೆ ಶರಣಾಗುತ್ತಿದ್ದನು.

ಸಿಪಾಯಿರಾಮುವನ್ನು ಕಾಲೇಜ ಕೆಲಸಕ್ಕೆ ಹಚ್ಚಬೇಕಾದರೆ ಒಂದು ಪುಟ ವಿವರಣೆ ನೀಡಬೇಕು. ಇಡೀ ದಿನ ಆತನಿಂದ ಕೆಲಸ ತೆಗೆಯಬೇಕಾದರೆ ಸಾಕುಸಾಕಾಗಿ ಹೋಗುತ್ತಿತ್ತು.

ಆದರೆ ಈ ಬಯಲಾಟದ ಹಾಸ್ಯದ ತುಣುಕುಗಳ ಕೇಳುತ್ತಿದ್ದರೆ ಖುಷಿಯಾಗುತ್ತಿತ್ತು. ಆದರೆ ಕಾಲೇಜ ಕೆಲಸ ಹೊರೆ ಹೊರೆಯಾಗಿ ಉಳಿಯುತ್ತಿತ್ತು.

ನಮ್ಮ ಚೇರಮ್ಮನ್ನರು ಮುಂದೆ ನಿಂತಾಗ ಆತನ ವಿಷಯವನ್ನು ಹೇಳಿದರೆ ಆತನಿಂದ ಕೆಲಸ ತೆಗೆದುಕೊಳ್ಳುವ ಜವಾಬ್ದಾರಿ ನಿಮ್ಮ ಮೇಲಿದೆ ಅಂದಾಗ ನಾನು ಪ್ರಚಾರ್ಯರ ಮುಖ ನೋಡುತ್ತಿದ್ದೆನು.

ಪ್ರಾಚಾರ್ಯರು ಸಿಪಾಯಿರಾಮುವಿನ ಮುಖ ನೋಡಿದಾಗ ನಾನು ಅಪರಾಧಿಯಲ್ಲ ಮಹಾಸ್ವಾಮಿ......!

ನನ್ನ ಕೆಲಸ ನಾನು ಮಾಡುತ್ತಿದ್ದೇನೆ.ಆದರೆ ಸ್ವಲ್ಪ ವಾಚಾಳಿತನ ನನ್ನಲ್ಲಿದೆ.ನಾನು ಪ್ರತಿದಿನ ಅಷ್ಟು ಮಾತನಾಡದಿದ್ದರೆ ಉಂಡ ಅನ್ನ ಕರಗುವುದಿಲ್ಲ ಅಂದ ಆಗ ಚೇರಮ್ಮನ್ನರು ಕೆಲಸದ ಹೊರೆ ಕಡಿಮೆಯಾಗದಿದ್ದರೆ, ನಿನ್ನ ಸಂಬಳ ನಿನ್ನ ಕೈಗೆ ಸಿಗುವದಿಲ್ಲ.ಎಂಬ ಪ್ರತ್ಯುತ್ತರಕ್ಕೆ ಮೌನಕ್ಕೆ ಶರಣಾದನು. ಅಂದಿನಿಂದ ಹಿತಮಿತವಾಗಿ ಮಾತನಾಡುತ್ತಾ ಕಾಲೇಜ ಕೆಲಸಮಾಡುತ್ತಾ ನಮ್ಮ ಜೊತೆ ಸಾಗಿದನು ಸಿಪಾಯಿರಾಮು. ■

# ನನ್ನ ಹರ್ಪಿಸ್ ಪುರಾಣ

● ಡಾ.ಸಿ.ಕೆ.ರೇಣುಕಾರ್ಯ

2022 ಏಪ್ರಿಲ್ 17 ರ ರಾತ್ರಿ 8 ಗಂಟೆ ಸಮಯ. ನನ್ನ ಏಕೈಕ ಮಗಳ ಜೊತೆ ಮಾತನಾಡುತ್ತಾ ಕುಳಿತ್ತಿದ್ದೆ. ನನ್ನ ಬಲಗೈ ಮೇಲೆತ್ತಿದಾಗ ನನ್ನ ರಟ್ಟೆಯ ಕೆಳಗಡೆ ಒಂದು ಸಣ್ಣ ಕಪ್ಪೆಯು ಕುಳಿತಂತಿದೆ ಎಂದು ಹೇಳಿದಳು. ತಕ್ಷಣ ನಾನು ನೋಡಿಕೊಂಡೆ. ಅದು ಒಂದು ಗಾಯ. ನನ್ನ ಮಗಳು ಗಾಬರಿಯಿಂದ ಅವಳ ಡಾಕ್ಟರ್ ಸ್ನೇಹಿತೆಗೆ ಫೋನ್ ಮಾಡಿದಳು ಮತ್ತು ವಾಟ್ಸಾಪ್‌ನಲ್ಲಿ ನನ್ನ ಗಾಯದ ಫೋಟೊ ಸಹ ಕಳುಹಿಸಿದಳು. ಡಾಕ್ಟರ್ ಸ್ನೇಹಿತೆ ಇದು ಹರ್ಪಿಸ್. ತಕ್ಷಣ ಡಾಕ್ಟರ್‌ಗೆ ತೋರಿಸಿ ಎಂದು ಹೇಳಿದಳು. ಗಾಬರಿಯಿಂದ ನಾನು ಹತ್ತಿರದ ಆಸ್ಪತ್ರೆಗೆ ತೆರಳಿದೆ. ಭಾನುವಾರ ರಾತ್ರಿಯಾದ್ದರಿಂದ ತಜ್ಞ ವೈದ್ಯರು ಇರಲಿಲ್ಲ. ಡ್ಯೂಟಿ ಮೇಲಿದ್ದ ಡಾಕ್ಟರ್ ನನ್ನ ಗಾಯವನ್ನು ನೋಡಿ ಇದು "ಹರ್ಪಿಸ್" ದೇಹಕ್ಕೆಲ್ಲಾ ಹರಡುತ್ತದೆ. ನಾನು ಮಾತ್ರೆ ಬರೆದು ಕೋಡುತ್ತೇನೆ. ಅದನ್ನು ತೆಗೆದುಕೊಳ್ಳಿ. ಬೆಳಗ್ಗೆ ಬಂದು ತಜ್ಞ ವೈದ್ಯರಿಗೆ ತೋರಿಸಿ ಎಂದು ಪ್ರಿಸ್ಕ್ರಿಪ್ಷನ್ ಕೊಟ್ಟರು. ಆ ಮಹಾಶಯ ಬರೆದಿದ್ದ ಮಾತ್ರೆ ಯಾವ ಔಷದದ ಅಂಗಡಿಯಲ್ಲೂ ಸಿಗಲಿಲ್ಲ. ನನಗೆ ನೋವೇನೂ ಇರಲಿಲ್ಲ. ಆದರೆ ಗಾಯ ಮಾತ್ರ ಮೊಣಕೈ ತುದಿಯವರೆಗೂ ಹರಡಿಬಿಟ್ಟಿತ್ತು. ಬೆಳಗ್ಗೆ ತಜ್ಞ ವೈದ್ಯರನ್ನು ನೋಡಿದೆವು. ಅವರು ಇದು ಹರ್ಪಿಸ್. ಇದಕ್ಕೆ ಯಾವ ಔಷದವೂ ಇಲ್ಲ. ಕೆಲವು ಮಾತ್ರೆ ಬರೆದು ಕೊಡುತ್ತೇನೆ. ಜೊತೆಗೆ ಐದು ಬಿ12 ಇಂಜೆಕ್ಷನ್ ತೆಗೆದುಕೊಳ್ಳಬೇಕಾಗುತ್ತದೆ ಎಂದರು. ಸರಿ. ಇಂಜೆಕ್ಷನ್ ಪ್ರಾರಂಭ ಆಯಿತು.

ನನ್ನ ಸ್ನೇಹಿತ ರಮೇಶ್ ಭಟ್ ಆಯುರ್ವೇದ ತಜ್ಞ. ಜೊತೆಗೆ ಮನೆಯಲ್ಲೇ ಪೂಜೆ ಪುನಸ್ಕಾರಗಳನ್ನು ಮಾಡಿ ಅನೇಕರಿಗೆ ಔಷಧಿ ಕೊಡುತ್ತಿದ್ದ. ಆತನಲ್ಲಿಗೆ ದೌಡಾಯಿಸಿದೆ. ಅವನು ಇದು ಹರ್ಪಿಸ್ ಹೌದು. ನನ್ನಲ್ಲೇ ಚಿಕಿತ್ಸೆ ಇದೆ. ನಾನು ಮನೆಯಲ್ಲೇ ಲಕ್ಕಿ ಮರ ಬೆಳೆದಿದ್ದೇನೆ. ಅದರ ಎಲೆಗಳನ್ನು ಮಂತ್ರಿಸಿ ಔಷಧ ಕೊಡುತ್ತೇನೆ. ಜೊತೆಗೆ ಮಂತ್ರಿಸಿದ ಕೊಬ್ಬರಿ ಎಣ್ಣೆ ಕೊಡುತ್ತೇನೆ ಎಂದು ಹೇಳಿ ನನ್ನ ಕೈಗೆ ಮಂತ್ರಿಸಿದ ಎಲೆಗಳನ್ನು ನಿವಾಳಿಸಿ ಮಂತ್ರಿಸಿದ ಕೊಬ್ಬರಿ ಎಣ್ಣೆ ಬಾಟಲ್ ಕೊಟ್ಟ. ಈ ಬಾಟಲ್‌ನ್ನು ಎಲ್ಲೂ ನೆಲದ ಮೇಲಿಡಬೇಡ. ಅದರ ಶಕ್ತಿ ಹೊರಟು ಹೋಗುತ್ತದೆ ಎಂದು ಎಚ್ಚರಿಸಿದ ಸಹ. ನಾನು ಹಾಗೇ ಮಾಡಿದೆ. ಮೊಣಕೈವರೆಗೆ ಬಂದಿದ್ದ ಗಾಯಗಳ ಕರೆಗಳು ವಾರದಲ್ಲಿ ಮಾಯವಾದವು. ಆದರೆ ನನ್ನ ಬಲಗೈಯಲ್ಲಿ ವಿಪರೀತವಾದ ನೋವು ಪ್ರಾರಂಭವಾಯಿತು.

ಇಲ್ಲಿಂದ ಪ್ರಾರಂಭವಾಯಿತು ಸಲಹೆಗಳ ಮಹಾಪೂರ.

ಸಲಹೆ 1. ಇದು ಸರ್ಪ ದೋಷ. ಇದರ ನಿವಾರಣೆಗೆ ನೀವು ಕುಕ್ಕೆ ಸುಬ್ರಹ್ಮಣ್ಯಕ್ಕೆ ಹೋಗಬೇಕು. ಆಗ ಇದು ಕ್ರಮೇಣ ವಾಸಿ ಆಗುತ್ತದೆ.

ಸಲಹೆ 2. ಇದು ನರಗಳಿಗೆ ಸಂಬಂಧಿಸಿದ ಕಾಯಿಲೆ. ಆದ್ದರಿಂದ ನೀವು ಒಬ್ಬ ನ್ಯೂರಾಲಾಜಿಸ್ಟ್ ಅನ್ನು ನೋಡಬೇಕು.

ಸಲಹೆ 3. ನಮ್ಮ ತಾಯಿಗೂ ಹೀಗೆ ಆಗಿತ್ತು. ಅವರಿಗೆ ಒಬ್ಬ ಆಯುರ್ವೇದ

ಪಂಡಿತರು ಔಷಧಿ ಕೊಟ್ಟರು. ಅದು ಹಾಲಿನ ರೂಪದಲ್ಲಿತ್ತು. ಆ ಹಾಲನ್ನು ಪ್ರತಿದಿನ ಕುಡಿಯಬೇಕು. ಹಾಗೆ ಮಾಡಿದರೆ ಒಂದು ತಿಂಗಳಿನ ನಂತರ ಅದು ಗುಣವಾಯಿತು. ನೀವೂ ಹಾಗೇ ಮಾಡಬೇಕು.

ಸಲಹೆ 4. ಮೈಸೂರಿನ ಹತ್ತಿರದಲ್ಲಿರುವ ಒಂದು ದೇವಸ್ಥಾನಕ್ಕೆ ಹೋಗಿ ನೀವು ಹರಕೆ ಕಟ್ಟಿಕೊಳ್ಳಬೇಕು. ಇದು ಸರ್ಪದೋಷ. ಹರಕೆಯನ್ನು ಪೂರೈಸಿದರೆ ನಿಮಗೆ ಈ ಖಾಯಿಲೆ ಗುಣವಾಗುತ್ತದೆ.

ಸಲಹೆ 4 ಕ್ಕೆ ಅನುಗುಣವಾಗಿ ನನ್ನ ಮಗಳು ಒಂದು ಬೆಳ್ಳಿಯ ನಾಗಪ್ಪನನ್ನು ಮಾಡಿಸಿ ಹೆಗ್ಗಡದೇವನ ಕೋಟೆ ರಸ್ತೆಯಲ್ಲಿ ಪ್ರಸಿದ್ಧವಾದ ನಾಗ ದೇವರ ಹುತ್ತಕ್ಕೆ ಸಮರ್ಪಣೆ ಮಾಡಿಸಿದಳು.

ಸಲಹೆ 5 : ಹರ್ಪಿಸ್‌ಗೆ ದಿವ್ಯೌಷಧ ಹೋಮಿಯೋಪತಿ. ನೀವು ಅವರಿಂದ ಔಷಧ ತೆಗೆದುಕೊಂಡರೆ ತಕ್ಷಣ ವಾಸಿಯಾಗುತ್ತದೆ.

ಸಲಹೆ 6 : ಮಿತ್ರರೊಬ್ಬರ ಸಲಹೆ. ಇದು ಚರ್ಮ ರೋಗಕ್ಕೆ ಸಂಬಂದಿಸಿದ್ದು. ಆದ್ದರಿಂದ ನೀವು ಒಬ್ಬರು ಚರ್ಮ ರೋಗ ತಜ್ಞರನ್ನು ನೋಡುವುದು ಒಳ್ಳೆಯದು. ಒಬ್ಬರು ಡರ್ಮಿಟಾಲಜಿಸ್ಟ್ ನೋಡಿದ್ದಾಯಿತು. ಅವರು ಇದಕ್ಕೆ ಏನೂ ಔಷಧ ಬೇಡ. ತಾನಾಗಿಯೇ ವಾಸಿಯಾಗುತ್ತದೆ. ಸ್ವಲ್ಪ ಸಮಯ ಕೊಡಿ ಎಂಬ ಸಲಹೆ ನೀಡಿದರು.

ಮೇಲಿನ ಸಲಹೆಗಳು ಯಾವುವೂ ನನಗೆ ಸುಮಾರು ಆರು ತಿಂಗಳು ಏನೂ ಫಲವನ್ನು ಕೊಡಲಿಲ್ಲ. ಹೀಗಾಗಿ ನಾನು ಮೈಸೂರಿನ ಪ್ರಸಿದ್ಧ ಆಸ್ಪತ್ರೆಯ ನರರೋಗ ಶಸ್ತ್ರ ತಜ್ಞರನ್ನು ಭೇಟಿ ಮಾಡಿದೆ. ಅವರು ನನಗೆ ಎಂಆರ್‌ಐ ಸ್ಕ್ಯಾನಿಂಗ್ ಮತ್ತು ಎಂಸಿಎಸ್, ಇಎನ್‌ಎಂಜಿ ಪರೀಕ್ಷೆ ಮಾಡಿಸಿದರು. ಇದಕ್ಕೆ ನನಗೆ ತಗುಲಿದ ವೆಚ್ಚ ರೂ. 10,000/– ಈ ಪರೀಕ್ಷೆಗಳ ಫಲಿತಾಂಶವೆಂದರೆ ಹರ್ಪಿಸ್ ನನ್ನ ಮುಂಗೈಗೆ ಬರುವ ಒಂದು ನರವನ್ನು ಘಾತಗೊಳಿಸಿದೆ ಎಂದು. ಅದಕ್ಕೆ ಪರಿಹಾರವೆಂದರೆ ಒಂದು ಶಸ್ತ್ರ ಚಿಕಿತ್ಸೆ ಅಥವಾ ದೀರ್ಘಾವಧಿಯಲ್ಲಿ ನರ ತನ್ನನ್ನು ತಾನೇ ರಿಪೇರಿ ಮಾಡಿಕೊಳ್ಳುವುದಕ್ಕೆ ಬಿಡುವುದು. ನನಗೆ ವಯಸ್ಸಾಗಿರುವುದರಿಂದ ಎರಡನೆಯ ಮಾರ್ಗವೇ ಸೂಕ್ತವೆಂದು ನಿರ್ಧರಿಸಿದರು. ಈ ಪರೀಕ್ಷೆಗಳೆಲ್ಲಾ ನಡೆದು ಸುಮಾರು ಏಳು ತಿಂಗಳಾಗಿದೆ. ಈ ಮಧ್ಯೆ ಹರ್ಪಿಸ್‌ನಿಂದಾಗಿ ನನ್ನ ಬಲಗೈಯ ಮೂರು ಬೆಟ್ಟುಗಳು ಜಡತ್ವವನ್ನು ಅನುಭವಿಸುತ್ತಿವೆ. ನನ್ನ ಆಪ್ತ ವೈದ್ಯ ಮಿತ್ರರೊಬ್ಬರು ನಾನು ಒಬ್ಬ ಮೂಳೆ ತಜ್ಞರನ್ನು ನೋಡುವುದು ಒಳ್ಳೆಯದೆಂದು ಸೂಚಿಸಿದರು. ನಾನು ಹಾಗೇ ಮಾಡಿದೆ. ಈ ವೈದ್ಯರು ಒಂದು ವಿಷಯ ತಿಳಿಸಿದರು. “ನೋಡಿ ಇದು ತನಗೆ ತಾನೇ ವಾಸಿಯಾಗುವ ಕಾಯಿಲೆ. ಆದರೆ ನೀವು ವ್ಯವಧಾನ ಕಳೆದುಕೊಂಡು ಈ ಹಂತದಲ್ಲಿ, ಆಯುರ್ವೇದ, ಯುನಾನಿ, ಪ್ರಕೃತಿ ಚಿಕಿತ್ಸೆ ವೈದ್ಯರನ್ನು ನೋಡಿದರೆ, ಅದು ಗುಣವಾಗುವ ಸ್ಥಿತಿಯಲ್ಲಿರುವುದರಿಂದ ತಾವೇ ಅದನ್ನು ವಾಸಿ ಮಾಡಿದೆ ಎಂದು ಕೊಚ್ಚಿಕೊಳ್ಳುತ್ತಾರೆ. ಆದ್ದರಿಂದ ಸುಮ್ಮನಿದ್ದು ಬಿಡಿ ಬೇಕಾದರೆ ಒಂದು ಸ್ಟಿರಾಯಿಡ್ ತೆಗೆದುಕೊಳ್ಳಿ ಎಂದು ಹೇಳಿದರು.

ಸದ್ಯ ನನ್ನ ಹರ್ಪೀಸ್ ಅನ್ನು ಅದರ ಪಾಡಿಗೆ ಬಿಟ್ಟಿದ್ದೇನೆ. ಸ್ಟಿರಾಯಿಡ್ ತೆಗೆದುಕೊಂಡಿಲ್ಲ. ನಿಮ್ಮಲ್ಲಿ ಏನಾದರೂ ಸಲಹೆ ಇದ್ದಲ್ಲಿ ದಯವಿಟ್ಟು ತಿಳಿಸಿ. ■

# ಕ್ಷೌರ ಕರ್ಮದ ಪರಿಪಾಟಲು

**● ಸುಧಾ ಸರನೋಬತ್**

ನಮ್ಮ ಯಜಮಾನರಿಗೆ ( ತಮ್ಮ ತಲೆಕೂದಲು ಒಂದಿಂಚಿನಷ್ಟು ಬೆಳದರೂ) ತಿಂಗಳಿಗೊಮ್ಮೆ ನಾಪಿತನ ದರುಶನವಾಗಲೇಬೇಕು ಎನ್ನುವ ನಿಯಮ ತಾವೇ ಜಾರಿ ಮಾಡಿಕೊಂಡಿದ್ದರು. ತಲೆಯ ಮೇಲೆ ಇದ್ದ ನಾಲ್ಕು ಕೂದಲನ್ನು ಅವರ ಮೊರದಗಲ ಮುಖಕ್ಕೆ ಚಂದ ಕಾಣುವಂತೆ ಅವರ ಹೇಳಿದಂತೆಯೇ ಕತ್ತರಿ ಪ್ರಯೋಗ ಮಾಡಿದ್ದರ ಬಗ್ಗೆ ಕನ್ನಡಿಯಲ್ಲಿ ಸ್ಪಷ್ಟವಾಗಿ ತೋರಿಸಿದ ನಂತರವೇ ನಮ್ಮ ಕಿರಿಕಿರಿ ಸಾಹೇಬರು ಒಪ್ಪಿಕೊಳ್ಳುತ್ತಿದ್ದದ್ದು. ತಲೆಗೂದಲು ಹೇಗೆ ಇರಲಿ ತಲೆಯೊಳಗಿನ ಬುಧ್ಧಿ ತುಂಬಾ ಚುರುಕು ಅನ್ನಬೇಕು. ಹೌದು ಇಷ್ಟು ವರ್ಷದ ದಾಂಪತ್ಯ ಜೀವನದಲ್ಲಿ ಈ ಪರಿ ಚುರುಕುತನವನ್ನು ಗುರುತಿಸಲಿಲ್ಲ ಅಂದರೆ ಹೇಗೆ ಅಲ್ಲವೇ! ಒಮ್ಮೆ ನಾಪಿತನೊಂದಿಗೆ ಕಿರಿಕಿರಿ ಮಾಡುತ್ತಾ ಅವರ ತಲೆಯ ಮೇಲಿದ್ದ ನಾಲ್ಕೇ ಕೂದಲಲ್ಲಿ ಎರಡು ಕೂದಲನ್ನು ತೆಗೆದೇ ಇಲ್ಲ ಎರಡನ್ನು ಹಾಗೇ ಉಳಿಸಿರುವೆ, ನಿನಗೆ ಅರ್ಧ ಅಷ್ಟೇ ಹಣ ಕೊಡುತ್ತೇನೆ ಎಂದು ಗದರಿಸಿದಾಗ ನಾಪಿತ ಹೆದರಿ ..ಪೂರ್ತಿ ತಲೆ ಬೋಳಿಸಿ ಮಿರಿ ಮಿರಿ ಮಿಂಚುವಂತೆ ಮಾಡಿದ್ದನು. ಆಗ ..ಯಜಮಾನರು ಮತ್ತೆ ಕುಪಿತರಾಗಿ ಪೂರ್ತಿ ತಲೆ ಬೋಳಿಸಿದ್ದಕ್ಕೆ ಅವನ ಪೂರ್ತಿ ಮಜೂರಿ ಕಟ್ ಮಾಡಿದ್ದರು !

ಅಂದಿನಿಂದ ಯಾವ ನಾಪಿತನೂ ಯಜಮಾನರ ಬಳಿ ಸುಳಿಯದಾದನು. ಯಜಮಾನರ ಕೂದಲು ಉದ್ದ ಬೆಳೆದು, ಬಾಲಿಬ್ರಹ್ಮಭಟ್ ತರ ಆದಾಗ ನಾನೇ ಬಾಚಿ ಜುಟ್ಟು ಕಟ್ಟತೊಡಗಿದೆ. ಬಾಲಿಬ್ರಹ್ಮ ಭಟ್ ಒಬ್ಬ ಪಂಜಾಬಿ ಗಾಯಕ. "ಅಮ್ಮಾ ದೇಖ ದೇಖ ತೇರಾ ಮುಂಡಾ ಬಿಗಡಾ ಜಾಯ್" ಎಂಬ ಪಾಪ್ಯುಲರ್ ಹಾಡು ಹೇಳಿ ಪ್ರಸಿಧ್ಧಿ ಪಡೆದವ. ಯುಜವಾನರ ಜುಟ್ಟು ಅವನ ಜುಟ್ಟಿನಂತೆ ಶೋಭಿಸತೊಡಗಿತು. ಸ್ವತಃ ನನ್ನ ಅತ್ತೆಯವರೇ ತಮ್ಮ ಮಗನ ಗುರುತು ಹಿಡಿಯಲಿಲ್ಲ. "ಏನಪಾ ನಿನ್ನ ಈ ಅವತಾರಾ ಹಜಾಮತಿ ಮಾಡಸ್ಕೊ, ನಾನೇ ರೊಕ್ಕಾ ಕೊಡತೀನಿ" ಎಂದರು. ಅಷ್ಟರಲ್ಲಿ ಕರೋನಾ ಹೆಮ್ಮಾರಿ ಒಕ್ಕರಿಸಿ ಎಲ್ಲ ಸಲೂನು ಬಂದಾಗಿ, ಮನೆಗೆ ಬರುವ ನಾಪಿತನೂ ಯಜಮಾನರ ಮೇಲೆ ಕುಪಿತನಾಗಿ, ನಮ್ಮ ಮನೆಯ ಹತ್ತಿರ ಸುಳಿಯುವುದನ್ನೇ ಬಿಟ್ಟನು. ಯಜವಾನರ ಕೂದಲು ಬೆಳೆದು ನೀಳವೇಣಿಯಾದರು.

ಯಜಮಾನರ ಆಪ್ತ ಗೆಳೆಯರೆಲ್ಲ ಕೀಟಲೆ ಮಾಡಿದರು, "ಏನಯ್ಯಾ, ಒಳ್ಳೆ ಪೋನಿಟೈಲ್ ಕಟ್ಟೋ ತರಾ ಕಾಣ್ತಾ ಇದ್ದಿಯಲ್ಲ ನಿನ್ನ ಕೂದಲು ...ಇದೇನು ನಿಂದು .ಹೊಸಾ ಫ್ಯಾಶನ್ ?!" ಅವರಿಂದ ತಪ್ಪಿಸಿಕೊಳ್ಳಲು ಯಜಮಾನರ ಉತ್ತರ ಸಿಧ್ಧವಾಗಿರುತ್ತಿತ್ತು. "ಯಾವುದೋ ಒಂದು ಹರಕೆ ಇದೆ ಕಣ್ರೋ ..ತಿರುಪತಿಗೆ ಹೋಗಿ ಮುಡಿಕೊಟ್ಟು ಬರುತ್ತೇನೆ." ಇವರ ಮಾತನ್ನು ನಂಬುವಷ್ಟು ದಡ್ಡರೇ ..ಯಜಮಾರ ಆಪ್ತ ಮತ್ತು ಗುಪ್ತ ಸ್ನೇಹಿತರು? ಆ ನಾಪಿತನ ಇಂಟರ್ವ್ಯೂ ಮಾಡಿ ಇವರ ನೀಳವೇಣಿಯ ಹಿಂದಿನ ಎಲ್ಲ ರಹಸ್ಯವನ್ನು ತಿಳಿದುಕೊಂಡು “ಹರಕೆ ಯಾವಾಗ ತೀರಿಸೋದು ನೀನು“ ಎಂದು ಮತ್ತೆ ರೇಗಿಸ ತೊಡಗಿದ್ದರು.

ಎಂದಾದರೊಮ್ಮೆ ಮನೆಗೆ ಬರುವ ನನ್ನ ಗೆಳತಿಯರೆದಿರು ಇವರು ಜುಟ್ಟು ಕಟ್ಟಿಕೊಂಡ ವಿಚಿತ್ರ ವೇಷದಲ್ಲಿ ಪ್ರತ್ಯಕ್ಷವಾದಾಗ "ಕರೋನಾ ಟೈಮು ಸಲೂನಿಗೆ ಹೋಗಲು ಹೆದರಿಕೆ! ಅದೇ ಕಾರಣಕ್ಕೇ ಇಷ್ಟುದ್ದ ಕೂದಲು ಬೆಳೆದಿದೆ."ಎಂದು ಅವರಿಗೆಲ್ಲ ಸಬೂಬು ಹೇಳಿದೆ.! ಅವರೇನೋ ನನ್ನ ಮಾತನ್ನು ನಂಬಿದರು.

ಒಮ್ಮೆ ಇದ್ದಕ್ಕಿದ್ದಂತೆ ನಮ್ಮ ಅತ್ತೆಯುವರ ಸೋದರತ್ತೆ ಗೋದಕ್ಕ ಯಶವಂತಪುರದಿಂದ ಬಂದಿಳಿದರು. ವಯಸ್ಸು ತೊಂಭತ್ತು..ಕೆಂಪು ಸೀರೆ ಮಡಿಹೆಂಗಸು.! ಯಜಮಾನರ ಬೆಳೆದ ಕೂದಲು ನೋಡಲಾಗದೆ..ಅವರೇ ದುಡ್ಡು ಕೊಟ್ಟು ತಮ್ಮ ಪರ್ಸನಲ್ ಚೌರದವರನ್ನು ಕರೆದು ತಮ್ಮ ಜೊತೆ ಇವರದನ್ನೂ ಮಾಡಿಸಿದರು. ಯಜಮಾನರ ಗೆಳೆಯರ ಗೇಲಿ ಮತ್ತೆ ಶುರುಯಾಯಿತು . "ಲೋ, ತಿರುಪತಿ ಪ್ರವಾಸ ಚೆನ್ನಾಗಾಯ್ತಾ ! ...ಪ್ರಸಾದ ಎಲ್ಲಿ?" ಈಗ ಅತ್ತೆಯ ಸೋದರತ್ತೆ ಗೋದಕ್ಕನನ್ನು ನಮ್ಮನೆಯಲ್ಲೇ ಇರಿಸಿಕೊಂಡಿದ್ದೇನೆ. ಕೂದಲು ಬಿಟ್ಟುಕೊಂಡಿದ್ದ, ಪಂಜಾಬಿ ಗಾಯಕ ಬಾಲಿಬ್ರಹ್ಮ ಭಟ್ಟನಂತೆ ಕಾಣುತ್ತಿದ್ದ ನನ್ನ ಯಜಮಾರು ಈಗ ನೋಡಲು ಥೇಟ್ ಅನುಪಮ ಖೇರ್ ಆದರು ! ತಮ್ಮ ಬೋಳು ತಲೆಯನ್ನು ದಿನಕ್ಕೆರಡು ಬಾರಿ ಸವರಿಕೊಂಡು, ಹಜಾಮತಿಯ ಖರ್ಚು ಉಳಿಯುತ್ತೆ ಎಂದು ಮನದಲ್ಲಿ ಸಂತಸಪಟ್ಟರು .

ಆದರೆ ಇದ್ದಕ್ಕಿದ್ದಂತೆ ಒಂದು ಮುಂಜಾನೆ ..ಯಜಮಾನರ ಬೋಳು ತಲೆಯ ಮೇಲೆ ನಾಲ್ಕು ಕೂದಲು ಮೊಳಕೆಯೊಡೆಯಬೇಕೇ? ಕೆಲ ಮಹಿಳೆಯರು ಕೇಶವರ್ಧನೆಗೆ..ಯಾವ ಪ್ರಕಾರದ ಯೋಗಾಭ್ಯಾಸ ಮಾಡಬೇಕು ..?ಎಂದು ಬಾಬಾ ಅವರನ್ನು ದೂರದರ್ಶನ ಯೋಗ ಕಾರ್ಯಕ್ರಮದಲ್ಲಿ ಕೇಳಿದಾಗ ಅವರು ಕೆಲ ಯೋಗಾಭ್ಯಾಸ ಹೇಳಿಕೊಟ್ಟು, ಇದನ್ನು ನಿರಂತರವಾಗಿ ಕೂತಾಗ ನಿಂತಾಗ ಮಾಡುತ್ತಿರಿ. ಕೂದಲು ಬೊಂಬಾಟ್ ಬೆಳೆಯುತ್ತೆ, ಎಂದು ಹೇಳಿದ್ದರು. ಅಂತೂ ಇದರ ಪರಿಣಾಮವೋ ಏನೋ ನಮ್ಮ ಯಜಮಾನರ ತಲೆಯ ಮೇಲೆ ನಾಲ್ಕು ಕೂದಲು ಉಗಮವಾಗಿ ಮಿರಿಮಿರಿ ಮಿಂಚಲಾರಂಭಿಸಿತು . ಕೂತಾಗ ನಿಂತಾಗ ನನ್ನ ಮೇಲೆ ಹಲ್ಲು ಕಡಿಯುತ್ತಿದ್ದ ನಮ್ಮವರು ಉಗರು ಕಡಿಯತೊಡಗಿದರು, ಸಾರಿ ಉಗುರು ಒಂದನ್ನೊಂದು ಉಜ್ಜತೊಡಗಿದರು.ಅದರ ಫಲವಾಗಿ ಬಂದ ನಾಲ್ಕು ಕೂದಲನ್ನು ವಿಶೇಷ ಪ್ರೀತಿಯಿಂದ ನೀಟಾಗಿ ಬಾಚಿ ಇಡತೊಡಗಿದ್ದರು.

ಒಮ್ಮೆ ಇದ್ದಕ್ಕಿದ್ದಂತೆ ಹಳೆ ನಾಪಿತ ಪ್ರತ್ಯಕ್ಷನಾದನು .ಇವರಿಗೆ ತಲೆಯಮೇಲೆ ನಾಲ್ಕು ಕೂದಲು ವಿಜೃಂಭಿಸಿದ್ದು ಅವನಿಗೆ ಹೇಗೆ ತಿಳಿಯಿತೋ ತಿಳಿಯದು "ಸಾರ್, ಕರೋನಾ ಟೈಮ್ ನಂತರ ಇನ್ನು ಸಹ ಬಿಜಿನೆಸ್ಸೇ ಕುದುರಿಲ್ಲ ನನ್ನ ರೆಗ್ಯುಲರ್ ಗಿರಾಕಿಗಳು ಕೂಡ ಮೊಬೈಲಿನಲ್ಲಿ ಚೌರ ಸೇವೆಗಳನ್ನು ಬುಕ್ಕ್ ಮಾಡಿಕೊಂಡು ನಮ್ಮ ಹೊಟ್ಟೆ ಮೇಲೆ ಕಲ್ಲು ಹಾಕಿದ್ದಾರೆ ಸಾರ್ . ಮನೆ ಸಂಸಾರ ನಡೆಯೋದೇ ಕಷ್ಟವಾಗಿದೆ. ನಿಮ್ಮಂಥ ನಾಲ್ಕು ಕೂದಲಿನವರು..ನಮಗೆ ಕರೆಯದೇ ಹೋದರೆ, ನಮ್ಮ ಗತಿಯೇನು? ಈಗ ಹೇಗೂ ಬಂದಿದ್ದೇನೆ ..ಆ ನಾಲ್ಕು ಕೂದಲನ್ನು ಬೋಳಿಸಿಯೇ ಬಿಡುತ್ತೇನೆ"ಎಂದು ಅಲವತ್ತುಕೊಂಡನು. ಯಜಮಾನರು.. ತಡಮಾಡದೆ ಅವನಿಗೆ ತಮ್ಮ ತಲೆಯೊಪ್ಪಿಸಿ ಕುಳಿತರು. ಕೆಲಸ ಮುಗಿಸಿ ನಾಪಿತ ದುಡ್ಡು ಕೇಳಿದಾಗ, ಮುಂದಿನ ಸಲ ಇನ್ನು ಜಾಸ್ತಿ ಕೂದಲು ಬೆಳೆದಿರುತ್ತೆ, ಆಗ ಬಾ ..ಒಟ್ಟಿಗೇ ಕೊಡುತ್ತೇನೆ ಎಂದು ತಮ್ಮ ಜಿಪುಣ ಬುದ್ದಿಯನ್ನು ಪ್ರದರ್ಶಿಸುತ್ತಾ ಮತ್ತೆ ಚುರುಕು ಮತಿಯಾದರು.

ನಾಪಿತ ಪಾಪ ಮತ್ತೆ ಇವರೇ ಮೇಲೆ ಕುಪಿತನಾಗಿ ಕುಳಿತಿದ್ದಾನೆ ! ■

# ಹೊಸ ಚಪ್ಪಲಿ ರಾದ್ಧಾಂತ

**● ಅರವಿಂದ ಜೋಶಿ**

ಹದಿಮೂರರ ಹರೆಯದ ಶೀನಿ, ಬೇಸಿಗೆ ರಜೆ ಬಂತೆಂದರೆ ಸಾಕು ಹತ್ತಿರ ಊರಲ್ಲಿರುವ ತನ್ನ ಅಜ್ಜಿ ಮನೆಗೆ  ಬರುವ ರೂಢಿ ಮಾಡಿಕೊಂಡಿದ್ದ.ಆ ದಿನ ಕೂಡ ಆತ ಅಜ್ಜಿಯ ಮನೆಗೆ ಬಂದಿದ್ದವ ಬೆಳಗಿನ ಉಪಹಾರ ಪೂರೈಸಿ, ಮನೆ ಅಂಗಳದಲ್ಲಿ ಆಟ ಆಡುತ್ತಿದ್ದ. ಆಗ ಪೇಟೆಗೆ ಹೋಗಿದ್ದ ಆತನ ಸಹೋದರ ಮಾವ ಹೊಸ ಚಪ್ಪಲಿ ಧರಿಸಿಕೊಂಡು ಬಂದಿರುವುದನ್ನು ಕಂಡಾಗ, ಆತನ ಮನದೊಳಗೆ ತಾನೂ ಏಕೆ ಆ ಚಪ್ಪಲಿ ಧರಿಸಬಾರದು ಎನ್ನುವ ಆಸೆ ಚಿಗುರಿತು. ಚಪ್ಪಲಿಗಳನ್ನು ಆಚೆ ಬಿಟ್ಟು ಮನೆ ಒಳಗೆ ಆತನ ಸಹೋದರ ಮಾವ ಹೋಗುತ್ತಿದ್ದಂತೆ, ಜಗುಲಿ ಮೇಲೆ ಕುಳಿತಿದ್ದ ಶೀನ, ಛಂಗನೆ ಹಾರಿ ಮಾವನ ಚಪ್ಪಲಿ ಹೆಕ್ಕಿಕೊಂಡು ಖುಷಿ ಪಡತೊಡಗಿದ. ಯಾಕೆಂದರೆ ಈ ತನಕ ಆತ ಯಾವ ಚಪ್ಪಲಿಯನ್ನೂ ತೊಟ್ಟಿರಲಿಲ್ಲ. ಶೀನಿ ಚಪ್ಪಲಿಗಳನ್ನೇನೋ ತೊಟ್ಟ ಆದರೆ ತಾನು ಹೋಗುವುದಾದರೂ ಎಲ್ಲಿ? ಎಂದು ಯೋಚಿಸುತ್ತಿದ್ದವನಿಗೆ ಇಲ್ಲೇ ಹತ್ತಿರದ ದೇವಸ್ಥಾನಕ್ಕೆ ಹೋಗಿ ಬಂದರಾಯಿತು ಎಂದೆನಿಸಿ  ರಸ್ತೆಗೆ ಇಳಿದು ಗಮ್ಮತ್ತಿನಲ್ಲಿ ಹೊರಟ. ಆತನ ಮನೆಯಿಂದ ಐದನೇ ಮನೆಯಲ್ಲಿದ್ದ ಭಾಗಜ್ಜಿ ಜಗುಲಿ ಮೇಲೆ ಕುಳಿತಿದ್ದವರು ಈತನನ್ನು ಗಮನಿಸಿ "ಏನೋ..ಶೀನಾ. ಹೊಸ ಚಪ್ಪಲಿನಾ?" ಎಂದು ಕೇಳಿದ್ದಕ್ಕೆ "ಹಾಂ ಅಜ್ಜಿ ಹೌದು" ಎಂದಷ್ಟೇ ಉತ್ತರಿಸಿ  ದೇವಸ್ಥಾನದ ದಾರಿ ಹಿಡಿದ. ಕೆಲ ನಿಮಿಷಗಳ ನಂತರ ದೇವಸ್ಥಾನದ ಎದುರು ಬರುತ್ತಿದ್ದಂತೆ ಆತನ ಕಣ್ಣಿಗೆ "ಇಲ್ಲಿ ಚಪ್ಪಲಿ ಕಳ್ಳರಿದ್ದಾರೆ ಎಚ್ಚರ" ಎಂಬ ದಪ್ಪಕ್ಷರದ ಬೋರ್ಡ ಕಂಡಿತು.

ಆಗ ಆತ ಮನದಲ್ಲಿ "ಓಹ್ಹೋ..ಹೀಗೋ ಸಮಾಚಾರ?"ಎಂದುಕೊಳ್ಳುತ್ತ ಆ ದೇವಸ್ಥಾನದ ಕಾಂಪೌಂಡಿನ ಎಡ ತುದಿಯಲ್ಲಿದ್ದ ತೆಂಗಿನ ಮರದ ಬಳಿ ಹೋಗಿ ಎಡಕಾಲಿನ ಚಪ್ಪಲಿ ಕಳಚಿ ಅಲ್ಲಿ ಇಟ್ಟು, ಬಲಗಾಲಿನ ಚಪ್ಪಲಿಯನ್ನು ಕೈಯಲ್ಲಿ ಹಿಡಿದು ದೇವಸ್ಥಾನದ ಬಲ ತುದಿಯಲ್ಲಿದ್ದ ಇನ್ನೊಂದು ತೆಂಗಿನ ಮರದ ಅಡಿ ಇಟ್ಟು ದೀರ್ಘ ಉಸಿರೆಳೆಯುತ್ತ ದೇವಸ್ಥಾನದೊಳಗೆ ಪ್ರವೇಶಿಸಿದ. ಪ್ರದಕ್ಷಿಣೆ, ತೀರ್ಥ ಪಡೆದ ನಂತರ ಪ್ರಸಾದ ಪಡೆಯಲು ಸರದಿಯಲ್ಲಿ ನಿಂತು, ಅಂತೂ ಅರ್ಧ ಗಂಟೆ ಬಳಿಕ ಅದನ್ನು ಪಡೆದು ಆಚೆ ಬಂದು ಮೊದಲು ಎಡಬದಿ ತೆಂಗಿನ ಮರದ ಬುಡದಲ್ಲಿ ಇಟ್ಟ ಎಡಗಾಲಿನ ಚಪ್ಪಲಿ ಎತ್ತಿಕೊಂಡು, ಬಲಗಾಲಿನದನ್ನು ತೆಗೆದುಕೊಳ್ಳಲು ಬಲ ತುದಿಯಲ್ಲಿದ್ದ ತೆಂಗಿನ ಮರದ ಬಳಿ ಬಂದು ನೋಡುತ್ತಾನೆ ಅದು ಅಲ್ಲೇಲ್ಲೂ ಆತನ ಕಣ್ಣಿಗೆ ಬೀಳಲಿಲ್ಲ. ಗಾಬರಿ ಹುಟ್ಟಿಕೊಂಡಿತು. ಒಂದಲ್ಲ ಎರಡಲ್ಲ ನಾಲ್ಕೈದು ಬಾರಿ ಆ ಮರದ ಸುತ್ತ ಮುತ್ತ ಹುಡುಕಿದರೂ ಪ್ರಯೋಜನವಾಗಲಿಲ್ಲ. ಮನದತುಂಬ ಭಯ ಅಡವರಿಸಲಾರಂಭಿಸಿತು, ಮನೆಯಲ್ಲಿ ಗೊತ್ತಾದರೆ ಬಾಸುಂಡೆ ಗ್ಯಾರಂಟಿ ಎಂದು ನೆನೆಸಿಕೊಂಡವನಿಗೆ ಕಣ್ಣು ತುಂಬಿ ಬಂದವು. ಅದೇ ಸ್ಥಿತಿಯಲ್ಲಿದ್ದವ ಅಲ್ಲಿದ್ದ ಒಬ್ಬರನ್ನು ವಿಚಾರಿಸಿದ. ಅವರಿಂದ ನಕಾರಾತ್ಮಕ ಉತ್ತರ ಬಂದಾಗ ಪೆಚ್ಚು ಮೋರೆ ಹಾಕಿಕೊಂಡು ಎಡಗಾಲಿನ ಚಪ್ಪಲಿಯನ್ನು ಕೈಯಲ್ಲಿ ಹಿಡಿದು ಕೊಂಡು ಅಲ್ಲಿಯೇ ಇದ್ದ ಕಟ್ಟೆ ಮೇಲೆ ಕುಳಿತ.

ಅತ್ತ ಆತನ ಮಾವ ಮತ್ತೆಲ್ಲೊ ಹೊರಟು ನಿಂತಾಗ ತನ್ನ ಹೊಸ ಚಪ್ಪಲಿ ಕಾಣದಿದ್ದಾಗ ಆತ ತುಸು ಕಸಿವಿಸಿಗೊಂಡು ಮತ್ತೆ ಮತ್ತೆ ಹುಡುಕಿದರೂ ಪ್ರಯೋಜನ ವಾಗಲಿಲ್ಲ. ಶೀನಿಗೇನಾದರೂ ಗೊತ್ತಾ ಎಂದು ಐದಾರು ಬಾರಿ "ಶೀನಿ––ಶೀನೀ.."ಎಂದು

ಕೂಗಿದ ಊಹೂಂ ಅದಕ್ಕೂ ಯಾವ ಜವಾಬು ಸಿಗಲಿಲ್ಲ. ಈತನ ಗಲಾಟೆ ಕಿರುಚಾಟ ಆಲಿಸಿದ ಆತನ ತಾಯಿ ಈಚೆಗೆ ಬಂದಾಗ ತನ್ನ ಹೊಸ ಚಪ್ಪಲಿ ಕಾಣೆಯಾಗಿರುವ ವಿಷಯ ಹೇಳಿದ.ಆಗ ಅವರು ಇದು ತಮ್ಮ ಮೊಮ್ಮಗನದೇ ಕೆಲಸ ಎಂದು ಅಂದಾಜಿಸಿ ಮಗನಿಗೆ ಶೀನಿಯ ಗೆಳೆಯರ ಮನೆಗೆ ಹೋಗಿ ವಿಚಾರಿಸಿ ಬಾ.. ಎಂದು ಸೂಚಿಸಿದರು. ಅವರು ತಿಳಿಸಿದಂತೆ ಶೀನಿಯ ಮಾವ ಅದೇ ಕೋಪದ ಭರದಲ್ಲಿ ದಾರಿಯುದ್ದಕ್ಕೂ "ಶೀನಿ..ಶೀನಿ.."ಎಂದು ಕೂಗುತ್ತ ಹೊರಟಾಗ, ತನ್ನ ಮನೆ ಜಗುಲಿ ಮೇಲೆ ಕುಳಿತಿದ್ದ ಭಾಗಜ್ಜಿಯನ್ನು ಕಂಡವ "ಅಜ್ಜೀ.. ನಮ್ಮ ಶೀನಿನ ನೋಡಿದ್ರಾ.."ಎಂದು ಕೇಳಿದಾಗ ಅವರು "ಸ್ವಲ್ಪ ಹೊತ್ತಿಗೆ ಮುಂಚೆ ಹೊಸಾ ಚಪ್ಪಲಿ ಹಾಕ್ಕೊಂಡು ದೇವಸ್ಥಾನದ ಕಡೆ ಹೋದ"ಎಂದು ಹೇಳಿದ್ದೇ ತಡ, ಲಗುಬಗೆಯಿಂದ ಆತ ಅತ್ತ ಧಾವಿಸಿದ.ಅಷ್ಟೊತ್ತಿಗೆ ದೇವಸ್ಥಾನದ ಬಾಗಿಲು ಹಾಕಿತ್ತು. ಅದನ್ನು ಕಂಡು ಮನದಲ್ಲಿ "ಎಲ್ಲಿ ಹೋದಾ..ಎಲ್ಲಿ.."ಎಂದು ಅಂದು ಕೊಳ್ಳುತ್ತ ಜೋರಾಗಿ" ಶೀನಿ..ಶೀನಿ..ಶೀನೀ.."ಎಂದು ಕೂಗುತ್ತ ಅಲ್ಲಿ ರೌಂಡ್ ಹೊಡೆಯುತ್ತಿದ್ದಾಗ, ಶೀನಿಗೆ ಆತನ ಧ್ವನಿ ಕೇಳಿಸಿ ಒಂದು ತರಹ ನಡುಕವೇ ಆರಂಭವಾಯಿತು.ಸ್ವಲ್ಪ ನಿಮಿಷದ ಬಳಿಕ ಆತನ ಸೋದರ ಮಾವ ಶೀನಿ ಕುಳಿತ ಜಾಗಕ್ಕೆ ಬಂದಾಗ ಜೋರಾಗಿ "ಮಾಮಾ..ಹೊಡಿಬ್ಯಾಡಾ.. ನಾನು ಎಚ್ಚರ ವಹಿಸಿ ಚಪ್ಪಲಿ ಗಳನ್ನು ಬೇರೆ ಬೇರೆ ದಿಕ್ಕಿಗೆ ಇಟ್ಟಿದ್ದೆ ಆದ್ರೂ... ಎಂದು ವಿವರಣೆ ನೀಡುತ್ತಿದ್ದಂತೆ ಅವರು ಇದ್ದ ಜಾಗದ ಮುಂದೆ ಮೇಲಿಂದ ಧಪ್ಪ್ ಎಂದು ಕಳೆದು ಹೋದ ಬಲಗಾಲಿನ ಚಪ್ಪಲಿ ಬಿದ್ದಿರುವುದನ್ನು ಕಂಡು ಇಬ್ಬರೂ ಆಶ್ಚರ್ಯದಿಂದ ಕತ್ತೆತ್ತಿ ಮೇಲೆ ನೋಡಿದಾಗ ಎರಡು ಮಂಗಳ ಗಳು ಇವರನ್ನು ಕಂಡು ಹಲ್ಲು ಕಿರಿಯುತ್ತ ಅಲ್ಲಿಂದ ಜಂಪ್ ಮಾಡಿ ಓಡಿದವು. ಸಧ್ಯ ಕಳೆದು ಹೋದ ಚಪ್ಪಲಿ ದೊರೆತಿರುವುದನ್ನು ಕಂಡ ಶೀನಿ ಹಾಗೂ ಆತನ ಮಾವ ಸಮಾಧಾನದಿಂದ ಮನೆಗೆ ವಾಪಸ್ ಹೋದರು. ■

## ಆಹಾ...ಎಂಥಾ ಗೆಳತಿಯರು...!

ಮಧ್ಯರಾತ್ರಿ ಒಂದರ ಸಮಯ. ಗಂಡ ಹೆಂಡತಿ ಇಬ್ಬರು ಗಾಡನಿದ್ರೆಯಲ್ಲಿದ್ದರು. ಆಗ ಹಿಂದಿನ ಬಾಗಿಲು ಒಡೆದ ಹಾಗೆ ಶಬ್ದವಾದಾಗ ಹೆಂಡತಿಗೆ ಎಚ್ಚರವಾಗಿ ಗಂಡನನ್ನು ಎಬ್ಬಿಸಿದಾಗ, ಅವರು – ಏಯ್, ಯಾರೋ ಅದು ? ಎಂದು ಕೂಗುವಷ್ಟರಲ್ಲಿ ಇಬ್ಬರು ಕಳ್ಳರು ಅವರ ಕೋಣೆಗೆ ನುಗ್ಗಿ, ಅವರಿಬ್ಬರನ್ನು ಬಲವಂತದಿಂದ ಕಟ್ಟಿ ಹಾಕಿ, ಬಾಯಿಗೆ ಬಟ್ಟೆ ತುರುಕಿ, ಅವರ ಮುಂದೆಯೇ ಬೀರುವನ್ನು ಒಡೆದು, ನಗ ನಾಣ್ಯಗಳನ್ನು ಗಂಟು ಕಟ್ಟಿ ಹೊರಡುತ್ತಿದ್ದಾಗ, ಹೆಂಡತಿ ಏನೋ ಸನ್ನೆ ಮಾಡುವುದನ್ನು ನೋಡಿ, ಒಬ್ಬ ಕಳ್ಳನು ಆಕೆಯ ಹತ್ತಿರ ಬಂದು – ಏನಮ್ಮಾ ನಿಂದು ಗೋಳು ಎಂದು ಕೇಳಿ, ಬಾಯಿಯ ಬಟ್ಟೆ ತೆಗೆದಾಗ, ಆಕೆ ಮೆಲ್ಲಗೆ – ಏನಿಲ್ಲಾ, ನಮ್ಮ ಮನೆಯಲ್ಲೇನೋ ದೋಚಿ ಹೋಗ್ತಾಯಿದ್ದೀರಾ..., ಆದರೆ, ನಮ್ಮ ಎದುರು ಮನೆ ಮೀನಾಕ್ಷಿ ಮನೆಯಲ್ಲಿ, ನಮಗಿಂತ ಜಾಸ್ತಿ ಒಡವೆ, ನಗನಟ್ಟುಗಳು ನಿಮಗೆ ಸಿಗಬಹುದು, ಅಲ್ಲೂ ಹೋಗಿ ದೋಚಬಹುದು ನೀವು ಎಂದಾಗ....

ಆ ಕಳ್ಳ – ಅಯ್ಯೋ, ನಾನು ಏನು ಹೇಳಲಮ್ಮ ನಿಮ್ಮ ಅನ್ಯೋನ್ಯ ಗೆಳೆತನದ ಬಗ್ಗೆ? ಅವರು ಹೇಳಿದ್ದಕ್ಕೆ ಕಣಮ್ಮ ನಾವು ನಿಮ್ಮ ಮನೆಗೆ ದೋಚಲು ಬಂದದ್ದು ಎಂದಾಗ ಆಕೆಯ ಮುಖಕ್ಕೆ ಮಂಗಳಾರತಿ ಮಾಡಿದ್ಹಂಗೆ ಆಯಿತು....!

**ವಿ. ವಿಜಯೇಂದ್ರರಾವ್**

# ನಾಲ್ಕು ಸಣ್ಣ ಕಥೆಗಳು

ಕೆ.ಎಸ್.ಸೋಮೇಶ್ವರ

## ಮೊಸರು

ಒಂದಾನೊಂದು ಕಾಲದಲ್ಲಿ ಅಂದರೆ ಎಪ್ಪತ್ತರ ದಶಕಕ್ಕೂ ಮೊದಲು ಮೊಸರು ಎಂದರೆ ನಮ್ಮ ನಿಮ್ಮ ಮನೆಗಳಲ್ಲಿ ಒಂದಿಷ್ಟು ಹಾಲನ್ನು ಕಾಯಿಸಿ ಹೆಪ್ಪು ಹಾಕಿ ಏಳೆಂಟು ಘಂಟೆಗಳ ಕಾಲ ಅದರ ರಾಸಾಯನಿಕ ಕ್ರಿಯೆಗೆ ಬಿಟ್ಟರೆ ನಮಗೆ ದೊರೆಯುತ್ತಿತ್ತು ಮೊಸರು. ಇದು ಪ್ರೊ ಬಯೋಟಿಕ್ ಕೂಡ ಆಗಿದೆ. ಆ ಸಮಯದಲ್ಲಿ ಹಾಲು ಎಂದರೆ ಮನೆ ಮನೆಗೆ ದೊಡ್ಡ ಕ್ಯಾನ್‌ಗಳಲ್ಲಿ ತಂದು ಕೊಡುವುದಾಗಿತ್ತು. ನಮ್ಮ ಮನೆಗೆ ಬರುತ್ತಿದ್ದವ ಒಂದು ರೀತಿಯ ವಿಶಿಷ್ಠ ಕಂಠದಲ್ಲಿ 'ಹಾ...ಲು..ಮಾ...' ಎನ್ನುತ್ತಿದ್ದ. ಅವನ ಅನುಕರಣೆಯನ್ನು ನಾವುಗಳು ಹುಡುಗರು ನೀ..ರು..ಮಾ...' ಎನ್ನುತ್ತಿದ್ದೆವು. ಇದೇ ರೀತಿ ನಮ್ಮ ಅಕ್ಕನ ಮನೆ ಮೈಸೂರಿನಲ್ಲಿ ಹಾಲು ಕೊಡಲು ಬರುತ್ತಿದ್ದ ಗೌಳಿಗಿತ್ತಿ ಹೆಸರು ನಿಂಗಿ. ಅವರ ಮನೆಯವರಿಗೆ ಅವಳು 'ಕಣ್ಣೀರ ನಿಂಗಿ' ಯೇ ಆಗಿದ್ದಳು. ಮುಂದೆ ನಮ್ಮ ಬೆಂಗಳೂರು ಡೈರಿ ವಾಹನಗಳ ಬಾಟಲುಗಳ ಕಲಕಲ ಸದ್ದು. ಈಗ ಅದಕ್ಕೆ ಪೂರ್ಣ ವಿರಾಮವಾಗಿ ಪ್ಲಾಸ್ಟಿಕ್ ಚೀಲಗಳು ಬಂದಿವೆ. ಅದರ ಜೊತೆಯಲ್ಲೇ ವಿವಿಧ ಅಳತೆಯ ಮೊಸರಿನ ಪ್ಯಾಕೆಟ್‌ಗಳೂ ಸಿಗುತ್ತವೆ.. ಈಚೀಚೆಗೆ ಮನೆಯಲ್ಲಿ ಹೆಪ್ಪು ಹಾಕುವುದೆಂದರೆ ಅದೊಂದು ಅಪರೂಪದ ಸಂಗತಿಯೇ ಅನ್ನುವಂತಾಗಿದೆ. ಆಗ, ಹಾಲು ಕೊಡುವ ಗೌಳಿಗನ ಜೊತೆ ಅವನ ಹಸು ಕೂಡ ಬರುತ್ತಿತ್ತು. ಅದಕ್ಕೆ ವಾಕಿಂಗೋ ಅಥವಾ ನಗರ ದರ್ಶನವೋ ಅದನ್ನೇ ಕೇಳ ಬೇಕು. ಈತ ಮುಂದೆ ಮುಂದೆ ಬರುತ್ತಿದ್ದರೆ ಅದು ಮಾರು ದೂರದಲ್ಲಿ ನಿಧಾನವಾಗಿ ಹೆಜ್ಜೆ ಹಾಕುತ್ತ 'ಮೆಲ್ಲುತಿರಿ ಸವಿ ಹುಲ್ಲು' ಎನ್ನುವಂತೆ ಮೆಲುಕು ಹಾಕುತ್ತ ಬರುತ್ತಿತ್ತು. ಒಮ್ಮೆ ಗೌಳಿಗ ಒಂದು ಮನೆಯ ಮುಂದೆ ನಿಂತು ಅಮ್ಮಾ ಹಾಲು ಎಂದಾಗ ಇದು ಅವನನ್ನು ತಿರುಗಿ ನೋಡಿದ ರೀತಿ 'ಆಹಾ ಎಂತಹ ನೋಟವಯ್ಯಾ'. ಒಂದು ರೀತಿಯಲ್ಲಿ ಬಿರುಗಣ್ಣಿನಿಂದ ತಿರುಗಿ ನೋಡಿ ಇದೇನು ಈಗ ತಾನೇ ನನ್ನ ಕೆಚ್ಚಲನ್ನು ಬರಿದು ಮಾಡಿ ಮತ್ತೆ ಅದಕ್ಕೆ ಕೈ ಹಾಕುವ ಹುನ್ನಾರವೇ ಎನ್ನುವಂತಿತ್ತು.

ಈಗ ಮೊಸರಿನ ಕಥೆ. ಆಗಲೇ ಹೇಳಿದ ಹಾಗೆ ನಿಮಗೆ ಕಂಡಲ್ಲಿ ಮೊಸರು ಲಭ್ಯ. ನಮ್ಮ ಟಿವಿಗಳಲ್ಲಿ ಒಂದು ಜಾಹೀರಾತು ಬರುತ್ತದೆ. ಅದರಲ್ಲಿ ಒಂದು ಸಣ್ಣ ಬಾಲಕಿ ಕೊಳಲು ಊದುತ್ತ ಗೋವನ್ನು ಕರೆಯುತ್ತಾಳೆ. ಅವಳ ಕೊಳಲ ಗಾನ ಎಷ್ಟು ಮಧುರವೆಂದರೆ ಹಾಲು ಒಡೆದು ಮೊಸರಾಗಿ ಹಲವು ಪ್ಯಾಕೆಟ್ ಗಳಲ್ಲಿ ಅವಳ ಬುಟ್ಟಿಗೆ ಬಂದಿರುತ್ತದೆ. ಇದೆಲ್ಲ ಆ ಕಾಲದ ಬಾಲ ಕೃಷ್ಣನಿಗೆ ಗೊತ್ತಿರಲಿಲ್ಲ ಬಿಡಿ. ಇಲ್ಲದಿದ್ದರೆ ಅವನೇಕೆ ಬೆಣ್ಣೆ ಕದ್ದು ಗೋಪಿಕೆಯರ ಕೈಗೆ ಸಿಲುಕಿಕೊಂಡಿದ್ದಲ್ಲದೇ ತಾಯಿಗೆ 'ವಿಶ್ವರೂಪ ದರುಶನ' ಮಾಡಿಸುತ್ತಿದ್ದ!!.

ಇದೇನು ಮೊಸರ ಕಥೆ ಹೇಳ ಹೊರಟು, ಹಾಲು, ಡೈರಿ ಎಂತೆಲ್ಲ ಬಂದಿತು? ಹಸು ಹಾಲು ಕೊಟ್ಟರೆ ತಾನೇ ಮೊಸರು ಬೆಣ್ಣೆ, ತುಪ್ಪ ಎಲ್ಲ. ಅದೇ ಇವೆಲ್ಲಕ್ಕೆ ಮೂಲ ಅಲ್ಲವೇ.

## ಹಾರ್ಲಿಕ್ಸ್

ಈಗ ಇದೇ ಗೋ ಮಾತೆ 'ಹಾರ್ಲಿಕ್ಸ್ ಕೊಡ್ತಾಳಂತೆ. ನಿಮಗೆಲ್ಲ ಗೊತ್ತಿರುವಂತೆ ಮೊದಲಿಗೆ ಹಾರ್ಲಿಕ್ ಎಂದರೆ ಬೆಳೆಯುವ ಮಕ್ಕಳಿಗೆ ಮಾತ್ರ. ಎಷ್ಟೋ ಬಾರಿ ಮಕ್ಕಳು ಅದರ ಸವಿರುಚಿ ಸಹಿಸಲಾರದೇ ಉಗಿದ ಪ್ರಸಂಗಗಳೂ ಮನೆ ಮನೆಗಳಲ್ಲಿ ಮನೆ ಮಾತಾಗಿರುತ್ತದೆ. ಈಗ ಅದು ಸಣ್ಣಸ್ಯಾಚೆಟ್ ಗಳೇ ಅಲ್ಲದೇ ಮದರ್ಸ್ ಹಾರ್ಲಿಕ್ಸ್, ಗರ್ಭಿಣಿಯರ ಹಾರ್ಲಿಕ್ಸ್ ,ಹಿರಿಯ ನಾಗರೀಕರ ಹಾರ್ಲಿಕ್ಸ್. ಡಯಾಬಿಟೀಸ್ ಸ್ಪೆಷಲ್. ಲೈಟ್ ಹಾರ್ಲಿಕ್ಸ್ ಹೀಗೆ ಹಲವು ವಿಧ. ಇಲ್ಲೂ ಮತ್ತೆ ಅವುಗಳನ್ನು ಜೋಪಾನ ಪಡಿಸುವುದು ಹರ ಸಾಹಸವೇ ಸರಿ. ಏಕೆಂದರೆ, ಆ ಪುಡಿ ಅಲ್ಪ ಕಾಲದಲ್ಲಿ ಕಲ್ಲಿನಂತಾಗಿ ಬಿಡುತ್ತದೆ..

ಇದಕ್ಕೆ ನಮ್ಮ ತಮಿಳು ಸಿನಿಮ ಒಂದರಲ್ಲಿ ಸುಲಭ ಸೊಲ್ಯೂಷನ್ (ದ್ರವ) ಕೊಟ್ಟಿದ್ದಾರೆ. ಒಂದು ಸಿನಿಮಾದಲ್ಲಿ ನಾಯಕ ನಟ ಶಿವಾಜಿ ಪ್ರಭು ಎಲ್ಲರೂ ಹೇಳುವಂತೆ 'ಹಳ್ಳಿ ಗಮಾರ'. ಅವನು ತನ್ನ ಆಕಳಿಗೆ ಹುಲ್ಲು ಹಿಂಡಿ ತಿನ್ನಿಸಲು ಪ್ರಯಾಸ ಪಡುತ್ತಿರುತ್ತಾನೆ. ಪಾಪ, ಅದಕ್ಕೂ ಅದೇ ನೀರಸ ತಿಂಡಿ ಬೇಸರವಾಗಿರಬಹುದು. ಆಗ ಅಲ್ಲೊಬ್ಬ ಅವನ ಚಾಲಾಕಿ ಮಿತ್ರ ಪ್ರತ್ಯಕ್ಷ. ಅವನ ಸಲಹೆ ಏನೆಂದರೆ ಹಸುವಿಗೆ ಹಾರ್ಲಿಕ್ಸ್ ಪುಡಿಯನ್ನೇ ತಿನ್ನಿಸು. ಆಗ, ಅದು ನೇರ ತನ್ನ ಕೆಚ್ಚಲಿನಿಂದ 'ಹಾರ್ಲಿಕ್ಸೇ' ಕೊಡುತ್ತದೆ. ಇದಕ್ಕಾಗಿ ಅವನು ಎರಡು ಮೂರು ದೊಡ್ಡ ಡಬ್ಬಗಳಲ್ಲಿ ಹಾರ್ಲಿಕ್ಸ್ ಪುಡಿಯನ್ನೇ ತಂದು ಕೊಡುತ್ತಾನೆ.

ಇದೇನೋ ಸರಿ. ಆದರೆ, ಈಗಿನ ಮೇಲೆ ಹೇಳಿದ ಬಗೆ ಬಗೆಯ ಹಾರ್ಲಿಕ್ಸ್‌ಗೆ ಏನು ಮಾಡುವುದು ? 'ಕೌ ಮ್ಯಾಮ್' ನೇ ಕೇಳ ಬೇಕು. ಆ ಕಾಮಧೇನುವಿನ ಉತ್ತರ ಏನಿರಬಹದು ? ನಾನು ಕೊಡುವುದು ಒಂದೇ. ಅದನ್ನು ಸವಿಯುವಾಗ ನಿಮಗೆ ಬೇಕಾದ ಟೇಸ್ಟ್ ಅನ್ನು ನಾಲಿಗೆಯಲ್ಲಿ ಚಪ್ಪರಿಸಿ ಸವಿಯಿರಿ

ಇದನ್ನೆಲ್ಲ 'ವಿಜ್ಞಾನದ ಮುನ್ನಡೆ' ಎನ್ನೋಣವೇ !! ?

.

## ಮೊಟ್ಟೆ

ಇದೂ ಕೂಡ ನಮ್ಮಲ್ಲಿ ಅನೇಕರ ರಸನ ತಣಿಸುವ ಒಂದು ವಿಧ. ಇಲ್ಲಿ ಕೋಳಿ ಮೊಟ್ಟೆಯೇ ಅಂತ ನನ್ನ ನಂಬಿಕೆ. ಈ ಮೊಟ್ಟೆಗೂ ಜನುಮ ಜನುಮದ ಇತಿಹಾಸವಿದೆ 'ಮೊಟ್ಟೆ ಮೊದಲಾ ಕೋಳಿ ಮೊದಲಾ' ಎನ್ನುವುದಕ್ಕೆ ಯಾವ ಕೋಳಿ ತಜ್ಞರೂ ಉತ್ತರಿಸಲಾಗಿಲ್ಲ. ಹಿಂದೆ ಡೈನಾಸಾರ್ ಗಳೆಂಬ ದೈತ್ಯ ಪ್ರಾಣಿಗಳು ಇಡೀ ಭೂಮಂಡಲದಲ್ಲೆಲ್ಲ ತನ್ನ ಚಕ್ರಾಧಿಪತ್ಯ ಸ್ಥಾಪಿಸಿತ್ತು. ಇದರ ಒಂದೆರಡು ಜಾತಿಗಳ ಮೊಟ್ಟೆಗಳು ಒಂದು ಬಲಿತ ದೊಡ್ಡ ಹುಂಜದ ಅಳತೆ ಮತ್ತುತೂಕ ಇರುತ್ತಿತಂತೆ.

'ಒಂದು ಮೊಟ್ಟೆಯ ಕಥೆ' ಒಬ್ಬ ಸಿನಿಮಾ ಪ್ರೇಮಿ ತನ್ನ 'ತಲೆ' ಯನ್ನೇ ಹೀರೋ ಮಾಡಿ ನೋಡುಗರಿಗೆ ಕೊಟ್ಟಿದ್ದರು. ಇನ್ನು ನಮ್ಮ ಸಾಮಾಜಿಕ, ರಾಜಕೀಯ ಪ್ರತಿಭಟನೆಗಳಲ್ಲಿ ಮೊಟ್ಟೆ ಎಸೆತ, ಟೊಮ್ಯಾಟೊ ಎಸೆತ ಇವೆಲ್ಲ ಹಳೆಯ ಕಥೆ. ಎಷ್ಟೆಷ್ಟು ಮೊಟ್ಟೆಗಳು ಸರಿಯಾಗಿ ಥ್ರೋ ಮಾಡಿದ್ದಾರೋ ಅದರಲ್ಲಿ ಎಷ್ಟು ಮಂದಿ

ಅದನ್ನು ಕ್ಯಾಚ್ ಮಾಡಿ ಮನೆಯಲ್ಲಿ ರುಚಿಕರ ಆಮ್ಲೆಟ್ ಮಾಡಿಕೊಂಡಿದ್ದಾರೆಯೋ ಯಾರು ಲೆಕ್ಕ ಇಟ್ಟಿರುತ್ತಾರೆ. ಈಗಿನ ಕಾಲಕ್ಕೆ ಇಂತಹ ಮಂದಿಗೆ ಒಳ್ಳೆಯ ರೇಟ್ ಇದೆ. ನಮ್ಮಲ್ಲಿ ಹಲ ಬಗೆಯ ಕ್ರಿಕೆಟ್ ಪಂದ್ಯಾವಳಿಗಳು ನಡೆಯುತ್ತವೆ. ಅದರಲ್ಲಿ ಹನ್ನೆರಡನೆಯ ಆಟಗಾರನಾಗಲು ಇವರಲ್ಲೇ ಪೈಪೋಟಿ ಬೆಳೆಯಬಹುದು.

ಮೊನ್ನೆ ನಮ್ಮ ರಾಜ್ಯದಲ್ಲಿ ಒಬ್ಬ ಹಿರಿಯ ರಾಜಕಾರಿಣಿಗಳ ಕಾರಿಗೆ ಮೊಟ್ಟೆ ಎಸೆತ ಕಳೆದ ಒಂದು ವಾರದ ಬ್ರೇಕಿಂಗ್ ನ್ಯೂಸ್ ಇನ್ನೂ ಸಿಡಿಯುತ್ತಲೇ ಇದೆ ದೀಪಾವಳಿಯ ಪಟಾಕಿ ಸರದಂತೆ.

## ನಮ್ಮ ದಿನಚರಿ

ಇದು ಯಾರೂ ಬರೆಯದ ದಿನಚರಿ. ಆದರೆ ಈ ಕಾಲದಲ್ಲಿ ಎಲ್ಲರಲ್ಲೂ ಮೈಮನಗಳ ಸುಳಿಯಲ್ಲಿ ಈ ದಿನಚರಿ ಇದ್ದೇ ಇರುತ್ತದೆ. ದಿನಕರ ಹುಟ್ಟುತ್ತಾನೋ ಇಲ್ಲವೋ ಅದು ಪ್ರಶ್ನೆಯೇ ಅಲ್ಲ

ಕರಾಗ್ರೇ ವಸತೀ ಮೊಬೈಲು (ಲಕುಮಿ), ಕರಮೂಲೇ ಮೆಸೇಜುಗಳು (ಸರಸ್ವತಿ)

ವಾಟ್ಸಹ್ಯಾಪನಿಂಗ್‌ಗಳು. ಅದೆಲ್ಲ ಸರಿಸಿ ಕಣ್ಬಿಟ್ಟರೆ ದಿನಕರನ ಕಿಲಕಿಲ.

ಮಾಧ್ಯಾಹ್ನೇ ಬಣ್ಣದ ಚಿತ್ರ ವಿಚಿತ್ರಗಳು. ಆಹಾ ಎನ್ನುತ್ತ ಕತ್ತೆತ್ತಿದರೆ

ಮತ್ತೆ ದಿನಕರನ ಬಿಸಿ ನಗೆ

ಸಂಧ್ಯಾಕಾಲೇ ಓಟಿಟಿಗಳ ಥಕ ಥಕ. ಅದೇ ದಿನಕರ ಪಶ್ಚಿಮಕ್ಕೆ ಮುಖಮಾಡಿ ಟಾ ಟಾ ಮಾಡಿರುತ್ತಾನೆ.

ಇದು ದಿನಚರಿ. ಆಮೇಲೆ ಚಂದಿರ ಬಂದ. ಹುಣ್ಣಿಮೆ ರಾತ್ರಿ ......... ಅಂತ ಹಾಡು ಗುನುಗುನಿಸುತ್ತ ಇರಬೇಕು. ಆ ಹುಣ್ಣಿಮೆಯೋ ತಿಂಗಳಿಗೊಮ್ಮೆಯೇ ಬರುವುದು.

---

### ಭರವಸೆಯ ದಾರಿಯಲ್ಲಿ

ಏನು ಕಾದಿರಬಹುದು
ಹೊಸ ವರ್ಷದಲ್ಲಿ
ರಾಜಕಾರಿಣಿಗಳ ಆಶ್ವಾಸನೆಗಳು
ಸುರಿಯಬಹುದು ಮಳೆಯ ರೂಪದಲ್ಲಿ
ಚುನಾವಣಾ ವರ್ಷದಲ್ಲಿ
ಬರುವುದು ಎಲ್ಲ ಭರವಸೆಯ ರೂಪದಲ್ಲಿ
ಏನೇ ಬರ್‍ಲಿ ಏನೇ ಹೋಗ್ಲಿ
ನಗೆಯ ಸಿಂಚನ ಮಾತ್ರ ಅಲ್ಲಲ್ಲಿ
ಹರಿಯುತ್ತಿರಲಿ ಮಿಂಚಿನ ರೂಪದಲ್ಲಿ

# ಇಚಿಂಗ್ ಬಗ್ಗೆ ಬಿಚಿಂಗ್...

**● ನಳಿನಿ ಭೀಮಪ್ಪ**

ಮೊನ್ನೆ ಜಾತ್ರೆಗೆ ಹೋಗಿದ್ದಾಗ ಎಲ್ಲ ಹೆಣ್ಣುಮಕ್ಕಳು ಬಳೆ, ಸರ ಅಂತೆಲ್ಲಾ ಕೊಂಡುಕೊಳ್ಳಲು ಮುಗಿಬಿದ್ದಿದ್ದರೆ, ನಾನು ಬೆನ್ನು ಕೆರೆಯುವ ಕೋಲೊಂದನ್ನು ಕೊಂಡಾಗ ಗೆಳತಿಯರೆಲ್ಲ ನಗತೊಡಗಿದರು. ಅದರಲ್ಲಿ ನಗೋದೇನಿದೇ ಅಂತೀನಿ. ಬೆನ್ನು ಕಡಿತ ಶುರುವಾದರೆ ಎಮ್ಮೆಗಳು ಹೋಗಿ ಮರಕ್ಕೋ, ಉರುಟು ಗೋಡೆಗೋ ಉಜ್ಜಿದ ಹಾಗೆ ನಾವುಗಳು ಉಜ್ಜೋಕಾಗುತ್ತಾ? ಕೆಲವೊಮ್ಮೆ ಅವುಗಳು ತಮ್ಮ ಬಾಲವನ್ನೇ ಎತ್ತಿ ಎತ್ತಿ ಬಡಿದುಕೊಳ್ಳುತ್ತಿರುತ್ತವೆ. ಮನುಷ್ಯ ಏನು ಮಾಡಬೇಕು ಹೇಳಿ? ಬೆನ್ನನ್ನು ಹೊರತುಪಡಿಸಿ, ಕೈಗಳು ದೇಹದ ಯಾವ ಭಾಗವನ್ನು ಬೇಕಾದರೂ ಸಲೀಸಾಗಿ ತಲುಪಬಲ್ಲವು. ಮನುಷ್ಯನ ಕೈಗಳು ಇನ್ನೊಂದು ಅಡಿ ಉದ್ದವಿದ್ದರೆ ಚೆಂದಿತ್ತೇನೋ ಅಂತಾ ಆಗ ಅನಿಸದಿರಲಾರದು. ಹಾಗಾಗಿ ಬೆನ್ನು ಕಡಿತಕ್ಕೆ, ಕೋಲಿನ ತುದಿಗೆ ಕೆರೆಯುವುದಕ್ಕೆ ಅನುಕೂಲವಾಗುವಂತೆ, ಮುಂಗೈ ಅಂಟಿಸಿದ ವಿನ್ಯಾಸ ಅದೆಷ್ಟು ಬುದ್ದಿ ಉಪಯೋಗಿಸಿ ಮಾಡಿದ್ದಾರೆ ಎನ್ನಿಸಿತ್ತು. ಅದೇನೇ ಲೇವಡಿ ಮಾಡಿ, ನಕ್ಕರೂ ನಂತರ ಎಲ್ಲರೂ ಒಂದೊಂದು ಉಳ್ಳಗೆ ಕೊಂಡುಕೊಂಡರು ನೋಡಿ.

ಹಳೆಯ ಕಾಲದ ಅಜ್ಜಿಗಳೆಲ್ಲ ಬೆನ್ನು ಉಜ್ಜುವುದಕ್ಕೇ ಅಂತಾನೇ ಒಂದಿಷ್ಟು ತೆಂಗಿನ ನಾರು ಅಥವಾ ಉರುಟಾದ ಕಲ್ಲನ್ನು ಇಟ್ಟುಕೊಳ್ಳುತ್ತಿದ್ದರು. ಮನೆಯಲ್ಲಿರುವ ಚಿಳ್ಳೆಮಿಳ್ಳೆಗಳದು ಅವರ ಬೆನ್ನು ಉಜ್ಜುವ ಕೆಲಸ. 'ಹಾ ಜಾಣಾ, ಅಲ್ಲಿ ಉಜ್ಜು, ಇಲ್ಲಿ ಉಜ್ಜು' ಅಂತೆಲ್ಲ ಅವರ ಬೆನ್ನು ಮತ್ತು ಸೊಂಟದ ಟೈರ್‌ಗಳ ಸಂದಿಗೊಂದಿಗಳಲ್ಲೆಲ್ಲಾ ಉಜ್ಜಿಸಿಕೊಳ್ಳುವಾಗ, ಅವರ ಬಾಯಿಯಿಂದ 'ಅಹಾಹಹಹಾ' ಎನ್ನುವ ಶಬ್ದ ಹೊರಡುತ್ತಿತ್ತು. ಅದೇ ಅಜ್ಜನ ಬೆನ್ನನ್ನು ಮಾತ್ರ ತಾವೇ ಹೋಗಿ ಉಜ್ಜಿ ಬರುತ್ತಿದ್ದರು. ಕೆಲವು ಕಡೆ ಈಗಲೂ ಮದುವೆಯಾದ ಹೊಸತರಲ್ಲಿ ನವವಧುವಿಗೆ ಗಂಡನ ಬೆನ್ನನ್ನು ಉಜ್ಜಲು ಕಳಿಸುವ ಸಂಪ್ರದಾಯವಿದೆ.

ಇನ್ನು ತಲೆ ಕಡಿತದ ವಿಷಯಕ್ಕೆ ಬಂದರೆ, ಮನುಷ್ಯನಿಗೆ ಅದೇನೇ ಸಮಸ್ಯೆ ತಲೆದೋರಿದರೂ, ಸರಕ್ಕನೆ ಅದ್ಯಾಕೆ ಕೈಗಳು ಸೀದಾ ತಲೆಕೆರೆಯುವುದಕ್ಕೆ ಶುರು ಹಚ್ಚಿಕೊಳ್ಳುತ್ತವೆ ತಿಳಿಯುವುದಿಲ್ಲ. ಹೊಟ್ಟು, ಹೇನುಗಳು ಇವೆಲ್ಲ ತಲೆಯಲ್ಲಿ ಠಿಕಾಣಿ ಹೂಡಿ ಒಂದಿಷ್ಟು ಕಡಿತವನ್ನು ದಯಪಾಲಿಸುತ್ತವೆ. ಕೆರೆಯುತ್ತಿದ್ದರೆ ಅವುಗಳಿಂದ ಮುಕ್ತಿ ಸಿಗುತ್ತೋ ಇಲ್ಲವೋ ಗೊತ್ತಿಲ್ಲ, ತಲೆಕೂದಲುಗಳು ಕೈಗೆ ಬಂದು ನಿಧಾನವಾಗಿ ಮಂಡೇ ಎನ್ನುವುದು ನುಣ್ಣನೆಯ ಹಂಡೆಯಾಗುವುದು ಖಚಿತ. ಜೊತೆಗೆ ಬಿಳಿಕೂದಲುಗಳೂ ಕಡಿತಕ್ಕೆ ಕಾರಣ ಎಂದು ಹೇಳುವವರಿದ್ದಾರೆ. ಅದೇನೇ ಕಾರಣ ಇದ್ದರೂ ನೆತ್ತಿಯನ್ನು ಪರಪರ ಅಂತಾ ಗಾಯ ಆಗುವವರೆಗೂ ಕೆರೆದು, ಹೊಟ್ಟನ್ನೋ, ಹೇನನ್ನೋ ಉಗುರುಗಳ ಸಂದಿಯಲ್ಲಿ ಕಂಡಾಗ ಖುಷಿ ಪಡುವುದೂ ಉಂಟು.

ಮೈಕಡಿತವಂತೂ ಅನಾಹುತಕಾರಿ. ಇದಕ್ಕೆ ಇಂತಹ ಕಾಲವೇ ಅಂತಿಲ್ಲ. ಸರ್ವಋತುಗಳಲ್ಲೂ ಬೇಧಭಾವವಿಲ್ಲದೆ ವಕ್ಕರಿಸುತ್ತದೆ. ಬೇಸಿಗೆಯಲ್ಲಿ ಬಿಸಿಲಿಗೆ ಬೆವರು ಹೆಚ್ಚಾಗಿ, ಎಲ್ಲೆಲ್ಲಿಯೋ ನೀರು ಇಳಿದು ಕಡಿತ ಶುರುವಾಗುತ್ತದೆ. ಮಳೆಗಾಲದಲ್ಲಿ ಆರ್ದ್ರತೆ ಹೆಚ್ಚಾಗಿ ಗುಪ್ತ ಸಂದುಗೊಂದುಗಳಲ್ಲಿ ತಕಧಿಮಿ. ಇನ್ನು ಚಳಿಗಾಲದಲ್ಲಿ

ತಣ್ಣನೆಯ ಗಾಳಿ ಬಿಟ್ಟಾಗ ಮೈಕೈಯೆಲ್ಲ ಒಡೆದು ತುರಿಕೆ ಹೆಚ್ಚಾಗುವುದರಿಂದ ಸೂಡರ ಗಾಳಿ ಬಿಟ್ಟಿದೆ ಎಂದೇ ಹೇಳುವುದು. ಕರಕರ ಕೆರೆದು ಮೈಕೈ ಎಲ್ಲ ಬೂದಿ ಬಳಿದ ಹಾಗಾಗಿ, ಕೆಲವೊಮ್ಮೆ ರಕ್ತ ಒಸರುವುದೂ ಇದೆ. ಕೆಲವರಿಗೆ ಯಾವುದಾದರೂ ಆಹಾರ ಅಲರ್ಜಿಯಾದರೂ ನವೆ. 'ತ್ರೀ ಈಡಿಯಟ್ಸ್' ಸಿನೆಮಾದಲ್ಲಿ ಚಪಾತಿ ಲಟ್ಟಿಸುತ್ತಲೇ ಗಂಡನ ಎದೆಯ ಭಾಗದ ನವೆಯನ್ನು ಲಟ್ಟಣಿಗೆಯಿಂದಲೇ ಕೆರೆದು ಶಮನ ಮಾಡಿ, ಅದರಲ್ಲೇ ಮತ್ತೆ ಚಪಾತಿಯನ್ನು ಲಟ್ಟಿಸತೊಡಗುವುದನ್ನು ನೋಡುವಾಗ ನವೆ ತಡೆಯುವುದು ಅದೆಷ್ಟು ಕಷ್ಟ ಎನ್ನುವುದು ಮನವರಿಕೆಯಾಗುತ್ತದೆ. ಕೆಲವರಂತೂ ರಾತ್ರಿಯ ಹೊತ್ತು ಮಲಗಿದಾಗ ರಾಜಾರೋಷವಾಗಿ ನಿದ್ದೆಗಣ್ಣಿನಲ್ಲಿ ಎಲ್ಲೆಂದರಲ್ಲಿ ಕೈಹಾಕಿ, ಕೆರೆದುಕೊಳ್ಳಲು ಶುರುಹಚ್ಚಿಕೊಳ್ಳುತ್ತಾರೆ. ಪಕ್ಕದಲ್ಲಿದ್ದವರು ಎರಡೇಟು ಹಾಕಿದರೇನೇ ಸಾಮಾನ್ಯ ಸ್ಥಿತಿಗೆ ಬರುವುದು. ಈ ಕಡಿತಗಳೇ ದೇಹಕ್ಕೆ ಇಷ್ಟು ಕಿರಿಕಿರಿ ಎನಿಸಿದರೆ, ಇನ್ನು ಕಜ್ಜಿ, ಇಸುಬು, ಗಜಕರ್ಣ ಎಂದೆಲ್ಲ ಚರ್ಮರೋಗಗಳು ವಕ್ಕರಿಸಿದಾಗ ಆಗುವ ಕಡಿತವಂತೂ ಹೇಳೋಕಾಗಲ್ಲ, ತಾಳೋಕಾಗಲ್ಲ.

ಇದರ ಜೊತೆಗೆ ಸೊಳ್ಳೆ, ಇರುವೆ, ತಿಗಣೆ, ನೊಣ, ಗೊದ್ದದಂತಹ ಸಹಚರರು, ಪ್ರತೀದಿನ ಮನುಷ್ಯರನ್ನು ಚುಟುಚುಟು ಅಂತಾ ಕಡಿದು ಒಂದೆರಡು ಗ್ರಾಂ ರಕ್ತವನ್ನು ಹೀರಿ, ಕಡಿತವನ್ನು ದಯಪಾಲಿಸಿ ಪರಾರಿಯಾಗುತ್ತವೆ. ಯಾರಿಗಾದರೂ ಸಿಟ್ಟು ತರಿಸಿದರೆ 'ತಿಂದು ಕಡಿತತೇನಲೇ' ಎನ್ನುವುದು ಲೋಕಾರೂಢಿ. ಉತ್ತರ ಕರ್ನಾಟಕದ ಭಾಗದಲ್ಲಂತೂ 'ತಿಂಡಿ ಹತ್ತೇತೇನಲೇ' ಎಂದೇ ಜಗಳಕ್ಕೆ ಇಳಿಯುವುದು. ಕೈಕಡಿತ ಶುರುವಾದರೆ ಲಕ್ಷ್ಮೀ ಬರುತ್ತಾಳೆ ಎಂದೋ, ಕಾಲು ಕಡಿತ ಶುರುವಾದರೆ ಜಗಳ ಕಾಯುತ್ತಾರೆ ಎನ್ನುವ ನಂಬಿಕೆಗಳೂ ಇವೆ. ತುರಿಕೆ ಸೊಪ್ಪು ಎನ್ನುವ ಸೊಪ್ಪು ಮೈಗೆ ತಗುಲಿದರೆ ಕಡಿತವುಂಟಾಗಿ ಹೊಸ ಶೈಲಿಯ ನೃತ್ಯಪ್ರಾಕಾರಗಳೆಲ್ಲ ಮೈಮೇಲೆ ಆವಾಹನೆಯಾಗುವುದುಂಟು. ಹಾಗಾಗಿ ಮಾರುಕಟ್ಟೆಯಲ್ಲಿ ತುರಿಕೆಗಳಿಗೆಂದೇ ಅದೆಷ್ಟೋ ತರಹದ ಪೆಟ್ರೋಲಿಯಮ್ ಜೆಲ್ಲಿಗಳು, ಪೌಡರ್‌ಗಳು, ತುರಿಕೆ ಕಡಿಮೆ ಮಾಡುವ ಕ್ರೀಮುಗಳು ಲಭ್ಯವಿವೆ.

ಬಹುಶಃ ದೇವರು ಮನುಷ್ಯನ ದೇಹದ ಜೊತೆಗೆ ಕಡಿತವನ್ನೂ ಉಚಿತವಾಗಿ ಕೊಟ್ಟಿದ್ದಾನೆ ಅನ್ಸುತ್ತೆ. ಯಾವಾಗ ಎಲ್ಲಿ ಕಡಿತ ಶುರುವಾಗುತ್ತದೆಯೋ ಗೊತ್ತಾಗುವುದೇ ಇಲ್ಲ. ಚರ್ಮದ ಜೊತೆಗೆ ನವರಂಧ್ರಗಳಲ್ಲೂ ನವೆ ಉಂಟು ಮಾಡಿ, ಅದನ್ನು ತಾತ್ಕಾಲಿಕವಾಗಿ ಶಮನಗೊಳಿಸಲು ಉಗುರುಗಳೆಂಬ ಅಸ್ತ್ರ ಕೊಟ್ಟಿರಬಹುದೇನೋ ಎನ್ನುವ ಗುಮಾನಿ. ಕಡಿತದ ಹಿಂಸೆ ಅದೆಷ್ಟು ಕಾಡುತ್ತದೆ ಎಂದರೆ, ಕೆಲವೊಮ್ಮೆ ಅಕ್ಕ ಪಕ್ಕ ಯಾರಿದ್ದಾರೆ, ಯಾರಿಲ್ಲ ಎನ್ನುವುದನ್ನೂ ಸಹ ಗಮನಿಸದೆ ಶಮನಗೊಳಿಸುವುದರಲ್ಲಿ ನಿರತರಾಗುವುದುಂಟು. ಮತ್ತೂ ಕೆಲವರು ಯಾರೂ ಇರದ ಸ್ಥಳ ಹುಡುಕಿಕೊಂಡು ಹೋಗಿ ತುರಿಸಿಕೊಂಡು ಹಗುರಾಗುತ್ತಾರೆ. ಈ ಕಡಿತ ಎನ್ನುವುದು ಒಂದು ರೀತಿ ಕೆಮ್ಮು ಇದ್ದ ಹಾಗೆ, ತಡೆಯುವುದಕ್ಕೆ ಪ್ರಯತ್ನಪಟ್ಟಷ್ಟೂ ಹೆಚ್ಚಾಗುತ್ತಲೇ ಹೋಗುತ್ತದೆ. ಆದರೆ ತುರಿಸಿದ ಬಳಿಕ ಸ್ವರ್ಗಸಮಾನ ಸುಖ ಸಿಕ್ಕಂತೆ ಎನಿಸಿದರೂ, ನಂತರ ಇನ್ನೂ ಹೆಚ್ಚಾಗಿ ವ್ರಣವಾಗುವ ಸಾಧ್ಯತೆಗಳೇ ಹೆಚ್ಚು. ಅವು ಒಣಗಿ ಹಕ್ಕಳಿಕೆ ಕಟ್ಟಿದಾಗ ಮತ್ತೆ ಪರಪರ ಕಡಿತ ಶುರು. ಆದರೂ 'ತುರಿಕೆಯಲ್ಲಿ ಇರೋ ಸುಖ ಗೊತ್ತೇ ಇರಲಿಲ್ಲ' ಎನ್ನುವ ಮಾತು ಸರ್ವಜನಪ್ರಿಯ ಅಲ್ವಾ? ■